www.prajavani.net

prajavani.net | prajavani | prajavani | prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾವಾಣಿ**
ಈವರೆಗೆ ಅಫ್ಘಾನಿಸ್ತಾನವೇ ದೊಡ್ಡ ಪ್ರಮಾಣದಲ್ಲಿ ಅಫೀಮು ಉತ್ಪಾದನೆ ಮಾಡುತ್ತಿತ್ತು. ಆದರೆ ಮೊದಲ ಬಾರಿಗೆ ಮ್ಯಾನ್ಮಾರ್ ಅಫ್ಘಾನಿಸ್ತಾನವನ್ನು ಹಿಂದಿಕ್ಕಿದೆ.





| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 71,657 ▲ | 21,618 ▲ | ₹64,250 (ಬೆಂಗಳೂರು) ▼ | ₹73,400 (ಬೆಂಗಳೂರು) ▼ | 83.03 ▲ |



## ‘ನ್ಯಾಯ ಯಾತ್ರೆ’ಗೆ ಷರತ್ತುಬದ್ಧ ಅನುಮತಿ

ನವದೆಹಲಿ: ಜನವರಿ 14 ರಂದು ‘ಭಾರತ್ ಜೋಡೊ ನ್ಯಾಯ ಯಾತ್ರೆ’ಗೆ ಇಂಫಾಲ್‌ನಿಂದ ಚಾಲನೆ ನೀಡಲು ಮಣಿಪುರ ಸರ್ಕಾರ ಷರತ್ತುಬದ್ಧ ಅನುಮತಿ ನೀಡಿದೆ. ಆದರೆ, ಈ ಕಾರ್ಯಕ್ರಮದಲ್ಲಿ ಸೀಮಿತ ಸಂಖ್ಯೆಯ ಜನರು ಭಾಗವಹಿಸಬೇಕು. ಸಾರ್ವಜನಿಕ ಸಭೆ, ರ್‍ಯಾಲಿ ನಡೆಸಲು ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದೆ. 10

**ಚಿನಕುರಳಿ**
ಪ್ರಕಾಶ್ ಶೆಟ್ಟಿ




### ಅನರ್ಹತೆ ಕುರಿತ ತೀರ್ಮಾನ ಪ್ರಕಟಿಸಿದ ಸ್ಪೀಕರ್ ರಾಹುಲ್ ನಾರ್ವೇಕರ್

# ಶಿಂದೆ ಶಿವಸೇನಾ ಮೇಲುಗೈ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ದೇಶದ ರಾಜಕಾರಣದ ಮೇಲೆ, ಸರ್ಕಾರ ರಚನಾ ಪ್ರಕ್ರಿಯೆ ಮೇಲೆ ದಶಕಗಳ ಕಾಲ ಪ್ರಭಾವ ಬೀರುವ ಸಾಧ್ಯತೆ ಇರುವ ತೀರ್ಮಾನವನ್ನು ಪ್ರಕಟಿಸಿರುವ ಮಹಾರಾಷ್ಟ್ರ ವಿಧಾನ ಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು, ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಬಣವು ‘ನಿಜವಾದ ಶಿವಸೇನಾ’ ಎಂದು ಹೇಳಿದ್ದಾರೆ.

ಸ್ಪೀಕರ್ ತೀರ್ಮಾನದಿಂದಾಗಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ)ಗೆ ದೊಡ್ಡ ಪೆಟ್ಟು ಬಿದ್ದಂತಾಗಿದೆ. ‘ಶಾಸಕರ ಅನರ್ಹತೆಯನ್ನು ಕೋರಿದ್ದ ಎಲ್ಲ ಅರ್ಜಿಗಳನ್ನು (ಶಿಂದೆ ಬಣದ 16 ಶಾಸಕರು ಹಾಗೂ ಠಾಕ್ರೆ ಬಣದ 14 ಶಾಸಕರು) ತಿರಸ್ಕರಿಸಲಾಗಿದೆ. ಯಾವ ಶಾಸಕನನ್ನೂ ಅನರ್ಹಗೊಳಿಸುತ್ತಿಲ್ಲ’ ಎಂದು ನಾರ್ವೇಕರ್ ಹೇಳಿದ್ದಾರೆ.

2019ರ ವಿಧಾನಸಭಾ ಚುನಾವಣೆಯಲ್ಲಿ ಶಿವಸೇನಾ ಪಕ್ಷದ 56 ಅಭ್ಯರ್ಥಿಗಳು ಜಯಗಳಿಸಿದ್ದರು. ಸ್ಪೀಕರ್ ತೀರ್ಮಾನವು ಪ್ರಕಟವಾಗುತ್ತಿದ್ದಂತೆ, ಮುಖ್ಯಮಂತ್ರಿ ಶಿಂದೆ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಇತ್ತ, ಠಾಕ್ರೆ ಬಣದ ನಾಯಕರಾದ ಸಂಜಯ್ ರಾವುತ್ ಮತ್ತು ಆದಿತ್ಯ ಠಾಕ್ರೆ ಅವರು ತಾವು ಸ್ಪೀಕರ್ ತೀರ್ಮಾನವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವುದಾಗಿ ಹೇಳಿದ್ದಾರೆ.

ಬಾಳಾಸಾಹೇಬ್ ಠಾಕ್ರೆ ಅವರು 1966ರಲ್ಲಿ ಪಕ್ಷ ಸ್ಥಾಪಿಸಿದ್ದರು. ಆದರೆ, 2022ರ ಜೂನ್ 21ರಂದು ಪಕ್ಷವು ಹೋಳಾಯಿತು. ಇದು ಪಕ್ಷದ ಗತಿಯನ್ನು ಬದಲಿಸಿತು. ಈ ಪಕ್ಷವು ಸರಿಸುಮಾರು ಮೂರು ದಶಕಗಳ ಕಾಲ ಬಿಜೆಪಿಯ ಮಿತ್ರಪಕ್ಷವಾಗಿತ್ತು ಮತ್ತು ರಾಮ ಜನ್ಮಭೂಮಿ ಆಂದೋಲನದಲ್ಲಿ ಭಾಗಿಯಾಗಿತ್ತು.

11ನೇ ಪುಟ ನೋಡಿ



ಮುಂಬೈನಲ್ಲಿ ಬುಧವಾರ ಸ್ಪೀಕರ್ ತೀರ್ಮಾನ ಪ್ರಕಟವಾದ ಬಳಿಕ ಶಿವಸೇನಾ (ಶಿಂದೆ ಬಣ) ಶಾಸಕ ಭರತ್ ಗೋಗಾವಲೆ ಅವರಿಗೆ ಪಕ್ಷದ ಪ್ರಮುಖರು ಸಿಹಿ ತಿನ್ನಿಸಿ ಸಂಭ್ರಮಿಸಿದರು – ಪಿಟಿಐ ಚಿತ್ರ

**ಮುಖ್ಯಾಂಶಗಳು**
- ಯಾವ ಶಾಸಕನೂ ಅನರ್ಹ ಅಲ್ಲ
- ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಿರುವ ಠಾಕ್ರೆ ಬಣ
- ಶಿಂದೆ ಆಯ್ಕೆ ಕ್ರಮಬದ್ಧ ಎಂದ ಸ್ಪೀಕರ್

**‘ಇದು ಪಿತೂರಿ’**



ಮುಂಬೈ (ಪಿಟಿಐ): ಸ್ಪೀಕರ್ ರಾಹುಲ್ ನಾರ್ವೇಕರ್ ನೀಡಿರುವ ತೀರ್ಮಾನವು ‘ಪಿತೂರಿ’ ಎಂದು ಕರೆದಿರುವ ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್, ಇದು ಮಹಾರಾಷ್ಟ್ರದ ಜನರ ಪಾಲಿಗೆ ಕರಾಳ ದಿನ ಎಂದಿದ್ದಾರೆ.

11ನೇ ಪುಟ ನೋಡಿ



# ಎಸ್‌ಪಿಎಂಗೆ ಮತ್ತೆ ‘ಕೈ’ ಆಸರೆ?

ಪ್ರಜಾವಾಣಿ ವಾರ್ತೆ



ತುಮಕೂರು: ಲೋಕಸಭೆಗೆ ಸ್ಪರ್ಧಿಸಲು ತಯಾರಿ ನಡೆಸಿರುವ ಮಾಜಿ ಸಂಸದ ಹಾಗೂ ಬಿಜೆಪಿ ಮುಖಂಡ ಎಸ್.ಪಿ. ಮುದ್ದಹನುಮೇಗೌಡ ಅವರು ಕಾಂಗ್ರೆಸ್ ಮುಖಂಡರನ್ನು ಭೇಟಿಯಾಗಿ ಚರ್ಚಿಸಿರುವುದು ಜಿಲ್ಲೆಯ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಮುದ್ದಹನುಮೇಗೌಡ ಮತ್ತೆ ಕಾಂಗ್ರೆಸ್‌ಗೆ ಮರಳಲಿದ್ದಾರೆ ಎಂಬ ಚರ್ಚೆ ಶುರುವಾಗಿದೆ.

ಬೆಂಗಳೂರಿನಲ್ಲಿ ಮಂಗಳವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದ ಗೌಡರು, ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ, ಸಹಕಾರಿ ಸಚಿವ ಕೆ.ಎನ್.ರಾಜಣ್ಣ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ನಂತರ ಪಕ್ಷದ ಪ್ರಮುಖರನ್ನು ಭೇಟಿಯಾಗಿದ್ದಾರೆ.

ಲೋಕಸಭೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಜಿಲ್ಲೆಯ ಮುಖಂಡರ ಸಭೆ ಕರೆಯಲಾಗಿತ್ತು. ಜಿಲ್ಲೆಯ ಇಬ್ಬರು ಸಚಿವರು, ಶಾಸಕರು ಸಹಿತ ಪ್ರಮುಖ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆ ಆರಂಭಕ್ಕೂ ಮುನ್ನವೇ ಗೌಡರು ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿದ್ದಾರೆ.

ತುಮಕೂರು ಲೋಕಸಭೆ ಕ್ಷೇತ್ರದಿಂದ ಕಣಕ್ಕಿಳಿಸಲು ಕಾಂಗ್ರೆಸ್‌ನಲ್ಲೂ ಸದ್ಯಕ್ಕೆ ಸೂಕ್ತ ಅಭ್ಯರ್ಥಿ ಕಾಣುತ್ತಿಲ್ಲ. ಮುದ್ದಹನುಮೇಗೌಡ ಅವರನ್ನೇ ಮತ್ತೆ ಪಕ್ಷಕ್ಕೆ ಸೇರಿಸಿಕೊಂಡು ಅಭ್ಯರ್ಥಿಯನ್ನಾಗಿ ಮಾಡುವ ಬಗ್ಗೆ ಪಕ್ಷದ ವಲಯದಲ್ಲಿ ಚಿಂತನೆ ನಡೆದಿದೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲೇ ಕಾಂಗ್ರೆಸ್ ನಾಯಕರನ್ನು ಭೇಟಿಯಾಗಲು ಗೌಡರಿಗೆ ಜಿಲ್ಲೆಯ ಸಚಿವರು ಸಹಮತ ವ್ಯಕ್ತಪಡಿಸಿದ್ದರು ಎನ್ನಲಾಗಿದೆ. ಅವರ ಹೆಸರನ್ನೇ ಹೈಕಮಾಂಡ್‌ಗೆ ಶಿಫಾರಸು ಮಾಡುವ ಸಾಧ್ಯತೆಗಳಿವೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

**ಬಿಜೆಪಿಯಿಂದ ಸಿಗದ ಭರವಸೆ:** ಬಿಜೆಪಿಯಿಂದ ಮುದ್ದಹನುಮೇಗೌಡ ಟಿಕೆಟ್ ಬಯಸಿದ್ದರು. ಬಿಜೆಪಿ-ಜೆಡಿಎಸ್ ಮೈತ್ರಿಯಿಂದ ತುಮಕೂರು ಕ್ಷೇತ್ರವನ್ನು ಯಾರಿಗೆ ಬಿಟ್ಟುಕೊಡಬೇಕು ಎಂಬ ಬಗ್ಗೆ ಈವರೆಗೂ ನಿರ್ಧಾರವಾಗಿಲ್ಲ. ಒಂದು ಕಡೆ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರನ್ನೇ ಕರೆತರುವ ಪ್ರಯತ್ನ ನಡೆದಿದೆ ಎನ್ನಲಾಗಿದೆ. ಆದರೆ, ಎಚ್.ಡಿ.ದೇವೇಗೌಡ ಕುಟುಂಬದವರು ಸ್ಪರ್ಧಿಸುವುದಿಲ್ಲ ಎಂದು ಹೇಳಲಾಗುತ್ತಿದೆ.

ವಿ.ಸೋಮಣ್ಣ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಪ್ರಯತ್ನ ನಡೆಸಿದ್ದರು. ಕೊನೆಯ ಕ್ಷಣದಲ್ಲಿ ನಿರ್ಧಾರ ಬದಲಿಸಿ ಪಕ್ಷದಲ್ಲೇ ಉಳಿದುಕೊಳ್ಳಲು ಒಲವು ತೋರಿದ್ದಾರೆ ಎಂದು ಹೇಳಲಾಗುತ್ತಿದೆ. ಮೇಲಾಗಿ ಬಿಜೆಪಿಯಿಂದಲೇ ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎನ್ನಲಾಗುತ್ತಿದೆ.

ಇದೇ ಉದ್ದೇಶದಿಂದ ಈಚೆಗೆ ದೇವೇಗೌಡ ಮತ್ತು ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ಮನವೊಲಿಸಿದ್ದಾರೆ ಎಂಬ ಮಾತು ಕೇಳಿಬರುತ್ತಿವೆ. ಇದರ ನಡುವೆ ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಹೆಸರು ಸಹ ಜಿಲ್ಲೆಯಲ್ಲಿ ಮುನ್ನಲೆಗೆ ಬಂದಿದೆ.

ಬಿಜೆಪಿ-ಜೆಡಿಎಸ್ ಹೊಂದಾಣಿಕೆಯಿಂದ ಯಾರಿಗೆ ಕ್ಷೇತ್ರ ಬಿಟ್ಟುಕೊಡಬೇಕು ಎಂಬುದು ಸ್ಪಷ್ಟವಾಗದೆ, ಮತ್ತೆ ಅತಂತ್ರ ಪರಿಸ್ಥಿತಿ ನಿರ್ಮಾಣವಾದರೆ ಎಂಬ ಆತಂಕದಿಂದ ಮುದ್ದಹನುಮೇಗೌಡ ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ.

**ಮತ್ತೊಮ್ಮೆ ‘ಅತಂತ್ರ’ ಭೀತಿ**

ಮುದ್ದಹನುಮೇಗೌಡ ಅವರು ಸುದೀರ್ಘ ಕಾಲ ಕಾಂಗ್ರೆಸ್‌ನಲ್ಲೇ ಇದ್ದು, ಪಕ್ಷವನ್ನು ಕಟ್ಟಿ ಬೆಳೆಸಿದ್ದರು. ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿ ಸಂಸದರೂ ಆಗಿದ್ದರು.

ಕಳೆದ ಲೋಕಸಭೆ ಚುನಾವಣೆ ಸಮಯದಲ್ಲಿ ಕಾಂಗ್ರೆಸ್– ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು, ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಡಲಾಗಿತ್ತು. ಎಚ್.ಡಿ.ದೇವೇಗೌಡ ಸ್ಪರ್ಧಿಸಿ ಸೋತರು. ಹೊಂದಾಣಿಕೆಯಿಂದಾಗಿ ಹಾಲಿ ಸಂಸದರಾಗಿದ್ದ ಮುದ್ದಹನುಮೇಗೌಡ ಅವರಿಗೆ ಅವಕಾಶ ಕೈ ತಪ್ಪಿತ್ತು. ನಂತರವೂ ಪಕ್ಷದಲ್ಲಿ ಯಾವುದೇ ಅವಕಾಶ ಸಿಗಲಿಲ್ಲ. ಇದರಿಂದ ಬೇಸತ್ತು ಬಿಜೆಪಿ ಸೇರ್ಪಡೆಯಾಗಿದ್ದರು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕುಣಿಗಲ್ ಕ್ಷೇತ್ರದಿಂದ ಟಿಕೆಟ್ ಬಯಸಿದ್ದರೂ ಅವಕಾಶ ಸಿಗಲಿಲ್ಲ.

### ಅಯೋಧ್ಯೆಯಲ್ಲಿ ನಡೆಯಲಿರುವ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ

# ಕಾಂಗ್ರೆಸ್‌ನಿಂದ ಆಹ್ವಾನ ತಿರಸ್ಕಾರ

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿ ಇದೇ 22ರಂದು ನಡೆಯಲಿರುವ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ನೀಡಿರುವ ಆಹ್ವಾನವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕರಾದ ಸೋನಿಯಾ ಗಾಂಧಿ ಮತ್ತು ಅಧೀರ್ ರಂಜನ್ ಚೌಧರಿ ಅವರು ‘ಗೌರವಪೂರ್ವಕವಾಗಿ ತಿರಸ್ಕರಿಸಿದ್ದಾರೆ’ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

ಚುನಾವಣಾ ಲಾಭಕ್ಕಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಈ ಕಾರ್ಯಕ್ರಮವನ್ನು ‘ರಾಜಕೀಯ ಯೋಜನೆ’ಯಾಗಿ ಮಾಡಿಕೊಂಡಿವೆ ಎಂದು ಪಕ್ಷ ಆರೋಪಿಸಿದೆ.

ಉನ್ನತ ನಾಯಕರ ನಿರ್ಧಾರವನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮಂದಿರ ಪೂರ್ಣಗೊಳ್ಳದಿದ್ದರೂ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಅದನ್ನು ಉದ್ಘಾಟಿಸಲು ಹೊರಟಿರುವ ಹಿಂದಿನ ಉದ್ದೇಶವೇನು ಎಂದೂ ಪ್ರಶ್ನಿಸಿದ್ದಾರೆ.

‘ದೇಶದ ಲಕ್ಷಗಟ್ಟಲೆ ಜನರು ರಾಮನನ್ನು ಪೂಜಿಸುತ್ತಾರೆ. ಧರ್ಮವು ವೈಯಕ್ತಿಕ ವಿಚಾರ. ರಾಜಕೀಯ ಲಾಭಕ್ಕಾಗಿ ಅಪೂರ್ಣಗೊಂಡಿರುವ ಮಂದಿರದ ಉದ್ಘಾಟನೆಯನ್ನು ಬಿಜೆಪಿ,ಆರ್‌ಎಸ್‌ಎಸ್ ನಾಯಕರು ಕೈಗೊಳ್ಳುತ್ತಿದ್ದಾರೆ’ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಸುಪ್ರೀಂ ಕೋರ್ಟ್ 2019ರಲ್ಲಿ ನೀಡಿದ ತೀರ್ಪಿಗೆ ಬದ್ಧರಾಗಿ ಮತ್ತು ರಾಮನನ್ನು ಪೂಜಿಸುವ ಜನರ ಭಾವನೆಗಳನ್ನು ಗೌರವಿಸಿ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಮತ್ತು ಅಧೀರ್ ರಂಜನ್ ಚೌಧರಿ ಅವರು ಆಹ್ವಾನವನ್ನು ಗೌರವಪೂರ್ವಕವಾಗಿ ತಿರಸ್ಕರಿಸಿದ್ದಾರೆ. ಇದು ಆರ್‌ಎಸ್‌ಎಸ್, ಬಿಜೆಪಿಯ ಕಾರ್ಯಕ್ರಮ’ ಎಂದು ಹೇಳಿದ್ದಾರೆ.

ಇನ್ನೊಂದು ಸುದ್ದಿ 11

## ಕರವೇ ಅಧ್ಯಕ್ಷ ನಾರಾಯಣಗೌಡ ಜೈಲಿನಿಂದ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಮತ್ತು ಹಲಸೂರುಗೇಟ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ಅವರಿಗೆ ಷರತ್ತುಬದ್ಧ ಜಾಮೀನು ಸಿಕ್ಕಿದ್ದು, ಬುಧವಾರ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾದರು.

ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದ ಪ್ರಕರಣದಲ್ಲಿ ನಾರಾಯಣಗೌಡ ಅವರನ್ನು ಚಿಕ್ಕಜಾಲ ಪೊಲೀಸರು ಬಂಧಿಸಿದ್ದರು. ಆ ಪ್ರಕರಣದಲ್ಲಿ ಜಾಮೀನು ಲಭಿಸಿ, ಮಂಗಳವಾರ ಜೈಲಿನಿಂದ ಬಿಡುಗಡೆಯಾಗಿದ್ದರು. ಅದಾದ ಕೆಲವೇ ಗಂಟೆಗಳಲ್ಲಿ 2017ರಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಮತ್ತೆ ಅವರನ್ನು ಬಂಧಿಸಲಾಗಿತ್ತು.

ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿದ ಆರೋಪ ಸಂಬಂಧ ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನಾರಾಯಣಗೌಡ ನ್ಯಾಯಾಲಯದ ವಿಚಾರಣೆಗೆ ಗೈರಾಗಿದ್ದರು ಎಂಬ ಕಾರಣಕ್ಕೆ ಅವರ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಯಾಗಿತ್ತು. ಈ ಪ್ರಕರಣದಲ್ಲಿ ಮಂಗಳವಾರ ಅವರನ್ನು ಮತ್ತೆ ಬಂಧಿಸಲಾಗಿತ್ತು. ಅವರ ಪರ ವಕೀಲ ಎಲ್.ಜಿ.ಕುಮಾರ್, 30ನೇ ಎಸಿಎಂಎಂ ಕೋರ್ಟ್‌ಗೆ ಜಾಮೀನು ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಕೋರ್ಟ್ ಬುಧವಾರ ಮಧ್ಯಾಹ್ನ ₹1 ಲಕ್ಷ ಬಾಂಡ್, ಇಬ್ಬರು ಶ್ಯೂರಿಟಿ ಪಡೆದು ಜಾಮೀನು ನೀಡಿತ್ತು.

ಈ ಪ್ರಕ್ರಿಯೆ ವೇಳೆಯೇ ಹಲಸೂರು ಗೇಟ್ ಪೊಲೀಸರು ಕೊರೊನಾ ಸಂದರ್ಭದಲ್ಲಿ ಕಾನೂನು ಉಲ್ಲಂಘನೆ ಪ್ರಕರಣದಲ್ಲಿ ಜೈಲಿನಲ್ಲೇ ನಾರಾಯಣಗೌಡ ಅವರನ್ನು ಬಂಧಿಸಿ, ಸಂಜೆ 4 ಗಂಟೆ ಸುಮಾರಿಗೆ 1ನೇ ಎಸಿಎಂಎಂ ಕೋರ್ಟ್‌ಗೆ ಹಾಜರುಪಡಿಸಿದ್ದರು. ಇದೇ ವೇಳೆ ನಾರಾಯಣಗೌಡ ಪರ ವಕೀಲರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಕೋರ್ಟ್ ₹50 ಸಾವಿರ ಬಾಂಡ್ ಮತ್ತು ₹5 ಸಾವಿರ ನಗದು ಶ್ಯೂರಿಟಿ ಪಡೆದು ಜಾಮೀನು ಮಂಜೂರು ಮಾಡಿತು.

## ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಒಂದೆರಡು ಕಡೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ದಕ್ಷಿಣ ಒಳನಾಡಿನ ಕೊಡಗಿನಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ. ಮುಂದಿನ 48 ಗಂಟೆಗಳಲ್ಲಿ ರಾಜ್ಯದ ಹಲವು ಸ್ಥಳಗಳಲ್ಲಿ ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆ ಯಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ.ಕೆಲವು ಭಾಗ ಗಳಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ ಕಂಡು ಬರಲಿದೆ ಎಂದು ತಿಳಿಸಿದೆ

ಅನಿರ್ದಿಷ್ಟಾವಧಿ ಧರಣಿ; ಸೇವಾ ಭದ್ರತೆ ಒದಗಿಸುವಂತೆ ಸರ್ಕಾರಕ್ಕೆ ಬೋಧಕರ ಒತ್ತಾಯ

# ಶಿಕ್ಷಕರ ಮುಷ್ಕರ: ಸಂಕಷ್ಟದಲ್ಲಿ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲೆಯಲ್ಲಿ ಹೊರಗುತ್ತಿಗೆಯಲ್ಲಿರುವ ಶಿಕ್ಷಕರು ಶಾಲೆಗಳಿಗೆ ಹೋಗದೆ ಮೂರು ದಿನಗಳಿಂದ ಮುಷ್ಕರ ನಡೆಸುತ್ತಿದ್ದು, ಪರೀಕ್ಷಾ ಸಮಯದ ಹತ್ತಿರ ಬರುತ್ತಿರುವುದರಿಂದ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸೋಮವಾರದಿಂದ ಶಾಲೆಗಳಿಗೆ ಬರುತ್ತಿರುವ ವಿದ್ಯಾರ್ಥಿಗಳು, ಶಿಕ್ಷಕರಿಲ್ಲದೆ ವಾಪಸ್ ಹೋಗುತ್ತಿದ್ದಾರೆ. ಕೆಲವರು ರಸ್ತೆಗಳಲ್ಲಿ ತಿರುಗಾಡಿ ಕಾಲ ಕಳೆಯುತ್ತಿದ್ದಾರೆ. ಬಿಬಿಎಂಪಿ ಅಧಿಕಾರಿಗಳು ಹಾಗೂ ಶಿಕ್ಷಕರ ನಡುವಿನ ಸಮಸ್ಯೆಯಿಂದ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ.

‘ಬಿಬಿಎಂಪಿ ಶಾಲೆ–ಕಾಲೇಜುಗಳಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಹಿಂದಿನಂತೆಯೇ ಏಜೆನ್ಸಿ ಮೂಲಕ ಮುಂದುವರಿಸಬೇಕು. ‘ಹೊರಗುತ್ತಿಗೆ’ ಎಂಬುದನ್ನು ತೆಗೆದುಹಾಕಿ, ಬಿಬಿಎಂಪಿ ವತಿಯಿಂದೇ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಬೇಕು’ ಎಂದು ಆಗ್ರಹಿಸಿ, ಶಿಕ್ಷಕರು ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.

‘ಎಸ್‌ಡಿಎಂಸಿ ಮೂಲಕ ಶಿಕ್ಷಕರನ್ನು ನೇಮಿಸಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಹೀಗಾದರೆ ಹಲವು ವರ್ಷಗಳಿಂದ ಬೋಧನೆ ಮಾಡುತ್ತಿರುವ ನಮಗೆ ಕೃಪಾಂಕ ಸೇರಿದಂತೆ ಎಲ್ಲ ಸೌಲಭ್ಯವೂ ಹೋಗುತ್ತದೆ. ಅತಿಥಿ ಶಿಕ್ಷಕರೆಂದು ನೇಮಕ ಮಾಡಿಕೊಂಡರೆ ₹10 ರಿಂದ ₹12 ಸಾವಿರ ಕೊಡುತ್ತಾರೆ. ಇದರಿಂದ ಜೀವನ ಮಾಡಲು ಸಾಧ್ಯವೇ’ ಎಂದು ಬೃಹತ್ ಬೆಂಗಳೂರು ಮಹಾನಗರ ಹೊರಗುತ್ತಿಗೆ ಶಿಕ್ಷಕರ ಸಂಘದ ಅಧ್ಯಕ್ಷ ಎನ್. ಲೋಕೇಶ್ ಪ್ರಶ್ನಿಸಿದರು.

‘ಹೊರಗುತ್ತಿಗೆ ಆಧಾರದಲ್ಲಿ ಇದೀಗ ₹18ರಿಂದ ₹25 ಸಾವಿರದವರೆಗೆ ವೇತನ ಪಡೆಯುತ್ತಿದ್ದೇವೆ. ಅದಕ್ಕಿಂತ ಅರ್ಧ ವೇತನ ನೀಡಿದರೆ ನಮ್ಮ ಸ್ಥಿತಿ ಏನಾಗುತ್ತದೆ? ಅರ್ಹತೆ ಇರುವವರನ್ನು ನೇಮಿಸಿಕೊಳ್ಳುವುದಾಗಿ ನೀಡಿರುವ ಭರವಸೆಯನ್ನು ಲಿಖಿತವಾಗಿ ಕೊಡುತ್ತೇವೆ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದ್ದಾರೆ. ಆದರೆ, ಅದರಿಂದ ನಮಗೆ ಪ್ರಯೋಜನವಾಗದು’ ಎಂದರು.

‘ನಮಗೆ ಸೇವಾಭದ್ರತೆ ನೀಡಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಈ ಬೇಡಿಕೆಗಳನ್ನು ಈಡೇರಿಸದಿದ್ದರೆ ನಾವು ಕೆಲಸಕ್ಕೆ ಹಿಂದಿರುಗುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ನಮ್ಮಲ್ಲಿರುವ ಎಲ್ಲ ಶಿಕ್ಷಕರಿಗೂ ಅರ್ಹತೆ ಇದೆ. ಮುಖ್ಯ ಆಯುಕ್ತರು ತಪ್ಪು ಮಾಹಿತಿ ನೀಡುತ್ತಿದ್ದಾರೆ. ಅರ್ಹತೆ ಇಲ್ಲದವರನ್ನು ತೆಗೆಯಿರಿ ಎಂದು ನಾವೇ ಹಿಂದೆ ಪತ್ರ ನೀಡಿದ್ದೆವು. ಆದರೆ, ಇದೀಗ ಮತ್ತೆ ಅರ್ಹತೆ ಇಲ್ಲ ಎಂದು ಹೇಳುತ್ತಿರುವುದು ಸರಿಯಲ್ಲ’ ಎಂದು ಲೋಕೇಶ್ ಹೇಳಿದರು.



ಬಿಬಿಎಂಪಿ ಶಾಲೆಗಳ ಶಿಕ್ಷಕರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

### ಕಠಿಣ ಕ್ರಮ: ತುಷಾರ್ ಗಿರಿನಾಥ್

‘ಹೊರಗುತ್ತಿಗೆಯಲ್ಲಿರುವ ಶಿಕ್ಷಕರಿಗೆ ನಾವು ನೀಡಬೇಕಾದ ಎಲ್ಲ ಭರವಸೆಗಳನ್ನೂ ನೀಡಿದ್ದೇವೆ. ಅರ್ಹತೆ ಇರುವ ಎಲ್ಲ ಶಿಕ್ಷಕರಿಗೆ ಎಸ್‌ಡಿಎಂಸಿ ಮೂಲಕ ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ. ಅತಿಥಿ ಶಿಕ್ಷಕರಿಗಿಂತ ಹೆಚ್ಚಿನ ಗೌರವಧನ ನೀಡಲು ನಾವು ಪ್ರಯತ್ನಿಸು ತ್ತಿದ್ದೇವೆ. ಆದರೆ, ಅವರು ಹಿಂದಿನ ವ್ಯವಸ್ಥೆಯನ್ನೇ ಮುಂದುವರಿಸುವಂತೆ ಒತ್ತಾಯಿಸುತ್ತಿದ್ದಾರೆ. ಇದು ಸಾಧ್ಯವಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಮ್ಮ ವಿಶೇಷ ಆಯುಕ್ತರು, ಶಾಲೆಗಳಿಗೆ ಹೋಗಿ ಬೋಧಿಸುವಂತೆ ಶಿಕ್ಷಕರನ್ನು ಮನವಿ ಮಾಡಿಕೊಂಡಿದ್ದಾರೆ. ಅದನ್ನು ಒಪ್ಪದೆ, ಮುಷ್ಕರ ಮುಂದುವರಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ‘ಪ್ರಜಾವಾಣಿಗೆ’ ತಿಳಿಸಿದರು.




FARNAZ

## ಜರಗನಹಳ್ಳಿ: ಇಂದು ಅಹವಾಲು ಸ್ವೀಕಾರ

ಬೆಂಗಳೂರು: ನಾಗರಿಕರ ಸಮಸ್ಯೆಗಳು, ಕುಂದು-ಕೊರತೆಗಳನ್ನು ಆಲಿಸಲು ಬಿಬಿಎಂಪಿ ಎರಡನೇ ಹಂತದಲ್ಲಿ ಜನವರಿ11 ಹಾಗೂ ಜನವರಿ 16 ರಂದು ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮ-ವನ್ನು ಆಯೋಜಿಸಿದೆ.

ಕನಕಪುರ ರಸ್ತೆಯ ಜರಗನಹಳ್ಳಿ ಸರ್ಕಾರಿ ಶಾಲೆ ಆಟದ ಮೈದಾನದಲ್ಲಿ ಜನವರಿ11ರಂದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ನಡೆಯಲಿದೆ. ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ ಹಾಗೂ ಆನೇಕಲ್ ವಿಧಾನಸಭೆ ಕ್ಷೇತ್ರದ ಕೂಡ್ಲು ವಾರ್ಡ್‌ನ ನಾಗರಿಕರ ಅಹವಾಲು ಸಲ್ಲಿಸಬಹುದು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಪಶ್ಚಿಮ ವಲಯ ವ್ಯಾಪ್ತಿಯ ಗಾಂಧಿನಗರ, ಮಲ್ಲೇಶ್ವರ ಹಾಗೂ ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರಗಳ ನಾಗರಿಕರ ಅಹವಾಲು ಆಲಿಸಲು ಶೇಷಾದ್ರಿಪುರದ ಶಿರೂರ್ ಆಟದ ಮೈದಾನದ ಗುಂಡೂರಾವ್ ಮೆಮೊರಿಯಲ್ ಹಾಲ್ ಜನವರಿ 16 ರಂದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ನಡೆಯಲಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸ್ಥಳೀಯ ಶಾಸಕರು ಭಾಗವಹಿಸಲಿದ್ದಾರೆ.

ದಂಪತಿಗೆ ಬ್ಯಾಂಕ್ ಅಧಿಕಾರಿಗಳ ಕಿರುಕುಳ ಆರೋಪ

# ವಿಧಾನಸೌಧದ ಎದುರು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ದಂಪತಿ ವಿಧಾನಸೌಧದ ಎದುರು ಬುಧವಾರ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು ಅವರನ್ನು ಪೊಲೀಸರು ರಕ್ಷಿಸಿದರು.

ಜೆ.ಜೆ.ನಗರದ ಪಾದರಾಯನಪುರ ನಿವಾಸಿಗಳಾದ ಮಹಮದ್ ಮುನಾಯಿದ್ ಹಾಗೂ ಅವರ ಪತ್ನಿ ಶಾಯಿಸ್ತಾ ಬಾನು ಅವರು ಆತ್ಮಹತ್ಯೆಗೆ ಯತ್ನಿಸಿದವರು. ಇಬ್ಬರ ವಿರುದ್ಧ ಆತ್ಮಹತ್ಯೆಗೆ ಯತ್ನ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ದುರ್ವರ್ತನೆ ತೋರಿದ ಆರೋಪದಡಿ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಠಾಣಾ ಜಾಮೀನು ಪಡೆದು ಬಿಡುಗಡೆ-ಯಾಗಿದ್ದಾರೆ.

ಅಗರಬತ್ತಿ ತಯಾರಿಕಾ ಉದ್ಯಮ ನಡೆಸುತ್ತಿರುವ ಮಹಮದ್ ಮುನಾಯಿದ್ ಅವರು ಕುಟುಂಬ ಸಮೇತ ಪಾದರಾಯ-ನಪುರದಲ್ಲಿ ವಾಸವಾಗಿದ್ದಾರೆ. 2016ರಲ್ಲಿ ಚಾಮರಾಜಪೇಟೆಯ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಮನೆಯ ದಾಖಲೆಗಳನ್ನು ಅಡಮಾನ ಇಟ್ಟು, ₹ 50 ಲಕ್ಷ ಸಾಲ ಪಡೆದುಕೊಂ-ಡಿದ್ದರು. ಈ ಹಣವನ್ನು ಚನ್ನಪಟ್ಟಣದಲ್ಲಿ ಶುಂಠಿ ಬೆಳೆಯಲು ವ್ಯಯಿಸಿದ್ದರು.

‘ಶುಂಠಿ ಬೆಳೆಯಲ್ಲಿ ನಷ್ಟ ಉಂಟಾಗಿತ್ತು. ಆದರೂ ಬ್ಯಾಂಕ್‌ಗೆ ಹಂತ-ಹಂತವಾಗಿ ₹ 97 ಲಕ್ಷ ಪಾವತಿಸಿದ್ದೇನೆ. ಆದರೆ, ನಿಗದಿತ ಸಮಯಕ್ಕೆ ಬಡ್ಡಿ ಹಾಗೂ ಅಸಲು ಪಾವತಿಸಿಲ್ಲ ಎಂಬ ಕಾರಣಕ್ಕೆ ಅಧಿಕಾರಿಗಳ 2022ರಲ್ಲಿ ಮನೆಯನ್ನು ಜಪ್ತಿ ಮಾಡಿದ್ದು, ₹1.41 ಕೋಟಿಗೆ ಹರಾಜು ಮಾಡಿ, ಸಾಲಕ್ಕೆ ಜಮೆ ಮಾಡಿಕೊಂಡಿದ್ದಾರೆ. ಇದರಿಂದ ಮೋಸವಾಗಿದೆ. ನನಗೆ ನ್ಯಾಯಬೇಕು’ ಎಂದು ಮಹಮದ್ ಮುನಾಯಿದ್ ಆಗ್ರಹಿಸಿದರು.

ಬುಧವಾರ ಬೆಳಿಗ್ಗೆ ವಿಧಾನಸೌಧದ ಪೂರ್ವ ಭಾಗದ ಪ್ರವೇಶ ದ್ವಾರಕ್ಕೆ ಬಂದಿದ್ದ ದಂಪತಿ, ಸಚಿವ ಜಮೀರ್ ಅಹಮದ್ ಖಾನ್ ಭೇಟಿಗೆ ಪ್ರಯತ್ನಿಸಿ-ದ್ದರು. ಭದ್ರತಾ ಸಿಬ್ಬಂದಿ ವಿಧಾನಸೌಧ ಪ್ರವೇಶಕ್ಕೆ ಅವಕಾಶ ನೀಡಿರಲಿಲ್ಲ. ಆಗ ಬ್ಯಾಗ್‌ನಲ್ಲಿದ್ದ ಸೀಮೆಎಣ್ಣೆ ಬಾಟಲಿ ತೆಗೆದು ಮೈಮೇಲೆ ಸುರಿದುಕೊಳ್ಳಲು ಯತ್ನಿಸಿದ್ದರು. ಆಗ ಸೀಮೆಎಣ್ಣೆ ಬಾಟಲಿಯನ್ನು ಕಸಿದುಕೊಂಡ ಪೊಲೀಸರು ದಂಪತಿಯನ್ನು ವಶಕ್ಕೆ ಪಡೆದುಕೊಂಡರು.



ಆತ್ಮಹತ್ಯೆಗೆ ಯತ್ನಿಸಿದ ದಂಪತಿಯನ್ನು ವಶಕ್ಕೆ ಪಡೆದ ಪೊಲೀಸರು










# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


**ಹುಲಿವೇಷ**

ತಮಿಳುನಾಡಿನ ಸುಗ್ಗಿ ಹಬ್ಬ ‘ಪೊಂಗಲ್’ ಅಂಗವಾಗಿ ಚೆನ್ನೈನ ಕಾಲೇಜೊಂದರಲ್ಲಿ ವಿದ್ಯಾರ್ಥಿಯೊಬ್ಬ ಹುಲಿ ವೇಷದಲ್ಲಿ ಕಾಣಿಸಿಕೊಂಡಿದ್ದು ಹೀಗೆ




ವೈಟ್ ಟ್ಯಾಪಿಂಗ್: ವಿಳಂಬವೇ ಆತಂಕ 2B

ವಿಮಾನ ತಯಾರಿಕಾ ಕ್ಷೇತ್ರಕ್ಕೆ ಆದ್ಯತೆ: ಎಂ.ಬಿ. ಪಾಟೀಲ 4

ಮಗು ಕೊಲೆ ಪೂರ್ವ ಯೋಜಿತ ಕೃತ್ಯ: ಶಂಕೆ 3

2 ಕೋಟಿ ದಾಟದ ಮೆಟ್ರೊ ಪ್ರಯಾಣಿಕರ ಸಂಖ್ಯೆ 4


ಡೈರಿ ಸರ್ಕಲ್–ನಾಗವಾರ ಮಧ್ಯೆ ನಿರ್ಮಾಣಗೊಳ್ಳುತ್ತಿರುವ 13.8 ಕಿ. ಮೀ ಮಾರ್ಗದಲ್ಲಿ ಅಳವಡಿಕೆ

# ಮೆಟ್ರೊ ಸುರಂಗ: ಕಂಪನ ತಡೆಗೆ ತಂತ್ರಜ್ಞಾನ

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಮೆಟ್ರೊ ಸುರಂಗ ಮಾರ್ಗದಲ್ಲಿ ರೈಲು ಸಂಚರಿಸುವಾಗ ಉಂಟಾಗುವ ಕಂಪನವನ್ನು ತಗ್ಗಿಸಲು ಮಾಸ್ ಸ್ಪ್ರಿಂಗ್ ಸಿಸ್ಟಂ (ಎಂಎಸ್‌ಎಸ್) ತಂತ್ರಜ್ಞಾನವನ್ನು ಬಿಎಂಆರ್‌ಸಿಎಲ್ ಅಳವಡಿಸಲಿದೆ.

ನಗರದ ಅತಿ ಉದ್ದದ ಭೂಗತ ಹಳಿಯನ್ನು ಹೊಂದಿರುವ ಮೆಟ್ರೊ ಗುಲಾಬಿ ಮಾರ್ಗದಲ್ಲಿನ ಕೊಟ್ಟಿಗೆರೆ–ನಾಗವಾರ ನಡುವಿನ ಸುರಂಗ ಮಾರ್ಗದಲ್ಲಿ ಈ ತಂತ್ರಜ್ಞಾನ ಬಳಕೆಯಾಗಲಿದೆ.

ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ 21.26 ಕಿಲೋಮೀಟರ್ ಇದೆ. ಡೈರಿ ಸರ್ಕಲ್‌–ನಾಗವಾರದವರೆಗೆ 13.8 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಗೊಳ್ಳುತ್ತಿದೆ. ಇದೂ ಸೇರಿದಂತೆ ಮುಂದೆ ನಿರ್ಮಾಣವಾಗುವ ಎಲ್ಲ ಸುರಂಗ ಮಾರ್ಗಗಳಲ್ಲಿ ಎಂಎಸ್‌ಎಸ್ ಕಂಪನ ನಿರೋಧಕ ತಂತ್ರಜ್ಞಾನ ಅಳವಡಿಸಲಾಗುತ್ತಿದೆ. ಈಗ ಚಾಲ್ತಿಯಲ್ಲಿರುವ ಸುರಂಗಗಳ ನಿರ್ಮಾಣ ಕಾಮಗಾರಿ 2025ರ ಮಾರ್ಚ್ ಒಳಗೆ ಪೂರ್ಣಗೊಳ್ಳಲಿವೆ.

**ಅಳವಡಿಕೆ ಹೀಗೆ :** ಸುರಂಗ ನಿರ್ಮಿಸುವಾಗ ಕಂಪನ ಉಂಟಾಗುತ್ತದೆ. ಇದು ತಾತ್ಕಾಲಿಕವಾದುದು. ಕಾಮಗಾರಿ ಪೂರ್ಣಗೊಳ್ಳುವವರೆಗೆ ಮಾತ್ರ ಇರುತ್ತದೆ. ಆದರೆ, ಸುರಂಗದಲ್ಲಿ ರೈಲು ಸಂಚರಿಸುವಾಗ ಉಂಟಾಗುವ ಕಂಪನ ನಿರಂತರವಾಗಿರುತ್ತದೆ. ಮಾಸ್ ಸ್ಪ್ರಿಂಗ್ ಸಿಸ್ಟಂ ತಂತ್ರಜ್ಞಾನ ಅಳವಡಿಕೆಯಿಂದ ಕಂಪನವನ್ನು ತಡೆಗಟ್ಟಬಹುದಾಗಿದೆ.

ಸುರಂಗ ಮಾರ್ಗ ಕೊರೆದ ಬಳಿಕ ನೆಲಕ್ಕೆ ಕಾಂಕ್ರೀಟ್ ಹಾಕಲಾಗುತ್ತದೆ. ಅದರ ಮೇಲೆ ಮಾಸ್ ಸ್ಪ್ರಿಂಗ್ ಸಿಸ್ಟಂ ಪ್ಯಾಡ್‌ಗಳನ್ನು ಅಳವಡಿಸಲಾಗುತ್ತದೆ. ಅದರ ಮೇಲೆ ಮತ್ತೆ ಕಾಂಕ್ರೀಟ್ ಹಾಕಿ ಹಳಿ ಅಳವಡಿಸಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ಎಂಜಿನಿಯರ್ ಒಬ್ಬರು ಮಾಹಿತಿ ನೀಡಿದರು.

**ಮಣ್ಣಿನ ಪದರ ಅಧ್ಯಯನ:** ‘ಆಸ್ಪತ್ರೆಗಳು, ಸೂಕ್ಷ್ಮ ಕಟ್ಟಡಗಳು, ಸ್ಮಾರಕಗಳು, ವಸ್ತುಸಂಗ್ರಹಾಲಯಗಳು, ಆಳವಿಲ್ಲದ ಕಟ್ಟಡ ಅಡಿಪಾಯಗಳಂತಹವು ಇರುವಲ್ಲಿ ಕಂಪನ ಸಮಸ್ಯೆ ಉಂಟಾಗುವ ಸಾಧ್ಯತೆ ಇರುತ್ತದೆ. ಇಂಥ ಸ್ಥಳಗಳಲ್ಲಿರುವ ಮಣ್ಣಿನ ಪದರಗಳನ್ನು ಅಧ್ಯಯನ ಮಾಡಲಾಗುತ್ತಿದೆ. ಕಂಪನ ಹೆಚ್ಚು ಉಂಟಾಗುವ ಪ್ರದೇಶಗಳಲ್ಲಿ ನಿರ್ಮಿಸುವ ಸುರಂಗ ಮಾರ್ಗದಲ್ಲಿ ಎಂಎಸ್‌ಎಸ್ ಪ್ಯಾಡ್ ಅಳವಡಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ಬಿಎಂಆರ್‌ಸಿಎಲ್ ವತಿಯಿಂದ ಎಂಎಸ್‌ಎಸ್ ಪ್ಯಾಡ್‌ಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಕಂಪನ ತಡೆಯುವಲ್ಲಿ ಇದು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಬಿ.ಎಲ್. ಯಶವಂತ ಚವಾಣ್ ಪ್ರತಿಕ್ರಿಯಿಸಿದರು.



ಮಾಸ್ ಸ್ಪ್ರಿಂಗ್ ಸಿಸ್ಟಂ ಪ್ಯಾಡ್‌ಗಳು



ದೆಹಲಿಯ ಮೆಟ್ರೊ ನಿಲ್ದಾಣದಲ್ಲಿ ಇರುವ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ವ್ಯವಸ್ಥೆ

## ಹೊಸಮಾರ್ಗದಲ್ಲಿ ಮಾತ್ರ ಪಿಎಸ್‌ಡಿ

ಒಂದು ವಾರದಲ್ಲಿ ಇಬ್ಬರು ಮೆಟ್ರೊ ಹಳಿಗೆ ಹಾರಿದ ಘಟನೆಗಳು ನಡೆದಿರುವ ಹಿನ್ನೆಲೆಯಲ್ಲಿ ಮೆಟ್ರೊ ರೈಲು ನಿಲ್ದಾಣಗಳಲ್ಲಿ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ (ಪಿಎಸ್‌ಡಿ) ವ್ಯವಸ್ಥೆ ಅಳವಡಿಸುವ ವಿಚಾರ ಮತ್ತೆ ಚರ್ಚೆಗೆ ಬಂದಿದೆ.

‘ಪಿಎಸ್‌ಡಿ ವ್ಯವಸ್ಥೆಯನ್ನು ಈಗ ನಿರ್ಮಾಣಗೊಳ್ಳುತ್ತಿರುವ ಹೊಸ ಸುರಂಗ ಮಾರ್ಗಗಳ ನಿಲ್ದಾಣಗಳಲ್ಲಿ ಮಾತ್ರ ಅಳವಡಿಸಲಾಗುವುದು. ಈಗಿರುವ ಮಾರ್ಗಗಳಲ್ಲಿ ಅಳವಡಿಸುವ ಕುರಿತು ಮುಂದೆ ಚರ್ಚಿಸಲಾಗುವುದು’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಕಾಮಗಾರಿ ನಡೆಯುತ್ತಿರುವ ಹಳದಿ ಮಾರ್ಗದಲ್ಲಿ ಎಲೆಕ್ಟ್ರಾನಿಕ್ ಸಿಟಿ ಬಳಿಯ ಕೋನಪ್ಪನ ಅಗ್ರಹಾರ ಬಳಿ ನಿರ್ಮಾಣಗೊಳ್ಳುತ್ತಿರುವ ನಿಲ್ದಾಣದಲ್ಲಿ ಮೊದಲ ಪಿಎಸ್‌ಡಿ ಅಳವಡಿಕೆಯಾಗಲಿದೆ. ಮುಂದೆ ಹಳದಿ ಮತ್ತು ನೀಲಿ ಮಾರ್ಗದ ವಿವಿಧ ನಿಲ್ದಾಣಗಳಲ್ಲಿಯೂ ಅಳವಡಿಸಲಾಗುವುದು’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೆಟ್ರೊ ನಿಲ್ದಾಣಗಳಲ್ಲಿ ಪ್ರಯಾಣಿಕರು ಹಳಿಗಳತ್ತ ನುಗ್ಗುವುದನ್ನು ತಪ್ಪಿಸಲು ಚೆನ್ನೈ, ದೆಹಲಿ ಮತ್ತು ಮುಂಬೈಗಳಲ್ಲಿ ಈಗಾಗಲೇ ಈ ವ್ಯವಸ್ಥೆಯನ್ನು ಅನುಷ್ಠಾನ ಮಾಡಲಾಗಿದೆ.

# 571 ಸರ್ಕಾರಿ ಶಾಲೆ ಆಸ್ತಿಗೆ ಖಾತೆ ಇಲ್ಲ!

## ಚಿಕ್ಕಬಳ್ಳಾಪುರ: ಶಾಲೆ ಭೂಮಿ ಮೇಲೆ ಭೂಗಳ್ಳರ ಕಣ್ಣು

• ಡಿ.ಎಂ.ಕುರ್ಕೆ ಪ್ರಶಾಂತ್

**ಚಿಕ್ಕಬಳ್ಳಾಪುರ:** ಸರ್ಕಾರಿ ಶಾಲೆ ಗಳಿಗೆ ದಾನಿಗಳು ನೀಡಿದ ಮತ್ತು ಸರ್ಕಾರದಿಂದ ಮಂಜೂರಾದ ನಿವೇಶನ, ಜಮೀನುಗಳು ಆಯಾ ಶಾಲೆಗಳ ಹೆಸರಿಗೆ ಖಾತೆ ಆಗಬೇಕು. ಖಾತೆಯಿಂದ ಮಾತ್ರ ಇದು ಈ ಶಾಲೆಯ ಅಧಿಕೃತ ಆಸ್ತಿ ಎನ್ನುವುದು ದೃಢವಾಗುತ್ತದೆ. ಆದರೆ ಜಿಲ್ಲೆಯಲ್ಲಿ ಇಂದಿಗೂ 571 ಶಾಲೆಗಳ ಆಸ್ತಿಗಳಿಗೆ ಖಾತೆಯೇ ಆಗಿಲ್ಲ.

ಸರ್ಕಾರಿ ಶಾಲೆಗಳ ಆಸ್ತಿ ಸಂರಕ್ಷಣೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಅಭಿಯಾನ ನಡೆಸಿದ ಹೊರತಾಗಿಯೂ ಜಿಲ್ಲೆಯಲ್ಲಿ ಇನ್ನೂ 532 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ 39 ಸರ್ಕಾರಿ ಪ್ರೌಢಶಾಲೆಗಳ ಆಸ್ತಿ ಖಾತೆ ಆಗಿಲ್ಲ.

ದಾನಿಗಳು, ಶಿಕ್ಷಣ ಪ್ರೇಮಿಗಳು ದಾನ ನೀಡಿರುವ ಜಾಗಗಳು ಸರ್ಕಾರಿ ಶಾಲೆಗಳ ಹೆಸರಿಗೆ ಖಾತೆ ಆಗದ ಪರಿಣಾಮ ಕೆಲವು ಕಡೆ ಬೆಲೆಬಾಳುವ ಜಾಗದ ಮೇಲೆ ಭೂಗಳ್ಳರ ಕಣ್ಣು ಬಿದ್ದಿದೆ. ಹಲವೆಡೆ ಒತ್ತುವರಿ ಆಗಿವೆ. ದಾನಿಗಳ ಸಂಬಂಧಿಕರು ಮತ್ತೆ ಜಾಗ ವಶಕ್ಕೆ ಪಡೆಯಲು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಇದರಿಂದಾಗಿ ಕೆಲವು ಶಾಲೆಗಳ ಆಸ್ತಿಗಳ ಖಾತೆಗೆ ತಡೆ ಸಹ ಬಿದ್ದಿದೆ.

**39 ಪ್ರೌಢಶಾಲೆ ಖಾತೆ ಬಾಕಿ:** ಜಿಲ್ಲೆಯಲ್ಲಿ 111 ಸರ್ಕಾರಿ ಪ್ರೌಢಶಾಲೆಗಳಿವೆ. ಈ ಪ್ರೌಢಶಾಲೆಗಳ ಪೈಕಿ 2022ರಲ್ಲಿ 35 ಶಾಲೆಗಳ ಮತ್ತು 2023ರಲ್ಲಿ ಒಂದು ಶಾಲೆಯ ಆಸ್ತಿ ಖಾತೆ ಆಗಿದೆ. ಇಲ್ಲಿಯವರೆಗೂ ಒಟ್ಟು 72 ಶಾಲೆ ಆಸ್ತಿ ಖಾತೆ ಆಗಿದೆ. ಇನ್ನೂ 39 ಶಾಲೆಗಳ ಆಸ್ತಿ ಖಾತೆ ಬಾಕಿ ಇದೆ.

ಹೀಗೆ ಬಾಕಿ ಇರುವ ಶಾಲೆಗಳ ಪೈಕಿ ಎರಡು ಶಾಲೆಗಳಿಗೆ ದಾನಿಗಳು ಜಾಗ ನೀಡಿದ್ದಾರೆ. ಒಂದು ಕಡೆ ಖಾಸಗಿ ಜಾಗದಲ್ಲಿ ಶಾಲೆ ನಡೆಯುತ್ತಿದೆ. ಉಳಿದ 33 ಕಡೆಗಳಲ್ಲಿ ಸರ್ಕಾರಿ ಜಾಗದಲ್ಲಿಯೇ ಶಾಲೆ ಇದೆ. ಇವುಗಳಿಗೆಲ್ಲವೂ ಖಾತೆ ಆಗಬೇಕಿದೆ.

**1,434 ಪ್ರಾಥಮಿಕ ಶಾಲೆ:** ಜಿಲ್ಲೆಯಲ್ಲಿ 1,434 ಸರ್ಕಾರಿ ಪ್ರಾಥಮಿಕ ಶಾಲೆಗಳು ಇವೆ. 2022ರಲ್ಲಿ 236 ಮತ್ತು 2023ರಲ್ಲಿ 81 ಶಾಲೆ ಸೇರಿದಂತೆ ಒಟ್ಟು 902 ಪ್ರಾಥಮಿಕ ಶಾಲೆ ಆಸ್ತಿ ಖಾತೆ ಆಗಿದೆ. ಇನ್ನೂ 532 ಶಾಲೆ ಆಸ್ತಿಗೆ ಖಾತೆ ಆಗಿಲ್ಲ. 1,434 ಶಾಲೆ ಪೈಕಿ 111 ಶಾಲೆಗಳಿಗೆ ದಾನಿಗಳು ಜಾಗ ಕೊಟ್ಟಿದ್ದಾರೆ. 38 ಶಾಲೆಗಳು ಖಾಸಗಿ ಸ್ವತ್ತುಗಳಲ್ಲಿ ಇವೆ. 366 ಕಡೆ ಸರ್ಕಾರಿ ಜಾಗದಲ್ಲಿ ಶಾಲೆಗಳು ಇವೆ. 17 ಶಾಲೆಗಳು ಇತರೆ ಕಡೆಗಳಲ್ಲಿ ಇದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಈ ಹಿಂದಿನ ಬಿಜೆಪಿ ಸರ್ಕಾರ ಆಗಸ್ಟ್ 1ರಿಂದ ಅ. 31ರವರೆಗೆ ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಆಸ್ತಿ ಸಂರಕ್ಷಣಾ ಅಭಿಯಾನ ನಡೆಸಿತ್ತು. ನಿಗದಿತ ಅವಧಿಯ ಒಳಗೆ ಅಭಿಯಾನ ಪೂರ್ಣಗೊಳಿಸಲು ಆಯಾ ಶಾಲೆಯ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ ಗಳು, ಉಪ ನಿರ್ದೇಶಕರು ಕ್ರಮ ವಹಿಸಬೇಕು. ಅಭಿಯಾನದ ನಂತರ ಸಂಪೂರ್ಣ ವರದಿಯನ್ನು ಆಯಾ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಇಲಾಖೆ ಸೂಚಿಸಿತ್ತು. ಆದರೆ ಆ ಕಾಲಮಿತಿಯಲ್ಲಿ ಅಭಿಯಾನ ಪೂರ್ಣವಾಗಲೇ ಇಲ್ಲ. ಎಲ್ಲ ಶಾಲೆಗಳ ಆಸ್ತಿಗಳಿಗೆ ಖಾತೆಗಳು ಆಗಲಿಲ್ಲ.



ಬಾಗೇಪಲ್ಲಿ ತಾಲ್ಲೂಕಿನ ಅಡವಿಕೊತ್ತೂರಿನ ಸರ್ಕಾರಿ ಶಾಲೆ

## ಫೆಬ್ರುವರಿಯೊಳಗೆ ಪೂರ್ಣ

ಸರ್ಕಾರಿ ಶಾಲೆಗಳ ಆಸ್ತಿ ಸಂರಕ್ಷಣಾ ಅಭಿಯಾನದಡಿ ಫೆಬ್ರುವರಿ ಅಂತ್ಯದ ಒಳಗೆ ಎಲ್ಲ ಸರ್ಕಾರಿ ಶಾಲೆಗಳ ಆಸ್ತಿಗಳಿಗೆ ಖಾತೆ ಮಾಡಿಸಬೇಕಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಈಗಾಗಲೇ ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ. ಫೆಬ್ರುವರಿ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಉಪನಿರ್ದೇಶಕ ಪಿ.ಬೈಲಾಂಜನಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

**ನೋಡಲ್ ಅಧಿಕಾರಿ:** ಖಾತೆ ಮಾಡಿಕೊಳ್ಳುವ ಪ್ರಕ್ರಿಯೆಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ದೈಹಿಕ ಶಿಕ್ಷಣ ಅಧಿಕಾರಿಗಳನ್ನು ಶಿಕ್ಷಣ ಇಲಾಖೆ ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿದೆ.

# ಪಶು ಚಿಕಿತ್ಸಾಲಯ ಸ್ಥಳಾಂತರ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ನಗರ ಜಿಲ್ಲೆಯ ವಿವಿಧ ಭಾಗಗಳಲ್ಲಿರುವ 28 ಪಶುವೈದ್ಯ ಕೇಂದ್ರಗಳ ಸ್ಥಳಾಂತರ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ‘ಅನಿಮಲ್ ರೈಟ್ಸ್ ಫಂಡ್ ಸಂಸ್ಥೆ’ ಹಾಗೂ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್ ಸೇರಿದಂತೆ ಒಟ್ಟು ಐವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ರಾಜ್ಯ ಸರ್ಕಾರವು 1,300 ಪಶುಗಳಿಗಿಂತಲೂ ಕಡಿಮೆ ಸಂಖ್ಯೆಯಲ್ಲಿರುವ ಆಸ್ಪತ್ರೆಗಳ ವ್ಯಾಪ್ತಿಯ ಪಶು ಆಸ್ಪತ್ರೆ ಗಳನ್ನು ಸ್ಥಳಾಂತರಿಸುವ ಸಂಬಂಧ ಹೊರಡಿಸಿರುವ ಆದೇಶ ಅಸಂಬದ್ಧ. ಆದ್ದರಿಂದ, ಈ ಆದೇಶ ಹಿಂಪಡೆಯುವಂತೆ ನಿರ್ದೇಶಿಸಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರತಿವಾದಿ ರಾಜ್ಯ ಪಶುಸಂಗೋಪನಾ ಇಲಾಖೆ ಕಾರ್ಯದರ್ಶಿ ಆಯುಕ್ತರು ಮತ್ತು ಉಪ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

**ಅರ್ಜಿಯಲ್ಲಿ ಏನಿದೆ?:** ’ಬೆಂಗಳೂರು ನಗರ ಜಿಲ್ಲೆಯ 13 ಲಕ್ಷಕ್ಕೂ ಹೆಚ್ಚಿನ ವಿವಿಧ ಜಾತಿಯ ಪ್ರಾಣಿಗಳು ಮತ್ತು ಸಾಕು ಪ್ರಾಣಿಗಳಿವೆ. ಇವುಗಳ ಆರೋಗ್ಯ ತಪಾಸಣೆಗೆ ಅನುಕೂಲಕರವಾಗಿರುವ ಗಂಟಿಗಾನಹಳ್ಳಿ, ಲಿಂಗನಹಳ್ಳಿ ಹನಿಯೂರು ಮತ್ತು ಮಾದಪ್ಪನ ಹಳ್ಳಿಯಲ್ಲಿರುವ ಪಶು ಚಿಕಿತ್ಸಾಲಯಗಳನ್ನು ಸ್ಥಳಾಂತರ ಮಾಡಲು ಸರ್ಕಾರ 2023ರ ಡಿಸೆಂಬರ್ 15ರಂದು ನಿರ್ಧರಿಸಿದೆ. ಇದರಿಂದಾಗಿ ರೈತರು ಹಾಗೂ ಪ್ರಾಣಿ ಸಾಕಣೆದಾರರಿಗೆ ತೊಂದರೆಯಾಗಿದೆ. ಆದ್ದರಿಂದ, ಸರ್ಕಾರದ ಈ ನಿರ್ಧಾರ ಹಿಂಪಡೆಯಲು ನಿರ್ದೇಶಿಸಬೇಕು‘ ಎಂದು ಅರ್ಜಿದಾರರು ಕೋರಿದ್ದಾರೆ.

ಪ್ರತಿಷ್ಠಿತ ರಸ್ತೆಗಳ ಮೇಲ್ದರ್ಜೆಗೆ ಯೋಜನೆ • ವಿಳಂಬವಾದರೆ ವಾಹನ ದಟ್ಟಣೆ ಸಮಸ್ಯೆ

# ವೈಟ್ ಟಾಪಿಂಗ್: ವಿಳಂಬವೇ ಆತಂಕ

• ಆರ್. ಮಂಜುನಾಥ್

**ಅಂಕಿ ಅಂಶಗಳು**

| 1,345 ಕಿ.ಮೀ | 145 ಕಿ.ಮೀ | 61.12 ಕಿ.ಮೀ | ₹800 ಕೋಟಿ |
|---|---|---|---|
| ನಗರದಲ್ಲಿರುವ ಮುಖ್ಯರಸ್ತೆ, ಉಪ ಮುಖ್ಯರಸ್ತೆಗಳ ಒಟ್ಟು ಉದ್ದ | ವೈಟ್ ಟಾಪಿಂಗ್ ಆಗಿರುವ ರಸ್ತೆಗಳ ಉದ್ದ | ಉದ್ದೇಶಿತ ವೈಟ್ ಟಾಪಿಂಗ್ ರಸ್ತೆಗಳ ಉದ್ದ | ಸರ್ಕಾರ ಮಂಜೂರು ಮಾಡಿರುವ ಮೊತ್ತ |


ಮಹಾತ್ಮಗಾಂಧಿ ರಸ್ತೆ

**ಬೆಂಗಳೂರು:** ನಗರದ ಪ್ರಮುಖ ರಸ್ತೆಗಳಿಗೆ ಆಧುನಿಕ ಸೌಲಭ್ಯಗಳನ್ನು ಒದಗಿಸಿ, ಮೇಲ್ದರ್ಜೆಗೆ ಏರಿಸುವ ವೈಟ್ ಟಾಪಿಂಗ್ ಕಾಮಗಾರಿ ಫೆಬ್ರುವರಿ ಅಂತ್ಯಕ್ಕೆ ಆರಂಭವಾಗಲಿದೆ. ವಾಹನ ದಟ್ಟಣೆ ಅತಿಹೆಚ್ಚಿರುವ ರಸ್ತೆಗಳಲ್ಲೇ ಈ ಕಾಮಗಾರಿ ನಡೆಯಲಿವೆ.

ಪ್ರತಿಷ್ಠಿತ ಎಂ.ಜಿ. ರಸ್ತೆ, ರೆಸಿಡೆನ್ಸಿ ರಸ್ತೆ, ರೇಸ್ ಕೋರ್ಸ್, ಕೆ.ಆರ್. ವೃತ್ತದ ರಸ್ತೆ, ಜಯನಗರ, ವಿಜಯನಗರ, ಬಳ್ಳಾರಿ ರಸ್ತೆ ಸೇರಿದಂತೆ 43 ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯಲಿದೆ.

19 ವಿಧಾನಸಭೆ ಕ್ಷೇತ್ರಗಳ ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಳು ಒಂದೇ ಸಮಯದಲ್ಲಿ ಆರಂಭವಾಗಲಿವೆ. ಹಲವು ಟೆಂಡರ್‌ಶ್ಯೂರ್ ರಸ್ತೆಗಳಿಗೆ ಈ ರಸ್ತೆಗಳು ಸಂಪರ್ಕ ಕಲ್ಪಿಸಲಿವೆ. ವೈಟ್ ಟಾಪಿಂಗ್ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದ್ದು, ಜ.20ರ ವೇಳೆಗೆ 9 ಪ್ಯಾಕೇಜ್‌ಗಳಲ್ಲಿ ಟೆಂಡರ್ ಆಹ್ವಾನಿಸಲಾಗುತ್ತಿದೆ.

'ವೈಟ್ ಟಾಪಿಂಗ್ ರಸ್ತೆಯನ್ನು ಶೀಘ್ರವಾಗಿ ಮುಗಿಸುತ್ತೇವೆ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಹೇಳುತ್ತಾರೆ. ಆದರೆ ಅವರು ಪೂರ್ವತಯಾರಿ ಇಲ್ಲದೆ ರಸ್ತೆಯನ್ನು ಅಗೆಯುತ್ತಾರೆ. ನಂತರ ಜಲಮಂಡಳಿ, ಬೆಸ್ಕಾಂ ಅಧಿಕಾರಿಗಳ ಮೇಲೆ ದೂರು ಹೇಳಿ ಕಾಮಗಾರಿಯನ್ನು ವಿಳಂಬ ಮಾಡುತ್ತಾರೆ. ಗುಬ್ಬಿ ತೋಟದಪ್ಪ ರಸ್ತೆಯ (ರೈಲ್ವೆ ನಿಲ್ದಾಣದ ಮುಂಭಾಗ) ವೈಟ್ ಟಾಪಿಂಗ್ ಕಾಮಗಾರಿ 2022ರ ನವೆಂಬರ್‌ನಲ್ಲಿ ಆರಂಭವಾಯಿತು. ಇನ್ನೂ ಮುಗಿದಿಲ್ಲ. ಹೀಗೆ ವರ್ಷಗಟ್ಟಲೆ ಕಾಮಗಾರಿ ನಡೆಸಿದರೆ, ವಾಣಿಜ್ಯ ಪ್ರದೇಶ ಹಾಗೂ ಪ್ರಮುಖ ರಸ್ತೆಗಳಲ್ಲಿ ಇನ್ನೂ ಹೆಚ್ಚು ವಾಹನ ದಟ್ಟಣೆ ಉಂಟಾಗುತ್ತದೆ. ಬಿಬಿಎಂಪಿ ಎಂಜಿನಿಯರ್‌ಗಳು ಕಾಮಗಾರಿ ಆರಂಭಿಸುವ ಮುನ್ನ ಎಲ್ಲವೂ ಗೊತ್ತಿರುವ ರೀತಿಯಲ್ಲೇ ಮಾತನಾಡುತ್ತಾರೆ. ನಂತರ ಕೈಚೆಲ್ಲಿ ಕೂರುತ್ತಾರೆ. ಇದರಿಂದಲೇ ವೈಟ್ ಟಾಪಿಂಗ್ ಎಂದರೆ ಆತಂಕ ಎದುರಾಗುತ್ತದೆ' ಎಂದು ವ್ಯಾಪಾರಿ ಸಂತೋಷ್ ಹೇಳಿದರು.

ನಗರದ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರವಾಗಿ ನಗರ ಭೂ ಸಾರಿಗೆ ನಿರ್ದೇಶನಾಲಯ, ಸ್ವಯಂಚಾಲಿತ ಸಿಗ್ನಲ್ ತಂತ್ರಜ್ಞಾನವನ್ನು ಅಳವಡಿಸುತ್ತಿದೆ. ಎಂ.ಜಿ ರಸ್ತೆ, ಹಳೆ ಮದ್ರಾಸ್ ರಸ್ತೆ, ಹೊಸೂರು ರಸ್ತೆಯ 28 ವೃತ್ತಗಳಲ್ಲಿ 'ಮೊಡೆರಾಟೊ ವ್ಯವಸ್ಥೆ' ಜಾರಿಯಾಗುತ್ತಿದೆ. 'ಈ ರಸ್ತೆಗಳಲ್ಲೇ ವೈಟ್ ಟಾಪಿಂಗ್ ಕಾಮಗಾರಿ ಕೂಡ ಆರಂಭವಾಗಲಿವೆ. ಆಗ ಈ ವ್ಯವಸ್ಥೆಗೆ ತೊಂದರೆಯಾಗುವುದಿಲ್ಲವೇ' ಎಂದು ಸ್ಥಳೀಯರು ಪ್ರಶ್ನಿಸಿದರು.

### '18 ತಿಂಗಳ ಕಾಮಗಾರಿ'

'ಸರ್ಕಾರ ಅನುಮೋದಿಸಿರುವ ವೈಟ್ ಟಾಪಿಂಗ್ ಕಾಮಗಾರಿಗಳನ್ನು ಫೆಬ್ರುವರಿ ಅಂತ್ಯಕ್ಕೆ ಆರಂಭಿಸಲಾಗುತ್ತದೆ. 18 ತಿಂಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಳ್ಳಲಿದೆ. ನಗರದ ಹೃದಯ ಭಾಗದಲ್ಲಿ ಕಾಮಗಾರಿಗಳು ನಡೆಯಲಿದ್ದು, ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಪೊಲೀಸರ ನೆರವಿನೊಂದಿಗೆ ಹೆಚ್ಚಿನ ದಟ್ಟಣೆಯಾಗದಂತೆ ಕ್ರಮ ವಹಿಸಲಾಗುತ್ತದೆ. ನಿಗದಿಯಾದ ಸಮಯದಲ್ಲಿ ಕಾಮಗಾರಿ ಮುಗಿಸಲಿದ್ದೇವೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ 'ಪ್ರಜಾವಾಣಿ'ಗೆ ತಿಳಿಸಿದರು.

### ಎಲ್ಲೆಲ್ಲಿ ವೈಟ್ ಟಾಪಿಂಗ್?

- ಎಂ.ಜಿ.ರಸ್ತೆಯ ಮಹಾತ್ಮಗಾಂಧಿ ವೃತ್ತದಿಂದ ಟ್ರಿನಿಟಿ ವೃತ್ತ
- ರೆಸಿಡೆನ್ಸಿ ರಸ್ತೆಯಿಂದ ರಿಚ್ಮಂಡ್ ರಸ್ತೆ
- ನಗರ ಸಿವಿಲ್ ಕೋರ್ಟ್‌ನಿಂದ ಮೈಸೂರು ಬ್ಯಾಂಕ್– ಕೆ.ಆರ್. ವೃತ್ತ
- ಸಿಬಿಐ ರಸ್ತೆ– ಆರ್.ಟಿ. ನಗರ, ದಿಣ್ಣೂರು ಮುಖ್ಯರಸ್ತೆ
- ರೇಸ್ ಕೋರ್ಸ್ ರಸ್ತೆ; ಮಯೂರ ಜಂಕ್ಷನ್‌ನಿಂದ ಹರೇ ಕೃಷ್ಣ ಜಂಕ್ಷನ್
- ತಿಮ್ಮಯ್ಯ ರಸ್ತೆಯಿಂದ ನಿಸ್ವಾನಿ ಸ್ಕೂಲ್– ಕಾಮರಾಜ್ ರಸ್ತೆ
- ನಾರಾಯಣಪಿಳ್ಳೈ ಸ್ಟ್ರೀಟ್‌ನಿಂದ ಸೇಂಟ್ ಜಾನ್ಸ್ ರಸ್ತೆ– ಕಮರ್ಷಿಯಲ್ ರಸ್ತೆ
- ವೆಸ್ಟ್ ಆಫ್ ಕಾರ್ಡ್ ರಸ್ತೆ, ವಿಜಯನಗರ
- ಮಲ್ಲೇಶ್ವರ 8ನೇ ಮುಖ್ಯರಸ್ತೆ. ಬಳ್ಳಾರಿ ರಸ್ತೆಯಿಂದ ಸಹಕಾರ ನಗರ–ಜಕ್ಕೂರು ರಸ್ತೆ.
- ಜಾಲಹಳ್ಳಿ ಕ್ರಾಸ್–ಟಿವಿಎಸ್ ಕ್ರಾಸ್.
- ಟ್ಯಾನರಿ ರಸ್ತೆಯ ದೊಡ್ಡಿ ವೃತ್ತ– ವೆಂಕಟೇಶಪುರ ವೃತ್ತ
- ಮಾಸ್ಕ್ ರಸ್ತೆಯಿಂದ ಕೋಲ್ಸ್ ರಸ್ತೆ– ಎಂ.ಎಂ ರಸ್ತೆ

# ಇ–ಆಡಳಿತ ಕಚೇರಿಗೆ ಚಾಲನೆ

ಪ್ರಜಾವಾಣಿ ವಾರ್ತೆ


ಯಲಹಂಕ ತಾಲ್ಲೂಕು ಕಚೇರಿಯಲ್ಲಿ ನೂತನವಾಗಿ ಸ್ಥಾಪಿಸಿರುವ ಇ–ಆಡಳಿತ ಕಚೇರಿಯನ್ನು ಶಾಸಕ ಎಸ್‌.ಆರ್‌. ವಿಶ್ವನಾಥ್ ಉದ್ಘಾಟಿಸಿದರು. ತಹಶೀಲ್ದಾರ್ ಅನಿಲ್‌ಕುಮಾರ್ ಆರೋಲಿಕರ್, ವಿಶೇಷ ತಹಶೀಲ್ದಾರ್ ಶಿವಕುಮಾರ್, ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಡಿ.ಒ. ರಮೇಶ್ ಇದ್ದರು.

**ಯಲಹಂಕ:** ತಾಲ್ಲೂಕು ಕಚೇರಿಯಲ್ಲಿ ನೂತನವಾಗಿ ಸ್ಥಾಪಿಸಿರುವ ಇ-ಆಡಳಿತ ಕಚೇರಿಯನ್ನು ಶಾಸಕ ಎಸ್.ಆರ್. ವಿಶ್ವನಾಥ್ ಉದ್ಘಾಟಿಸಿದರು.

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಇದೇ ಮೊದಲ ಬಾರಿಗೆ ಇ–ಕಚೇರಿ ಆರಂಭಿಸಲಾಗಿದೆ. ಸಾರ್ವಜನಿಕರು ಕಂದಾಯ ಇಲಾಖೆಯ ವಿವಿಧ ವಿಭಾಗಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆಯಲು ಇಲ್ಲಿ ಅರ್ಜಿ ಮತ್ತು ದೂರುಗಳನ್ನು ಸಲ್ಲಿಸಬಹುದು. ಈ ಅರ್ಜಿಗಳನ್ನು ಸ್ಕ್ಯಾನ್‌ಮಾಡಿ ಸಂಬಂಧಪಟ್ಟ ಇಲಾಖೆಗಳಿಗೆ ವರ್ಗಾವಣೆ ಮಾಡಲಾಗುತ್ತದೆ. ಅರ್ಜಿದಾರರು ಮನೆಯಲ್ಲಿ ಕುಳಿತು ಮೊಬೈಲ್‌ನಲ್ಲೇ ಅರ್ಜಿ ಯಾವ ಹಂತದಲ್ಲಿದೆ ಎಂಬುದನ್ನು ನೋಡಬಹುದು ಎಂದು ತಿಳಿಸಿದರು.

ಸಾರ್ವಜನಿಕರು ತಾಲ್ಲೂಕು ಕಚೇರಿಗೆ ಅಲೆಯುವುದನ್ನು ತಪ್ಪಿಸುವುದಕ್ಕಾಗಿ ಇ–ಕಚೇರಿ ಆರಂಭಿಸಲಾಗಿದೆ. ಕಂದಾಯ ಇಲಾಖೆಯ ಕೆಲಸಗಳನ್ನು ಸರಳೀಕರಣಗೊಳಿಸುವುದರ ಜೊತೆಗೆ ಕಡತಗಳನ್ನು ಶೀಘ್ರ ವಿಲೇವಾರಿ ಮಾಡುವುದು ಇದರ ಮುಖ್ಯ ಉದ್ದೇಶ ಎಂದು ವಿವರಿಸಿದರು.

ತಹಶೀಲ್ದಾರ್ ಅನಿಲ್‌ಕುಮಾರ್ ಆರೋಲಿಕರ್, ವಿಶೇಷ ತಹಶೀಲ್ದಾರ್ ಶಿವಕುಮಾರ್, ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಡಿ.ಒ. ರಮೇಶ್ ಉಪಸ್ಥಿತರಿದ್ದರು.

## 'ಗ್ಯಾರಂಟಿ ಫಲಾನುಭವಿಗಳಲ್ಲಿ ಹೆಚ್ಚಿನವರು ಬಿಜೆಪಿಯವರು'

**ಬೆಂಗಳೂರು:** 'ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ 4.30 ಕೋಟಿ ಫಲಾನುಭವಿಗಳ ಪೈಕಿ ಹೆಚ್ಚಿನವರು ಬಿಜೆಪಿಯವರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, 'ವಾಮಮಾರ್ಗದಲ್ಲಿ ಮೂರೂವರೆ ವರ್ಷ ಅಧಿಕಾರ ನಡೆಸಿದ ಬಿಜೆಪಿ ಮಾಡಬಾರದ್ದನ್ನೆಲ್ಲಾ ಮಾಡಿ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿದೆ' ಎಂದು ಆರೋಪಿಸಿದರು.

'ವಿವಿಧ ಇಲಾಖೆಗಳಲ್ಲಿ ಸುಮಾರು ₹ 40 ಕೋಟಿಗೂ ಹೆಚ್ಚು ಮೊತ್ತದ ಬಿಲ್‌ಗಳನ್ನು ಬಿಜೆಪಿಯವರು ಬಾಕಿ ಉಳಿಸಿದ್ದಾರೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಅಣಕಿಸಿ ಈಗ ನಮ್ಮ ಗ್ಯಾರಂಟಿಗಳನ್ನೇ ಕಾಪಿ ಮಾಡಿ ಅದಕ್ಕೆ ಮೋದಿ ಗ್ಯಾರಂಟಿ ಎನ್ನುತ್ತಿದ್ದಾರೆ. ಬಿಜೆಪಿಯವರು ಅಷ್ಟು ನಿರ್ಲಜ್ಜರಾಗಿದ್ದಾರೆ' ಎಂದು ಟೀಕಿಸಿದರು.

'ಜನಾದೇಶದ ಸರ್ಕಾರವನ್ನು ಉರುಳಿಸಿ ಅಧಿಕಾರಕ್ಕೆ ಬಂದಿದ್ದ ಬಿಜೆಪಿಯವರಿಗೆ ಹಣ ತಿನ್ನುವ ರುಚಿ ಹತ್ತಿದೆ. ಹೀಗಾಗಿ, ಮತ್ತೆ ಮತ್ತೆ ಸರ್ಕಾರ ಬೀಳಿಸುವ ಪ್ರಯತ್ನಕ್ಕೆ ಕೈ ಹಾಕುತ್ತಲೇ ಇರುತ್ತಾರೆ' ಎಂದು ಪಕ್ಷದ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದರು.

## ತಹಶೀಲ್ದಾರ್ ಅಮಾನತು

**ಹೂವಿನಹಡಗಲಿ:** 2019ರಲ್ಲಿ ಬ್ಯಾಡಗಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಕರ್ತವ್ಯ ಲೋಪ ಎಸಗಿದ ಆರೋಪದಡಿ ತಹಶೀಲ್ದಾರ್ ಕೆ. ಶರಣಮ್ಮ ಅವರನ್ನು ಅಮಾನತು ಮಾಡಿ, ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿಗೆ ವರ್ಗಾವಣೆ ಮಾಡಲಾಗಿದೆ. ಶರಣಮ್ಮ ಅವರು ಬ್ಯಾಡಗಿಯಲ್ಲಿ ತಹಶೀಲ್ದಾರ್ ಆಗಿದ್ದ ಸಂದರ್ಭದಲ್ಲಿ ಬೆಳೆ ಪರಿಹಾರದ ಹಣವನ್ನು 29 ಅನರ್ಹ ಫಲಾನುಭವಿಗಳ ಖಾತೆಗೆ ಜಮೆ ಮಾಡಿ ಸರ್ಕಾರಕ್ಕೆ ₹8.57 ಲಕ್ಷ ನಷ್ಟ ಉಂಟು ಮಾಡಿದ ಆರೋಪದ ಹಿನ್ನೆಲೆಯಲ್ಲಿ ಅವರನ್ನು ಅಮಾನತುಗೊಳಿಸಿ ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

## ವರಿಷ್ಠರ ಬಳಿ ಈಶ್ವರಪ್ಪ 'ಹಿರಿತನ'ದ ಲಾಬಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ಕರ್ನಾಟಕ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಬುಧವಾರ ಭೇಟಿ ಮಾಡಿ ರಾಜ್ಯದ ರಾಜಕೀಯ ಪರಿಸ್ಥಿತಿ ಕುರಿತು ಸಮಾಲೋಚಿಸಿದರು.

ಪಕ್ಷದ ರಾಜ್ಯ ಘಟಕದಲ್ಲಿನ ಕೆಲವೊಂದು ಸಮಸ್ಯೆಗಳ ಕುರಿತು ವರಿಷ್ಠರ ಬಳಿ ಅವರು ಪ್ರಸ್ತಾಪಿಸಿದರು. 'ರಾಜ್ಯದಲ್ಲಿ ಪಕ್ಷ ಸಂಘಟನೆಯಲ್ಲಿ ಹಿರಿಯ ನಾಯಕರ ಶ್ರಮ ದೊಡ್ಡದು. ಆದರೆ, ಇತ್ತೀಚಿನ ಕೆಲವೊಂದು ಬೆಳವಣಿಗೆಗಳಿಂದ ನಾಲ್ಕೈದು ನಾಯಕರು ಅಸಮಾಧಾನಗೊಂಡಿದ್ದಾರೆ. ಚುನಾವಣೆಯ ಹೊತ್ತಿನಲ್ಲಿ ಒಡಕು ಧ್ವನಿಗೆ ಆಸ್ಪದ ನೀಡಬಾರದು. ಹಿರಿಯ ನಾಯಕರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕು ಹಾಗೂ ಅವರಿಗೆ ಜವಾಬ್ದಾರಿಗಳನ್ನು ನೀಡಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವನ್ನು ರಾಜ್ಯ ಘಟಕ ಮಾಡಬೇಕು' ಎಂದು ಈಶ್ವರಪ್ಪ ಅವರು ವರಿಷ್ಠರ ಗಮನಕ್ಕೆ ತಂದರು ಎಂದು ಮೂಲಗಳು ಹೇಳಿವೆ.

'ಕೆಲವು ನಾಯಕರು ಬಹಿರಂಗ ಹೇಳಿಕೆಗಳನ್ನು ನೀಡುತ್ತಿರುವುದು ಗಮನಕ್ಕೆ ಬಂದಿದೆ. ಅಂತಹ ನಾಯಕರ ಜತೆಗೆ ಚರ್ಚಿಸಿ ಅಸಮಾಧಾನ ಶಮನ ಮಾಡಲಾಗುವುದು. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲ ನಾಯಕರು ಒಗ್ಗಟ್ಟಿನಿಂದ ಪಕ್ಷ ಸಂಘಟನೆ ಮಾಡಬೇಕು. ಲೋಕಸಭಾ ಚುನಾವಣೆಯಲ್ಲಿ ಎಲ್ಲ 28 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬೇಕು' ಎಂದು ಅಮಿತ್ ಶಾ ಸೂಚಿಸಿದರು. 'ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಪುತ್ರ ಕೆ.ಇ. ಕಾಂತೇಶ್ ಆಕಾಂಕ್ಷಿ ಯಾಗಿದ್ದಾನೆ. ಪುತ್ರನ ಸ್ಪರ್ಧೆಗೆ ಅನುವು ಮಾಡಿಕೊಡಬೇಕು' ಎಂದು ಈಶ್ವರಪ್ಪ ಮನವಿ ಮಾಡಿದರು ಎಂದೂ ಮೂಲಗಳು ತಿಳಿಸಿವೆ.

# ಎಸ್‌ಇಪಿಯಲ್ಲಿ ಗೊಂದಲ ಬೇಡ

## ಪರ್ಯಾಯ ಜನಪರ ಶಿಕ್ಷಣ ನೀತಿ: ರಾಜ್ಯಮಟ್ಟದ ಸಮಾವೇಶದಲ್ಲಿ ಆಗ್ರಹ

ಪ್ರಜಾವಾಣಿ ವಾರ್ತೆ


'ಕರ್ನಾಟಕಕ್ಕೆ ಜನಪರ ಶಿಕ್ಷಣ ನೀತಿ'ಯ ಕರಡು ಸಲ್ಲಿಕೆಗಾಗಿ ನಗರದಲ್ಲಿ ಬುಧವಾರ ನಡೆದ ರಾಜ್ಯಮಟ್ಟದ ಶೈಕ್ಷಣಿಕ ಸಮಾವೇಶದಲ್ಲಿ 'ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ'ಯ ರಾಜ್ಯ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಅವರಿಗೆ ಶಿಕ್ಷಣ ನೀತಿಯ ಮನವಿ ಪತ್ರ ಸಲ್ಲಿಸಲಾಯಿತು –ಪ್ರಜಾವಾಣಿ ಚಿತ್ರ

**ಬೆಂಗಳೂರು:** ರಾಷ್ಟ್ರೀಯ ಶಿಕ್ಷಣ ನೀತಿ ಸೃಷ್ಟಿಸಿದ ಗೊಂದಲ ರಾಜ್ಯ ಶಿಕ್ಷಣ ನೀತಿಯಲ್ಲಿ ಇರಬಾರದು. ವಿದ್ಯಾರ್ಥಿಗಳಿಗೆ ಮತ್ತು ವಿದ್ಯೆಗೆ ಪೂರಕವಾಗಿರಬೇಕು ಎಂಬ ಒಕ್ಕೊರಲ ಧ್ವನಿ ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶದಲ್ಲಿ ಕೇಳಿಬಂತು.

ಕರ್ನಾಟಕ ಜನಪರ ಶಿಕ್ಷಣ ನೀತಿಯ ಕರಡು ಸಲ್ಲಿಕೆಗಾಗಿ ಬುಧವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಮಾವೇಶ ಇದಕ್ಕೆ ವೇದಿಕೆಯಾಯಿತು.

ಕರ್ನಾಟಕ ರಾಜ್ಯ ಹೊಸ ಶಿಕ್ಷಣ ನೀತಿಯು ಶಿಕ್ಷಣ ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷ ಹಾಗೂ ವೈಜ್ಞಾನಿಕವಾಗಿ ಇರುವಂತೆ ನೋಡಿಕೊಳ್ಳಬೇಕು. ನುರಿತ ವ್ಯಕ್ತಿಗಳನ್ನು ಸೃಷ್ಟಿಸುವುದಷ್ಟೇ ಶಿಕ್ಷಣದ ಉದ್ದೇಶವಾಗಬಾರದು. ಸೃಜನಶೀಲ ಹಾಗೂ ವಿಮರ್ಶಾತ್ಮಕ ಚಿಂತನೆಯುಳ್ಳ ವ್ಯಕ್ತಿಗಳನ್ನು ಸೃಷ್ಟಿಸುವಂತಿರಬೇಕು. ಕ್ಯೂಬಾ ದೇಶದಲ್ಲಿ ಆರೋಗ್ಯ ಮತ್ತು ಶಿಕ್ಷಣ ಉಚಿತ. ಅದೇ ಮಾದರಿಯಲ್ಲಿ ಇಲ್ಲಿಯೂ ಆರೋಗ್ಯ ಮತ್ತು ಶಿಕ್ಷಣವನ್ನು ಸಾರ್ವತ್ರಿಕ ಖಾತ್ರಿಗೊಳಿಸಬೇಕು ಎಂದು ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಕುಲಪತಿ ವಿಕ್ಟರ್ ಲೋಬೊ ಒತ್ತಾಯಿಸಿದರು.

'ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಆಧುನಿಕ ಪದ್ಧತಿ ಎಂದು ಹೆಸರಿಗಷ್ಟೇ ಹೇಳಲಾಗಿದೆ. ಆದರೆ, ಎಲ್ಲವನ್ನು ಹಿಂದಕ್ಕೆ ಒಯ್ಯುವ ಮಾರ್ಗ ಇದಾಗಿದೆ. ಎನ್‌ಇಪಿ ಜಾರಿಯಾದ ಮೇಲೆ ಪದವಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಡಿಪ್ಲೊಮಾ ಮತ್ತು ನರ್ಸ್ ಕೋರ್ಸ್‌ಗಳಿಗೆ ಪ್ರವೇಶ ಹೆಚ್ಚಾಗಿದೆ ಎಂದು ಉಪನ್ಯಾಸಕಿ ಸಬಿತಾ ಬನ್ನಾಡಿ ತಿಳಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣಕ್ರಾಂತಿ ನಕ್ಸರ್ ಮಾತನಾಡಿ, 'ಎನ್‌ಇಪಿಯನ್ನು ಆಳವಾಗಿ ಅಧ್ಯಯನ ಮಾಡಿದಾಗ ಇದು ರಾಷ್ಟ್ರ ವಿರೋಧಿ ಶಿಕ್ಷಣ ನೀತಿ ಎಂಬುದು ಗೊತ್ತಾಗುತ್ತದೆ. ಬಹುಸಂಖ್ಯಾತ ಬಡ ಮತ್ತು ಮಧ್ಯಮ ವರ್ಗದ ಮಕ್ಕಳ ಶಿಕ್ಷಣವನ್ನು ಕಸಿದುಕೊಳ್ಳುವ ಹುನ್ನಾರ' ಎಂದು ವಿಶ್ಲೇಷಿಸಿದರು.

ರಾಜ್ಯ ಉಪಾಧ್ಯಕ್ಷ ವಿ.ಎನ್. ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿ, 'ಶೇ 94.5ರಷ್ಟು ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ನಾಲ್ಕು ವರ್ಷದ ಪದವಿಯನ್ನು ತಿರಸ್ಕರಿಸಿದ್ದಾರೆ. ಬಹುಪ್ರವೇಶ ಮತ್ತು ಬಹುನಿರ್ಗಮನ ಪದ್ಧತಿಯಿಂದ ಉದ್ಯೋಗ ಪಡೆಯಲು ಯಾವುದೇ ಸಹಾಯವಾಗುವುದಿಲ್ಲ ಎಂದು ಶೇ92.32 ಜನ ಅಭಿಪ್ರಾಯಪಟ್ಟಿದ್ದಾರೆ' ಎಂದು ವಿವರಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಾಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ತಜ್ಞರಾದ ಫ್ರಾನ್ಸಿಸ್ ಅಸ್ಸಿಸಿ ಅಲ್ಮೇಡಾ, ಅಬ್ದುಲ್ ಸುಭಾನ್, ಮಹೇಶ್ ಎಸ್. ರಾಜಶೇಖರ್ ವಿ.ಎನ್., ರಮೇಶ್ ಲಂಡನಕರ್, ಎಚ್.ಎಂ. ಸೋಮಶೇಖರಪ್ಪ, ಪಾಲ್ ನ್ಯೂಮನ್, ಸಗಾಯ್ ಮೇರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಗಣಿಗಾರಿಕೆ ಅವಧಿ ವಿಸ್ತರಣೆ ವರದಿ: ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಲ್ಲು ಗಣಿಗಾರಿಕೆ ಮತ್ತು ಎಂ-ಸ್ಯಾಂಡ್ ಸೇರಿದಂತೆ ಉಪ ಖನಿಜಗಳ ಗಣಿ ಗುತ್ತಿಗೆ ಅವಧಿ ವಿಸ್ತರಿಸಲು ಅವಕಾಶ ಕಲ್ಪಿಸಿರುವ ತಿದ್ದುಪಡಿ ನಿಯಮವನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಸಮಗ್ರ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಆಮ್ ಆದ್ಮಿ ಪಕ್ಷದ ಹಾಸನ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪಿ.ಶಿವಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ವಿಜೇತಾ ಆರ್ ನಾಯಕ್, 'ರಾಜ್ಯ ಸರ್ಕಾರ ತಂದಿರುವ ತಿದ್ದುಪಡಿ ಅನುಸಾರ ನಿರ್ದಿಷ್ಟ ಖನಿಜಗಳಿಗೆ ಚಾಲ್ತಿ ಗಣಿ ಗುತ್ತಿಗೆ ಅವಧಿ 20 ವರ್ಷ ಇದ್ದುದನ್ನು 30 ವರ್ಷಕ್ಕೆ ಹಾಗೂ ಅನಿರ್ದಿಷ್ಟವಲ್ಲದ ಖನಿಜಗಳ ಅವಧಿ 30 ವರ್ಷ ಇದ್ದುದನ್ನು ಏಕಾಏಕಿ 50 ವರ್ಷಕ್ಕೆ ವಿಸ್ತರಿಸಲಾಗಿದೆ. ಇದು ಕಾನೂನು ಬಾಹಿರ' ಎಂದು ಆಕ್ಷೇಪಿಸಿದರು.

'ಹೊಸ ಹರಾಜಿಗೆ ಅವಕಾಶ ಕೊಡದೆ, ಚಾಲ್ತಿ ಗಣಿ ಗುತ್ತಿಗೆಗಳ ಅವಧಿಯನ್ನು ವಿಸ್ತರಿಸುವುದರಿಂದ ರಾಜ್ಯದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿಗಳ ನಷ್ಟ ವಾಗುತ್ತಿದೆ. ಅಂತೆಯೇ, ಗಣಿಗಾರಿಕೆಯಲ್ಲಿ ಹೊಸಬರಿಗೆ ಅವಕಾಶ ಸಿಗದಂತಾಗಿದೆ. ಚಾಲ್ತಿ ಗಣಿ ಗುತ್ತಿಗೆಗಳ ಅವಧಿ ವಿಸ್ತರಿಸುವುದರಿಂದ ಹಳೆಯ ಗಣಿ ಗುತ್ತಿಗೆದಾರರ ಪ್ರಾಬಲ್ಯ ಹೆಚ್ಚಾಗಿ ಏಕಸ್ವಾಮ್ಯತೆಗೆ ಅವಕಾಶ ಮಾಡಿಕೊಡಲಿದೆ' ಎಂದರು.

'ರಾಜ್ಯ ಸರ್ಕಾರ 2023ರ ಮಾರ್ಚ್ 17ರಂದು ಜಾರಿಗೆ ತಂದಿರುವ ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮ-2023ರ ನಿಯಮ 8(ಎ)(1) ಅನ್ನು ರದ್ದುಪಡಿಸಬೇಕು. ಗಣಿ ಗುತ್ತಿಗೆ ನೀಡುವ ಸಂಬಂಧ ಕೇಂದ್ರ ಸರ್ಕಾರದ ನಿಯಮಗಳನ್ನು ಪಾಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು. ಅರ್ಜಿ ವಿಲೇವಾರಿ ಆಗುವತನಕ ತಿದ್ದುಪಡಿ ನಿಯಮಗಳ ಜಾರಿಗೆ ತಡೆ ನೀಡಬೇಕು' ಎಂದು ಕೋರಿದರು. ಸರ್ಕಾರದ ಪರ ಹಾಜರಿದ್ದ ವಕೀಲ ಎಸ್.ಎಸ್. ಮಹೇಂದ್ರ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರಾದರೂ ನ್ಯಾಯಪೀಠ ಅದನ್ನು ಒಪ್ಪದೆ, 'ಇದೊಂದು ಗಂಭೀರ ವಿಷಯ. ಅರ್ಜಿಯಲ್ಲಿ ಆಕ್ಷೇಪಿಸಿರುವ ವಿಷಯಗಳ ಬಗ್ಗೆ ಸಮಗ್ರ ವರದಿ ಸಲ್ಲಿಸಿ' ಎಂದು ತಾಕೀತು ಮಾಡಿತು.

ಇದೇ ವೇಳೆ ಅರ್ಜಿಯಲ್ಲಿ ನಮ್ಮನ್ನೂ ಪ್ರತಿವಾದಿಯಾಗಿ ಸೇರ್ಪಡೆ ಮಾಡಬೇಕು ಎಂದು 'ಫೆಡರೇಷನ್ ಆಫ್ ಕರ್ನಾಟಕ ಗ್ರ್ಯಾನೈಟ್ ಇಂಡಸ್ಟ್ರಿ' ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದ ನ್ಯಾಯಪೀಠ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಲಾಗಿದೆ.






ಚಿಕ್ಕಬಾಣಾವರದ ರಾಘವೇಂದ್ರ ಬಡಾವಣೆಯಲ್ಲಿ ₹1.50 ಕೋಟಿ ವೆಚ್ಚದ ಡಾಂಬರು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್. ಮುನಿರಾಜು ಶಂಕುಸ್ಥಾಪನೆ ನೆರವೇರಿಸಿದರು.

## ಸಂಕ್ರಾಂತಿ: 13ರಿಂದ ಸುಗ್ಗಿ–ಹುಗ್ಗಿ ಕಾರ್ಯಕ್ರಮ

**ಬೆಂಗಳೂರು:** ಸಂಕ್ರಾಂತಿ ಹಬ್ಬದ ಅಂಗವಾಗಿ ಕೆಪಿಜಿ ತಂಡದ ವತಿಯಿಂದ ಇದೇ 13 ಮತ್ತು 14ರಂದು 2ನೇ ವರ್ಷದ 'ಸುಗ್ಗಿ ಹುಗ್ಗಿ–2024' ಕಾರ್ಯಕ್ರಮ ಜಕ್ಕೂರಿನಲ್ಲಿ ಆಯೋಜಿಸಲಾಗಿದೆ ಎಂದು ಮೀನಾಕ್ಷಿ ಕೃಷ್ಣ ಬೈರೇಗೌಡ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ರಾಮೀಣ ಜೀವನದ ಶ್ರೀಮಂತ ಬದುಕನ್ನು ನಗರ ನಿವಾಸಿಗಳಿಗೂ ಪರಿಚಯಿಸಬೇಕೆಂಬ ಉದ್ದೇಶದಿಂದ ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದಲ್ಲಿ ನಡೆಯಲಿರುವ ಸುಗ್ಗಿ–ಹುಗ್ಗಿ ಎಂಬ ಕಾರ್ಯಕ್ರಮದಲ್ಲಿ ಗ್ರಾಮೀಣ ಆಹಾರ ಪದ್ಧತಿ, ಸಂಪ್ರದಾಯ, ಸಂಸ್ಕೃತಿಯ ಕಾರ್ಯಕ್ರಮಗಳಿರುತ್ತವೆ. ಸಿರಿಧಾನ್ಯ ಮತ್ತು ಸಾವಯವ ಪದಾರ್ಥಗಳು ಸೇರಿದಂತೆ ವೈವಿಧ್ಯಮಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಾಡುವ 80ಕ್ಕೂ ಹೆಚ್ಚು ಮಳಿಗೆಗಳಿರಲಿವೆ' ಎಂದು ವಿವರಿಸಿದರು.

13ರ ಸಂಜೆ 4ಗಂಟೆಗೆ ನಡೆಯಲಿರುವ ಕಾರ್ಯಕ್ರಮಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಚಾಲನೆ ನೀಡಲಿದ್ದಾರೆ. ಸಾಂಸ್ಕೃತಿಕ ಮತ್ತು ಜಾನಪದ ನೃತ್ಯಗಳು ನಡೆಯಲಿದ್ದು, 14 ರಂದು ರಂಗೋಲಿ ಮತ್ತು ಚಿತ್ರಕಲೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಇದರಲ್ಲಿ ಬ್ಯಾಟರಾಯನಪುರ ಕ್ಷೇತ್ರದ ನಿವಾಸಿಗಳು ಮಾತ್ರ ಭಾಗ ವಹಿಸಬಹುದು. ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಗಾಯಕ ರಘು ದಿಕ್ಷೀತ್ ಅವರ ತಂಡ ಸಂಗೀತದ ರಸದೌತಣ ನೀಡಲಿದೆ' ಎಂದರು.

## ವಾಹನ ಡಿಕ್ಕಿ ಕೃಷ್ಣಮೃಗ ಸಾವು

**ಕೊಡಿಗೇನಹಳ್ಳಿ:** ಹೋಬಳಿಯ ಕಲಿದೇವಪುರ ಗ್ರಾಮದ ಹೊರ ವಲಯದಲ್ಲಿರುವ ಸ್ಯಾನ್‌ಸಿಟಿ ಸಮೀಪ ಮಂಗಳವಾರ ರಾತ್ರಿ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಗರ್ಭಾ ವಸ್ಥೆಯಲ್ಲಿದ್ದ ಮೂರು ವರ್ಷದ ಕೃಷ್ಣಮೃಗ ಮೃತಪಟ್ಟಿದೆ. ಅರಣ್ಯಾಧಿಕಾರಿ ತಿಪ್ಪೇಸ್ವಾಮಿ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಕೃಷ್ಣಮೃಗದ ದೇಹವನ್ನು ವಶಕ್ಕೆ ಪಡೆದಿದ್ದಾರೆ.

## ಕಳಪೆ ಕಾಮಗಾರಿಗೆ ಬಿಲ್ ಪಾವತಿ ಇಲ್ಲ: ಶಾಸಕ ಮುನಿರಾಜು

ಪ್ರಜಾವಾಣಿ ವಾರ್ತೆ

**ಪೀಣ್ಯ ದಾಸರಹಳ್ಳಿ:** 'ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಗಳು ಗುಣಮಟ್ಟದಿಂದ ಕೂಡಿರಬೇಕು. ಇಲ್ಲದೇ ಇದ್ದರೆ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡುವುದಿಲ್ಲ' ಎಂದು ಶಾಸಕ ಎಸ್. ಮುನಿರಾಜು ಎಚ್ಚರಿಕೆ ನೀಡಿದರು.

ಚಿಕ್ಕಬಾಣಾವರದ ರಾಘವೇಂದ್ರ ಬಡಾವಣೆಯಲ್ಲಿ ಪಿಡಬ್ಲ್ಯುಡಿಯಿಂದ ₹ 1.50 ಕೋಟಿ ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

'ಅಭಿವೃದ್ಧಿ ಕಾಮಗಾರಿಗಳನ್ನು ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಲಾಭದ ದೃಷ್ಟಿಯಿಂದ ಕಳಪೆ ಕಾಮಗಾರಿ ಮಾಡಿದರೆ ಯಾವುದೇ ಕಾರಣಕ್ಕೂ ಬಿಲ್ ಮಂಜೂರು ಮಾಡುವುದಿಲ್ಲ' ಎಂದು ತಿಳಿಸಿದರು.

ಎಂಜಿನಿಯರ್ ಮೋಹನ್ ಮಾತನಾಡಿ, 'ಮುಂದಿನ ವಾರದಿಂದ ಕೆಲಸ ಪ್ರಾರಂಭಿಸಲಾಗುತ್ತದೆ. ಗುಣಮಟ್ಟವನ್ನು ಪರಿಶೀಲಿಸಿ ಅಚ್ಚುಕಟ್ಟಾಗಿ ರಸ್ತೆ ಚರಂಡಿ ಅಭಿವೃದ್ಧಿ ಮಾಡಿಸಲಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

ಬಿಜೆಪಿ ಮುಖಂಡರಾದ ಬಿ.ಎಂ. ಚಿಕ್ಕಣ್ಣ, ಭಾಗ್ಯಮ್ಮ, ಎಂ.ಎಚ್. ಪಾಟೀಲ್, ನವೀನ್ ಕುಮಾರ್, ನಾರಾಯಣಸ್ವಾಮಿ, ಪುರಸಭೆ ಮುಖ್ಯ ಅಧಿಕಾರಿ ಎಚ್.ಎ. ಕುಮಾರ್, ಎಂಜಿನಿಯರ್ ಮೋಹನ್ ಇದ್ದರು.

## ಚುನಾವಣೆ: 5000ಕ್ಕೂ ಹೆಚ್ಚು ಸಲಹೆ ಸ್ವೀಕಾರ


**ನವದೆಹಲಿ (ಪಿಟಿಐ):** 'ಒಂದು ದೇಶ, ಒಂದು ಚುನಾವಣೆ' ಕುರಿತಂತೆ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ನೇತೃತ್ವದಲ್ಲಿ ರಚನೆಯಾಗಿರುವ ಸಮಿತಿಯು ಈವರೆಗೆ ಸಾರ್ವಜನಿಕರಿಂದ 5,000ಕ್ಕೂ ಹೆಚ್ಚು ಸಲಹೆಗಳನ್ನು ಸ್ವೀಕರಿಸಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ. ಸಮಿತಿಯು ಕಳೆದ ವಾರ, ದೇಶದಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತಂತೆ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿತ್ತು. ಜನವರಿ 15ರವರೆಗೆ ಸಲ್ಲಿಕೆಯಾಗುವ ಸಲಹೆಗಳನ್ನು ಪರಿಗಣಿಸಲಾಗುವುದು ಎಂದು ಸಮಿತಿಯು ಹೇಳಿಕೆಯಲ್ಲಿ ತಿಳಿಸಿದೆ.

## ನಗರದಲ್ಲಿ ಇಂದು

**ಕರ್ನಾಟಕ ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟ:** ಉದ್ಘಾಟನೆ: ಎಸ್. ಮರಿಸ್ವಾಮಿ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ ಕ್ರೀಡಾಂಗಣ, ಕೋರಮಂಗಲ, ಬೆಳಿಗ್ಗೆ 9

**ತಂತ್ರಜ್ಞಾನದ ಮೂಲಕ ಜೀವ ವಿಜ್ಞಾನದ ಅನಾವರಣ:** ಅತಿಥಿಗಳು: ಲಿಂಗರಾಜ ಗಾಂಧಿ, ಜವರೇಗೌಡ ಟಿ., ಆನಂದ ಕುಮಾರ್ ಸಿ.ಎಸ್., ಭಾಷಣಕಾರರು: ಡಾ. ಗಾಯಿತ್ರಿ ಎನ್., ಡಾ. ಚಂದ್ರಶೇಖರ ರಾವ್, ಡಾ.ಎಸ್. ಚಂದ್ರಶೇಖರ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 9.30

**'ಸ್ಟೂಡೆಂಟ್ ಲಿಟ್ ಫೆಸ್ಟ್' ಉದ್ಘಾಟನೆ:** ಅತಿಥಿಗಳು: ರಿಕ್ಕಿ ಕೇಜ್, ಪ್ರಕಾಶ್ ಬೆಳವಾಡಿ, ವಂಶಿ ಜುಲುರಿ, ಟಿ.ವಿ. ರಾಜು, ರಾಜೇಶ ಅರುಚಾಮಿ, 'ಹೊಸ ಭಾರತ ಹೊಸ ಕಥೆ' ಕುರಿತು ಸಂವಾದ: ವಂಶಿ ಜುಲುರಿ, ಎಸ್. ಗಿರಿಧರ್ ಪ್ರದ್ಯುಮ್ನ ಎ.ಕೆ., ಆಯೋಜನೆ: ಫ್ರೀ ಸ್ಪೇಸ್ ಫೋರಂ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 9.40ರಿಂದ



ರಿಕ್ಕಿ ಕೇಜ್

**ಶಾಲಾ ವಾರ್ಷಿಕೋತ್ಸವ:** ಅತಿಥಿಗಳು: ನಿಂಗರಾಜಪ್ಪ ಕೆ.ಬಿ., ಶಶಿಕಲಾ, ಅಧ್ಯಕ್ಷತೆ: ಇಬಿ.ಎನ್. ರವಿಚಂದ್ರ ರೆಡ್ಡಿ, ಚಂದ್ರಶೇಖರ ರಾಜು ಪಿ., ಸಿ.ಆರ್. ನಾರಾಯಣಪ್ಪ, ಭಾಗೀರಥಿ ಜಯರಾಮ್, ಆಯೋಜನೆ ಮತ್ತು ಸ್ಥಳ: ಮಾಡೆಲ್ ಎಜುಕೇಷನ್ ಸೊಸೈಟಿ, ಜಯನಗರ, ಬೆಳಿಗ್ಗೆ 10.30

**'ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಓದು' ಕಾರ್ಯಕ್ರಮ:** ಉದ್ಘಾಟನೆ: ಬಿ.ಎಂ. ಪಟೇಲ್ ಪಾಂಡು, ಸಂಪನ್ಮೂಲ ವ್ಯಕ್ತಿ: ಎನ್. ಹನುಮಂತ ರಾಯಪ್ಪ, ಅಧ್ಯಕ್ಷತೆ: ಬಿ.ಪಿ. ಹರ್ಷ, ಅತಿಥಿಗಳು: ಅಶೋಕ ಎನ್. ಚಲವಾದಿ, ರಂಗಪ್ಪ ಮಾದಲಗೆರೆ, ರಾಮಪ್ಪ, ಆಯೋಜನೆ: ಡಾ.ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಸ್ಥಳ: ಪಟೇಲ್ ಗುಳ್ಳಪ್ಪ ಕಾಲೇಜು ಸಭಾಂಗಣ, ಆವಲಹಳ್ಳಿ, ಮೈಸೂರು ರಸ್ತೆ, ಬೆಳಿಗ್ಗೆ 11

**'ತರಂಗ–2024' ಕಾರ್ಯಕ್ರಮದ ಉದ್ಘಾಟನೆ:** ಕೃಷ್ಣ ಬೈರೇಗೌಡ, ಅತಿಥಿಗಳು: ಅಮೃತವರ್ಷಿಣಿ, ಅರ್ಜುನ್ ಜನ್ಯಾ, ವಾಸುದೇವನ್ ಭಾಸ್ಕರನ್, ಅರ್ಜುನ್ ಹಾಲಪ್ಪ, ಉಪಸ್ಥಿತಿ: ಡಿ. ಹೇಮಚಂದ್ರ ಸಾಗರ್, ಡಿ. ಪ್ರೇಮಚಂದ್ರ ಸಾಗರ್, ತಿಂತಿಷಾ ಎಚ್. ಸಾಗರ್, ರೋಹನ್ ಪ್ರೇಮ್ ಸಾಗರ್, ನತಾಶಾ ಎಚ್. ಸಾಗರ್, ನಿಶಾನ ಎಚ್. ಸಾಗರ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ವಿಶ್ವವಿದ್ಯಾಲಯ, ಹಾರೋಹಳ್ಳಿ, ಕನಕಪುರ ರಸ್ತೆ, ಬೆಳಿಗ್ಗೆ 10.30

**'ಸೌಹಾರ್ದ ಪರಂಪರೆ ಮತ್ತು ಸಮಕಾಲೀನತೆ' ರಾಜ್ಯ ಸಮಾವೇಶ:** ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಮಾತನಾಡುವವರು: ಎಚ್. ಎನ್. ನಾಗಮೋಹನ ದಾಸ್, ಅರವಿಂದ ಮಾಲಗತ್ತಿ, ಸಲೀಂ ಅಹಮದ್, ಎಚ್.ಎಲ್. ಪುಷ್ಪ, ಬಡಗಲಪುರ ನಾಗೇಂದ್ರ, ಯು. ಬಸವರಾಜ, ಅಧ್ಯಕ್ಷತೆ: ಕೆ. ಮರುಳಸಿದ್ಧಪ್ಪ, ಆಯೋಜನೆ: ಸೌಹಾರ್ದ ಕರ್ನಾಟಕ, ಸ್ಥಳ: ಮೇರಿ ದೇವಾಸಿಯಾ ಸಭಾಂಗಣ, ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30


ನಾಗಮೋಹನ್ ದಾಸ್

**ರಂಗಜಂಗಮ ಸಿಜಿಕೆ, ಟೆಲಿಕಾಂ ದತ್ತಾತ್ರೇಯ ಅವರ ನೆನಪಿನ ಅಂಗವಾಗಿ ರಂಗಸಂಗೀತ, ಅಭಿನಂದನೆ, ನಾಟಕಗಳ ಪ್ರದರ್ಶನ:** 'ಕುದುರೆ ಮೊಟ್ಟೆ' ನಾಟಕ ಪ್ರದರ್ಶನ: ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ಜಿ.ಪಿ.ಒ ಚಂದ್ರು, ಅಧ್ಯಕ್ಷತೆ: ಎನ್.ಆರ್. ಹೆಗಡೆ, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಆರ್. ನರೇಂದ್ರಬಾಬು, ಸದ್ಯೋಜಾತ ಶಾಸ್ತ್ರಿ, ಅಭಿನಂದನೆ: ಕೆ. ಷರೀಫಾ, ಎಚ್.ಎನ್. ಆರತಿ, ದು. ಸರಸ್ವತಿ, ರಾಜಪ್ಪ ದಳವಾಯಿ, ಲಕ್ಷ್ಮೀಪತಿ ಕೋಲಾರ, ತಿಪ್ಪೇಸ್ವಾಮಿ ಚಳ್ಳಕೆರೆ, ಶಶಿಧರ ಅಡಪ, ರಾಜಗುರು, 'ಉಧೋ ಉಧೋ ಎಲ್ಲವ್ವ' ಏಕವ್ಯಕ್ತಿ ರಂಗಪ್ರಯೋಗ: ರಚನೆ: ಬೇಲೂರು ರಘುನಂದನ್, ನಿರ್ದೇಶನ: ಕೃಷ್ಣಮೂರ್ತಿ ಕವತ್ತಾರ್, ಆಯೋಜನೆ: ರಂಗಚಂದಿರ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5ರಿಂದ

**ಗಮಕ ವಾಚನ ವ್ಯಾಖ್ಯಾನ ಕುರಿತು ಉಪನ್ಯಾಸ:** ಎಂ.ಬಿ. ಬುಡೇನ್‌ಸಾಬ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

**'ಸರಸ ವಿರಸ ಸಮರಸ' ನಾಟಕ ಪ್ರದರ್ಶನ:** ನಿರ್ದೇಶನ: ಜೋಸೆಫ್ ಜಾನ್, ಆಯೋಜನೆ: ನಾಟಕ ಬೆಂಗಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸುಚನಾ ಸೇಠ್ ತಂಗಿದ್ದ ಕೊಠಡಿಯಲ್ಲಿ ಕೆಮ್ಮಿನ ಸಿರಪ್‌ನ 2 ಖಾಲಿ ಬಾಟಲ್ ಪತ್ತೆ; ಎಲ್ಲ ಆಯಾಮದಲ್ಲಿ ತನಿಖೆ

# ಮಗು ಕೊಲೆ ಪೂರ್ವ ಯೋಜಿತ ಕೃತ್ಯ: ಶಂಕೆ

ಪಣಜಿ (ಪಿಟಿಐ): 'ನಾಲ್ಕು ವರ್ಷದ ಪುತ್ರನನ್ನು ಕೊಲೆ ಮಾಡಿದ ಆರೋಪದಲ್ಲಿ ಬಂಧಿಸಲಾಗಿರುವ 'ಮೈಂಡ್‌ಫುಲ್ ಎ.ಐ ಲ್ಯಾಬ್' ನವೋದ್ಯಮ ಕಂಪನಿಯ ಮಹಿಳಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಸುಚನಾ ಸೇಠ್ ತಂಗಿದ್ದ ಕೊಠಡಿಯಲ್ಲಿ ಕೆಮ್ಮಿನ ಸಿರಪ್‌ನ ಎರಡು ಖಾಲಿ ಬಾಟಲಿಗಳು ಪತ್ತೆಯಾಗಿವೆ. ಮಗುವಿನ ಕೊಲೆ ಒಂದು ಪೂರ್ವ ಯೋಜಿತ ಕೃತ್ಯದಂತೆ ಕಾಣಿಸುತ್ತಿದೆ' ಎಂದು ಗೋವಾ ಪೊಲೀಸರು ಶಂಕಿಸಿದ್ದಾರೆ.



ಸುಚನಾ ಸೇಠ್

ಮಹಿಳೆ ತಂಗಿದ್ದ ಸರ್ವೀಸ್ ಅಪಾರ್ಟ್‌ಮೆಂಟ್ ಕೊಠಡಿಯ ತಪಾಸಣೆಯ ವೇಳೆ ಕೆಮ್ಮಿನ ಸಿರಪ್‌ನ ಎರಡು ಖಾಲಿ ಬಾಟಲಿಗಳು (ಒಂದು ದೊಡ್ಡದು ಮತ್ತು ಇನ್ನೊಂದು ಚಿಕ್ಕದು) ಪತ್ತೆಯಾಗಿರುವುದನ್ನು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪಿಟಿಐ'ಗೆ ಖಚಿತಪಡಿಸಿದ್ದಾರೆ.

'ದಿಂಬು ಅಥವಾ ಬಟ್ಟೆ ಬಳಸಿ ಉಸಿರುಗಟ್ಟಿಸಿ ಸಾಯಿಸಿರುವುದು ಮರಣೋತ್ತರ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಮಗು ಸಾಯುವಾಗ ಒದ್ದಾಡಿಲ್ಲ. ಮಗುವಿಗೆ ಹೆಚ್ಚಿನ ಪ್ರಮಾಣದಲ್ಲಿ ಔಷಧಿ ನೀಡಿರುವ ಸಾಧ್ಯತೆಯ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ. ಇದೊಂದು ಪೂರ್ವ ಯೋಜಿತ ಕೊಲೆಯಂತೆ ಕಾಣಿಸುತ್ತಿದೆ' ಎಂದು ಅವರು ತಿಳಿಸಿದ್ದಾರೆ.

'ಅಪಾರ್ಟ್‌ಮೆಂಟ್ ಸಿಬ್ಬಂದಿಯನ್ನು ವಿಚಾರಿಸಿದಾಗ, ಮಹಿಳೆಯು ತನಗೆ ಕೆಮ್ಮು ಇರುವುದಾಗಿ ಹೇಳಿ, ಕೆಮ್ಮಿನ ಸಿರಪ್‌ನ ಸಣ್ಣ ಬಾಟಲಿ ತಂದುಕೊಡುವಂತೆ ಮೊದಲು ಕೇಳಿದ್ದರು. ನಂತರ ಇನ್ನೊಂದು ದೊಡ್ಡ ಬಾಟಲಿಯನ್ನು ತರುವಂತೆ ಸಿಬ್ಬಂದಿಗೆ ಹೇಳಿದ್ದರು ಎನ್ನುವುದು ಗೊತ್ತಾಗಿದೆ. ಆದರೆ, ಆರೋಪಿಯು ವಿಚಾರಣೆಯಲ್ಲಿ ತಾನು ಕೊಲೆ ಮಾಡಿಲ್ಲ. ಮಗು ನಿದ್ರೆಯಲ್ಲೇ ಸತ್ತಿತ್ತು ಎಂದು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳೆಯ ಮಾತು ನಂಬಲು ನಾವು ಸಿದ್ಧವಿಲ್ಲ. ಮಗುವನ್ನು ಕೊಂದಿರುವುದರ ಹಿಂದಿನ ಉದ್ದೇಶ ಹೆಚ್ಚಿನ ತನಿಖೆಯಿಂದ ಬಹಿರಂಗವಾಗಲಿದೆ. ಸದ್ಯ, ಮಹಿಳೆ ಮತ್ತು ಆಕೆಯ ಪತಿ ದೂರವಾಗಿದ್ದರು. ಅದಕ್ಕಾಗಿಯೇ ಮಹಿಳೆ ಮಗು ಕೊಂದಿರಬಹುದೆಂಬ ಮಾಹಿತಿ ಇದೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಆರೋಪಿ ಮಹಿಳೆ ಸುಚನಾ ಸೇಠ್, ಗೋವಾದ ಕ್ಯಾಂಡೋಲೀಮ್‌ನಲ್ಲಿರುವ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ತನ್ನ ಮಗನನ್ನು ಕೊಂದು ಶವವನ್ನು ಬ್ಯಾಗ್‌ನಲ್ಲಿ ತುಂಬಿ ಕಾರಿನಲ್ಲಿ ಬೆಂಗಳೂರಿನತ್ತ ಸಾಗಿಸುತ್ತಿದ್ದಾಗ ಚಿತ್ರದುರ್ಗದ ಐಮಂಗಲ ಠಾಣೆಯ ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದರು. ಆರೋಪಿಯನ್ನು ಮಂಗಳವಾರ ಗೋವಾ ಪೊಲೀಸರಿಗೆ ಒಪ್ಪಿಸಿದ್ದರು.

## ಪುತ್ರನ ಅಂತ್ಯಕ್ರಿಯೆ ಕಣ್ಣೀರಿಟ್ಟ ತಂದೆ

ಬೆಂಗಳೂರು: ಗೋವಾದಲ್ಲಿ ಕೊಲೆಯಾದ ನಾಲ್ಕು ವರ್ಷದ ಮಗುವಿನ ಅಂತ್ಯಕ್ರಿಯೆ ರಾಜಾಜಿನಗರದ ಹರಿಶ್ಚಂದ್ರಘಾಟ್‌ನಲ್ಲಿ ಬುಧವಾರ ಬೆಳಿಗ್ಗೆ ನೆರವೇರಿತು.

ಅಂತ್ಯಕ್ರಿಯೆ ವೇಳೆ ಮಗುವಿನ ತಂದೆ ವೆಂಕಟರಮಣ್ ಅವರು ಕಣ್ಣೀರಿಟ್ಟರು. ಕೈಯಲ್ಲಿ ಮೃತದೇಹ ಹಿಡಿದು ಅಳುತ್ತಲೇ ಅಂತಿಮ ಸಂಸ್ಕಾರ ನೆರವೇರಿಸಿದರು. ಆಗ ಕುಟುಂಬದ ಸದಸ್ಯರ ಕಣ್ಣಾಲಿಗಳೂ ತೇವಗೊಂಡವು.

ಹಿರಿಯೂರು ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯ ಕುಮಾರನಾಯ್ಕ ನೇತೃತ್ವದಲ್ಲಿ ಮಗುವಿನ ಮರಣೋತ್ತರ ಪರೀಕ್ಷೆ ನಡೆಸಲಾಗಿತ್ತು. ಮಂಗಳವಾರ ಮಧ್ಯರಾತ್ರಿಯೇ ಮೃತದೇಹವನ್ನು ಆಂಬುಲೆನ್ಸ್‌ನಲ್ಲಿ ನಗರಕ್ಕೆ ತರಲಾಗಿತ್ತು. ಯಶವಂತಪುರ ಬಳಿಯ ಬ್ರಿಗೇಡ್ ಗೇಟ್ ವೇ ರೆಸಿಡೆನ್ಸಿಯಲ್ಲಿ ವೆಂಕಟರಮಣ ಅವರ ಫ್ಲ್ಯಾಟ್ ಇದ್ದು ಅಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

**ಮಾಹಿತಿ ಪಡೆದ ಪೊಲೀಸರು:** ರೆಸಿಡೆನ್ಸಿ ರಸ್ತೆಯ ಕಟ್ಟಡವೊಂದರಲ್ಲಿ ಸುಚನಾ ಸೇಠ್ ಅವರು 2021ರಲ್ಲಿ ತೆರೆದಿದ್ದ 'ಮೈಂಡ್‌ಫುಲ್ ಎಐ ಲ್ಯಾಬ್' ನವೋದ್ಯಮ ಕಂಪನಿ ಕಚೇರಿಗೆ ಅಶೋಕ ನಗರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

'ಅಲ್ಲಿ ಈಗ ಯಾವುದೇ ಕಚೇರಿ ಇಲ್ಲ. ಅಕ್ಕಪಕ್ಕದ ಮಳಿಗೆ ಮಾಲೀಕರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಗೋವಾ ಪೊಲೀಸರು ನಮ್ಮನ್ನು ಸಂಪರ್ಕಿಸಿಲ್ಲ. ಪ್ರಕರಣವನ್ನು ಗೋವಾ ಪೊಲೀಸರೇ ತನಿಖೆ ನಡೆಸುತ್ತಿದ್ದು, ಕಂಪನಿ ಸಂಬಂಧ ಮಾಹಿತಿ ಕೇಳಿದರೆ ನೀಡಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

**ಆರು ದಿನ ಪೊಲೀಸ್ ವಶಕ್ಕೆ:** ಸುಚನಾ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಗೋವಾ ಪೊಲೀಸರು ಆರು ದಿನ ತಮ್ಮ ವಶಕ್ಕೆ ಪಡೆದುಕೊಂಡರು.

'ಆರೋಪಿಯ ವಿಚಾರಣೆ ನಡೆಸಲಾಗುತ್ತಿದೆ. ಮಗುವನ್ನು ಕೊಲೆ ಮಾಡಿಲ್ಲ. ಇದು ಸ್ವಾಭಾವಿಕ ಸಾವು. ಬೆಳಿಗ್ಗೆ ಎದ್ದು ನೋಡುವಷ್ಟರಲ್ಲಿ ಮಗು ಮೃತಪಟ್ಟಿತ್ತೆಂದು ವಿಚಾರಣೆಯಲ್ಲಿ ಆರೋಪಿ ಹೇಳಿಕೆ ನೀಡಿದ್ದಾರೆ' ಎಂದು ಗೋವಾ ಪೊಲೀಸ್ ಮೂಲಗಳು ತಿಳಿಸಿವೆ.

'ಮಗುವಿನ ಕುತ್ತಿಗೆ ಭಾಗವನ್ನು ಬಿಗಿಹಿಡಿದು ಉಸಿರುಗಟ್ಟಿಸಲಾಗಿದೆ. ದಿಂಬು ಬಳಸಿ ಕೃತ್ಯ ಎಸಗಿರಬಹುದು. ದೇಹದ ಯಾವುದೇ ಭಾಗದಲ್ಲಿ ಗಾಯದ ಗುರುತುಗಳು ಇಲ್ಲ' ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದರು ಹೇಳಿದ್ದಾರೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ಬೆಂಗಳೂರಿನ ಬೇರೆ ಬೇರೆ ಭಾಗದಲ್ಲಿ ನವೋದ್ಯಮ ಕಚೇರಿ ಆರಂಭಿಸಲು ಸುಚನಾ ಜಾಗ ಪಡೆದುಕೊಂಡಿದ್ದರು. ಕೆಲವು ಕಡೆ ಒಂದು ದಿನ ಮಾತ್ರ ಇರುತ್ತಿದ್ದರು. ಜಾಗ ಪಡೆದುಕೊಳ್ಳಲು ಮಲ್ಲೇಶ್ವರದಲ್ಲಿ ಮನೆಯಿದೆ ಎಂದು ವಿಳಾಸ ನೀಡಿದ್ದರು. ವಿಳಾಸ ಜತೆಗೆ ನೀಡಿದ್ದ ಮೊಬೈಲ್ ನಂಬರ್ ಸ್ವಿಚ್ಡ್ ಆಫ್ ಆಗಿದೆ. ಸುಚನಾ ಅವರು ಪ್ರವಾಸ ಹಾಗೂ ಕಂಪನಿ ಕೆಲಸದ ಸಂಬಂಧ ಆಗಾಗ್ಗೆ ಗೋವಾಕ್ಕೆ ತೆರಳುತ್ತಿದ್ದರು' ಎಂದು ಮೂಲಗಳು ಹೇಳಿವೆ.

## ಹೈಕೋರ್ಟ್ ಕಟ್ಟಡ ಸಮಿತಿ ಅಭಿಪ್ರಾಯ ತಿಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ಕಟ್ಟಡ ವಿಸ್ತರಣೆಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸುವ ವಿಚಾರದಲ್ಲಿ ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ನಿಮ್ಮ ಅಭಿಪ್ರಾಯಗಳೇನು ಎಂಬುದನ್ನು ನಮ್ಮ ಪೀಠದ ಮುಂದೆ ಮಂಡಿಸಿ' ಎಂದು ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠವು, 'ಹೈಕೋರ್ಟ್ ಕಟ್ಟಡ ಸಮಿತಿ'ಗೆ ಸೂಚಿಸಿದೆ.

ಈ ಸಂಬಂಧ ಸಲ್ಲಿಸಲಾಗಿರುವ ಎರಡು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು. ವಿಚಾರಣೆಯನ್ನು ಮೂರು ವಾರಗಳ ಕಾಲ ಮುಂದೂಡಲಾಗಿದೆ.

ಪ್ರಸ್ತಾವನೆ: 'ಹೈಕೋರ್ಟ್ ಆಡಳಿತ ವ್ಯವಹಾರಗಳ ನಿರ್ವಹಣೆಗಾಗಿ ಕಬ್ಬನ್ ಪಾರ್ಕ್‌ನಲ್ಲಿರುವ ಚುನಾವಣಾ ಆಯೋಗದ ಹಳೆಯ ಕಟ್ಟಡವನ್ನು ನೆಲಸಮಗೊಳಿಸಿ, ಅಲ್ಲಿಯೇ 10 ಮತ್ತು 3 ಮಹಡಿಯ ಪ್ರತ್ಯೇಕ ಕಟ್ಟಡಗಳನ್ನು ನಿರ್ಮಾಣ ಮಾಡುವುದು ಹಾಗೂ ಹೈಕೋರ್ಟ್ ಆವರಣದಲ್ಲಿರುವ ಕ್ಯಾಂಟೀನ್ ಕಟ್ಟಡದ ಮೇಲೆ ಕಟ್ಟಡವೊಂದನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದಲ್ಲದೇ ಇನ್ನೂ ಮೂರು ಪ್ರಸ್ತಾವನೆಗಳಿವೆ' ಎಂದು ರಾಜ್ಯ ಸರ್ಕಾರ ಈ ಹಿಂದಿನ ವಿಚಾರಣೆ ವೇಳೆ ನ್ಯಾಯಪೀಠಕ್ಕೆ ತಿಳಿಸಿತ್ತು.

ಇದನ್ನು ಪರಿಗಣಿಸಿದ್ದ ನ್ಯಾಯಪೀಠ, 'ಸರ್ಕಾರದ ಪ್ರಸ್ತಾವನೆಗಳನ್ನು ಪರಿಶೀಲನೆ ನಡೆಸಿ ಅಭಿಪ್ರಾಯ ತಿಳಿಸಬೇಕು' ಎಂದು ಹೈಕೋರ್ಟ್ ಕಟ್ಟಡ ಸಮಿತಿಗೆ ಸೂಚಿಸಿತ್ತು.

'ಬೆಂಗಳೂರಿನ ಹೈಕೋರ್ಟ್ ಕಟ್ಟಡದ ನೆಲಮಹಡಿಯಲ್ಲಿ ಇರುವ ಕಚೇರಿಗಳನ್ನು ಸ್ಥಳಾಂತರಿಸಲು ಸೂಕ್ತ ಆದೇಶ ಹೊರಡಿಸಬೇಕು' ಎಂದು ಕೋರಿ ವಕೀಲ ಎಲ್. ರಮೇಶ್ ನಾಯಕ್ ಮತ್ತು 'ಹೈಕೋರ್ಟ್ ಕಟ್ಟಡ ಸಂಕೀರ್ಣಕ್ಕೆ ಬೆಂಗಳೂರಿನ ಕೇಂದ್ರ ಭಾಗದಲ್ಲಿ 30ಕ್ಕೂ ಹೆಚ್ಚು ಎಕರೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಶರಣ ದೇಸಾಯಿ ಈ ಅರ್ಜಿಗಳನ್ನು ಸಲ್ಲಿಸಿದ್ದಾರೆ.

# ಹಣಕ್ಕಾಗಿ ಅಪಹರಣ: ವ್ಯಕ್ತಿ ಕೊಲೆ

ಜ್ಞಾನ ಭಾರತಿ ಠಾಣೆ ಪೊಲೀಸರ ಕಾರ್ಯಾಚರಣೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣಕ್ಕಾಗಿ ವ್ಯಕ್ತಿಯೊಬ್ಬರನ್ನು ಅಪಹರಿಸಿ, ಕೊಲೆ ಮಾಡಿ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮಸಂದ್ರ ಗಾಯತ್ರಿ ಲೇಔಟ್‌ನ ಸಂಜಯ್ (25), ಮಂಗನಹಳ್ಳಿ ಕ್ರಾಸ್ ಎಸ್.ಎಂ.ವಿ ಲೇಔಟ್ 5ನೇ ಬ್ಲಾಕ್‌ನ ಆನಂದ ಹಾಗೂ ನಾಗದೇವಹಳ್ಳಿ ನಿವಾಸಿ ಹನುಮಂತು ಬಂಧಿತರು.

'ಕಿಶನ್ ಕುಮಾರ್ ಎಂಬ ಯುವಕನನ್ನು ಅಪಹರಿಸಿ, ಹಣ ಸುಲಿಗೆಗೆ ಪ್ರಯತ್ನಿಸಿದ್ದರು. ಆತನನ್ನು ಸ್ಥಳೀಯರು ರಕ್ಷಿಸಿ ವಾಪಸ್ ಕಳುಹಿಸಿದ್ದರು. ಅದು ವಿಫಲವಾದ ಮೇಲೆ ಗುರುಸಿದ್ದಪ್ಪ ಎಂಬಾತನನ್ನು ಅಪಹರಿಸಿ, ಜೀವಂತವಾಗಿ ಬಿಟ್ಟರೆ ತೊಂದರೆ ಮಾಡಬಹುದು ಎಂಬ ಭಯದಿಂದ ರಾಮನಗರ ಜಿಲ್ಲೆ ಕೂಟಗಲ್ ತಿಮ್ಮಪ್ಪಸ್ವಾಮಿ ಬೆಟ್ಟಕ್ಕೆ ತೆರಳುವ ರಸ್ತೆಯಲ್ಲಿ ಕೊಲೆ ಮಾಡಿ ಪರಾರಿಯಾಗಿದ್ದರು. ಮೂವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'15 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಸಂಜಯ್ ಮಂಗನಗಳ್ಳಿಯಲ್ಲಿ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ. ತರಕಾರಿ ಡೆಲಿವರಿ ಕೆಲಸ ಮಾಡುತ್ತಿದ್ದ ಆನಂದ್, ಹಲವು ಸುಲಿಗೆ ಕೃತ್ಯಗಳಲ್ಲಿ ಭಾಗಿಯಾಗಿದ್ದ. ಮೂಲತಃ ರಾಯಚೂರಿನ ಹನುಮಂತ ನಾಗದೇವಹಳ್ಳಿಯಲ್ಲಿ ನೆಲೆಸಿದ್ದ. ಮೂವರು ಆರೋಪಿಗಳು ಪರಿಚಯಸ್ಥರಾಗಿದ್ದರು. ಹಣಕ್ಕಾಗಿ ಸ್ಥಿತಿವಂತರನ್ನು ಹುಡುಕಿ ಅಪಹರಿಸುತ್ತಿದ್ದರು. ಗಾಂಜಾ ವ್ಯಸನಿಗಳಾಗಿದ್ದರು' ಎಂದು ಪೊಲೀಸರು ಹೇಳಿದರು.



ಸಂಜಯ್ ಆನಂದ್ ಹನುಮಂತ

ಅಪರಾಧ ಸುದ್ದಿ

'ಕಾರ್ಪೆಂಟರ್ ಕೆಲಸ ಮಾಡುತ್ತಿದ್ದ ಸಂಜಯ್‌ಕುಮಾರ್ ಪಂಡಿತ್ ಅವರಿಗೆ ಕರೆ ಮಾಡಿ, ತಮ್ಮ ಜತೆಗೆ ಕೆಲಸವಿದ್ದು, ತಮ್ಮೊಂದಿಗೆ ಮಾತನಾಡಬೇಕೆಂದು ಆರೋಪಿಗಳು ಹೇಳಿದ್ದರು. ನಾನು ಕುಂದಾಪುರದಲ್ಲಿದ್ದು ನನ್ನ ಬಳಿ ಕೆಲಸಕ್ಕಿರುವ ಕಿಶನ್‌ಕುಮಾರ್‌ನನ್ನು ಸ್ಥಳಕ್ಕೆ ಕಳುಹಿಸುವುದಾಗಿ ಪಂಡಿತ್ ತಿಳಿಸಿದ್ದರು. ಆರೋಪಿಗಳು ತಿಳಿಸಿದ ಕೃಷ್ಣ ಅರಮನೆ ಹೋಟೆಲ್ ಬಳಿಗೆ ಅಂದು ಕಿಶನ್ ತೆರಳಿದ್ದರು. ಅಲ್ಲಿಗೆ ಬಂದಿದ್ದ ಮೂವರು ಆರೋಪಿಗಳು ಕಿಶನ್‌ನನ್ನು ಅಪಹರಿಸಿದ್ದರು. ₹10 ಸಾವಿರ ನೀಡಿದರೆ ವಾಪಸ್ ಕಳುಹಿಸುವುದಾಗಿ ಹೇಳಿದ್ದರು. ನನ್ನ ಬಳಿ ಹಣವಿಲ್ಲ ಎಂದಾಗ ಸಂಜಯ್‌ಕುಮಾರ್ ಪಂಡಿತ್‌ನಿಂದ ₹1 ಲಕ್ಷ ಕೊಡಿಸುವಂತೆ ಬೇಡಿಕೆಯಿಟ್ಟಿದ್ದರು. ಅದಾದ ಮೇಲೆ ಚಾಕು ತೋರಿಸಿ ಕುಂದಾಪುರಕ್ಕೆ ಕರೆದೊಯ್ಯುವ ಪ್ರಯತ್ನ ಮಾಡಿದ್ದರು' ಎಂದು ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ಮಾಹಿತಿ ನೀಡಿದರು.

### 'ಸ್ಥಳೀಯರಿಂದ ರಕ್ಷಣೆ'

ಕಾರಿನಲ್ಲಿ ತೆರಳುತ್ತಿದ್ದಾಗ ಮಧ್ಯದಲ್ಲಿ ಕಿಶನ್ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ಕಿರುಚಿಕೊಂಡಾಗ ಕಾರಿನಿಂದ ಇಳಿಸಿ ಪರಾರಿಯಾಗಿದ್ದರು. ಸ್ಥಳೀಯರ ನೆರವಿನಿಂದ ಕಿಶನ್ ಬೆಂಗಳೂರಿಗೆ ವಾಪಸ್ ಆಗಿದ್ದರು. ಸಂಜಯ್ ಕುಮಾರ್ ಅವರು ಬೆಂಗಳೂರಿಗೆ ವಾಪಸ್ ಬಂದ ಮೇಲೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡು ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು ಎಂದರು.

'ಮೊದಲ ಪ್ರಯತ್ನ ವಿಫಲವಾದ ಮೇಲೆ ಆರೋಪಿ ಸಂಜಯ್‌ಗೆ ಪರಿಚಯವಿದ್ದ ಆಟೊಮೊಬೈಲ್ ಕಂಪನಿಯಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿದ್ದ ಗುರುಸಿದ್ದಪ್ಪ ಎಂಬುವವರನ್ನು ಅಪಹರಣ ಮಾಡಿದ್ದರು. ಆತನನ್ನು ಬೆದರಿಸಿ ಹಣ ಸುಲಿಗೆ ಮಾಡಿ ಕಾರಿನಲ್ಲಿ ಹಲವು ಕಡೆ ಸುತ್ತಾಡಿಸಿದ್ದರು. ಜೀವಂತಾಗಿ ವಾಪಸ್ ಕಳುಹಿಸಿದರೆ, ತೊಂದರೆ ಮಾಡುವ ಭಯದಿಂದ ತಿಮ್ಮಪ್ಪಸ್ವಾಮಿ ಬೆಟ್ಟಕ್ಕೆ ತೆರಳುವ ಮಾರ್ಗದಲ್ಲಿ ಕೊಲೆ ಮಾಡಿ ಮೃತದೇಹ ಎಸೆದು ಹೋಗಿದ್ದರು' ಎಂದು ಮಾಹಿತಿ ನೀಡಿದರು.

'ಬಂಧಿತರಿಂದ ₹2.40 ಲಕ್ಷ ನಗದು, ಚಿನ್ನದ ಚೈನು, ಕೃತ್ಯಕ್ಕೆ ಉಪಯೋಗಿಸಿದ್ದ ಎರಡು ಮೊಬೈಲ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

## ಗುರುಕಿರಣ್ ಅತ್ತೆ ಮನೆಯಲ್ಲಿ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತ ನಿರ್ದೇಶಕ ಗುರುಕಿರಣ್ ಅವರ ಅತ್ತೆ ಕಸ್ತೂರಿ ಶೆಟ್ಟಿ ಅವರ ಮನೆಯಲ್ಲಿ ನಗದು ಕಳವು ಮಾಡಲಾಗಿದ್ದು ಈ ಸಂಬಂಧ ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಡಿಯಾ ಲೇಔಟ್‌ನಲ್ಲಿ ಕಸ್ತೂರಿ ಶೆಟ್ಟಿ ಅವರ ಮನೆಯಿದೆ. ಮನೆ ಬೀರುವಿನಲ್ಲಿ ಇಡಲಾಗಿದ್ದ ₹2.5 ಲಕ್ಷ ನಗದು ಕಳವು ಮಾಡಲಾಗಿದೆ.

'ಡಿ.31ರಂದು ಮಧ್ಯಾಹ್ನ ಹಣ ತಂದು ಬೀರುವಿನಲ್ಲಿಟ್ಟಿದ್ದೆ. ಸಂಜೆ ನೋಡಿದಾಗ ಹಣ ಇರಲಿಲ್ಲ ಎಂದು ದೂರು ನೀಡಿದ್ದಾರೆ. ಮನೆಯಲ್ಲಿ ಕೆಲಸಕ್ಕಿದ್ದ ಮಹಿಳೆಯೊಬ್ಬರ ಮೇಲೆ ಅನುಮಾನಗೊಂಡು, ದೂರು ನೀಡಿದ್ದಾರೆ. ಆರು ತಿಂಗಳಿಂದ ಮನೆಯಲ್ಲಿ ಕೆಲಸ ಮಾಡುತ್ತಿದ್ದ ರತ್ನಮ್ಮ ಅವರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಲಾಗಿದೆ. ಇನ್ನೂ ಆರೋಪಿಗಳು ಪತ್ತೆಯಾಗಿಲ್ಲ. ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು ಉತ್ತರ ಹಾಗೂ ಯಲಹಂಕ ತಾಲ್ಲೂಕು ಪಂಚಾಯಿತಿ ಕಾರ್ಯಾಲಯಗಳ ಆಶ್ರಯದಲ್ಲಿ ಮಿನಿ ವಿಧಾನಸೌಧದ ಆವರಣದಲ್ಲಿ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರದಲ್ಲಿ ಸರ್ಕಾರಿ ಕಚೇರಿಗಳ ಸಿಬ್ಬಂದಿಗೆ ರಕ್ತದೊತ್ತಡವನ್ನು ತಪಾಸಣೆ ನಡೆಸಲಾಯಿತು

## ಅಪಘಾತ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮಂಗನಹಳ್ಳಿಯಲ್ಲಿ ಮುಂದೆ ಚಲಿಸುತ್ತಿದ್ದ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ದೊಡ್ಡಬೆಲೆ ನಿವಾಸಿ ಪ್ರಶಾಂತ್ ಅಲಿಯಾಸ್ ಪ್ರಸಾದ್ (27) ಮೃತ ಬೈಕ್ ಸವಾರ.

ಎಲೆಕ್ಟ್ರೀಷಿಯನ್ ಕೆಲಸ ಮಾಡುತ್ತಿದ್ದ ಪ್ರಶಾಂತ್ ಅವರು ಮಂಗಳವಾರ ರಾತ್ರಿ 9.15ರ ಸುಮಾರಿಗೆ ಮೈಸೂರು ರಸ್ತೆ ಕಡೆಯಿಂದ ಮಾಗಡಿ ರಸ್ತೆ ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಮಂಗನಹಳ್ಳಿ ಸೇತುವೆ ಬಳಿ ಮುಂದೆ ಚಲಿಸುತ್ತಿದ್ದ ವಾಹನವನ್ನು ಹಿಂದಿಕ್ಕಲು ಹೋದಾಗ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾರೆ. ತೀವ್ರರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕೆಂಗೇರಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 'ನಮ್ಮ ಮೆಟ್ರೊ'ದಲ್ಲಿ ರೀಲ್ಸ್: ದಂಡ

ಬೆಂಗಳೂರು: 'ನಮ್ಮ ಮೆಟ್ರೊ'ದಲ್ಲಿ ರೀಲ್ಸ್ ಮಾಡಿ ಹುಚ್ಚಾಟ ನಡೆಸಿದ್ದ ಯುಟ್ಯೂಬರ್ ಸಂತೋಷ್ ಕುಮಾರ್ ಎಂಬಾತನಿಗೆ ಬಿಎಂಆರ್‌ಸಿಎಲ್ ₹500 ದಂಡ ವಿಧಿಸಿದೆ.

ಉಪ್ಪಾರಪೇಟೆ ಠಾಣೆ ಪೊಲೀಸರು, ಸಂತೋಷ್‌ಕುಮಾರ್‌ನನ್ನು ಕರೆಸಿ, ವಿಚಾರಣೆ ನಡೆಸಿ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ. 'ಬಂಡೆಪಾಳ್ಯದ ಗೆದ್ದನಹಳ್ಳಿಯ ನಿವಾಸಿ ಸಂತೋಷ್ ಕುಮಾರ್ ಡಿ.24ರಂದು ಪ್ರಯಾಣಿಕರಿಂದ ತುಂಬಿದ ಮೆಟ್ರೊ ರೈಲಿನಲ್ಲಿ ರೀಲ್ಸ್ ಮಾಡಿ, ಇನ್‌ಸ್ಟಾಗ್ರಾಮ್‌ನಲ್ಲಿ ಅಪ್‌ಲೋಡ್ ಮಾಡಿದ್ದ. ಅದನ್ನು ಗಮನಿಸಿದ ಮೆಟ್ರೊ ಸಿಬ್ಬಂದಿ, ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

## ಡೆಂಗಿ: 7 ದಿನದಲ್ಲಿ 150 ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆಯಿಂದಾಗಿ ರಾಜ್ಯದಲ್ಲಿ ಜ್ವರ ಪೀಡಿತರಾಗುತ್ತಿರುವವರ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಕಳೆದ ಏಳು ದಿನಗಳಲ್ಲಿ ಡೆಂಗಿ ಶಂಕೆ ಕಾರಣ 2,352 ಮಂದಿಗೆ ಪರೀಕ್ಷೆ ಮಾಡಲಾಗಿದೆ. ಅವರಲ್ಲಿ 150 ಮಂದಿಯಲ್ಲಿ ಡೆಂಗಿ ಜ್ವರ ದೃಢಪಟ್ಟಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ 2023ರಲ್ಲಿ 16,500ಕ್ಕೂ ಅಧಿಕ ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. 9 ಮಂದಿ ಮೃತಪಟ್ಟಿದ್ದರು. ಈ ವರ್ಷದ ಆರಂಭದಲ್ಲಿಯೂ ಜ್ವರಕ್ಕೆ ಒಳಗಾದ ಹಲವರಿಗೆ ಡೆಂಗಿ ಶಂಕೆ ಕಾರಣ ಪರೀಕ್ಷೆ ನಡೆಸಲಾಗುತ್ತಿದೆ. ಕಳೆದ ಏಳು ದಿನಗಳಲ್ಲಿ 1,371 ಮಂದಿಯ ರಕ್ತದ ಮಾದರಿಯನ್ನು ಪರಿಕ್ಷೆಗೆ ಒಳಪಡಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

### ನಿಧನ ವಾರ್ತೆ

## ಸಾಂಬ ಸದಾಶಿವ ಜೋಶಿ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ಹಿರಿಯ ಸಹೋದರ ಸಾಂಬ ಸದಾಶಿವ ಜೋಶಿ (90) ಅವರು ಬುಧವಾರ ನಿಧನರಾಗಿದ್ದಾರೆ.

ವಯೋಸಹಜ ಅನಾರೋಗ್ಯ ಸಮಸ್ಯೆ ಕಾರಣ ಅವರು ಇಲ್ಲಿನ ಸೇವಾ ಕ್ಷೇತ್ರ ಆಸ್ಪತ್ರೆಗೆ ದಾಖಲಾಗಿದ್ದರು. ಬ್ರಹ್ಮಚಾರಿಯಾಗಿದ್ದ ಅವರು, ಖಾದಿ ಗ್ರಾಮೋದ್ಯೋಗ ಆಯೋಗದಲ್ಲಿ ಕಾರ್ಯ ನಿರ್ವಹಿಸಿದ್ದರು. ಧಾರವಾಡದ ಕೆ.ಇ.ಬೋರ್ಡ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿಯೂ ಕೆಲವು ಕಾಲ ಕಾರ್ಯನಿರ್ವಹಿಸಿದ್ದರು.

## ಟಿ. ಸುಶೀಲಮ್ಮ



ಬೆಂಗಳೂರು: ಟಾಟಾನಗರದ ನಿವಾಸಿ ಟಿ. ಸುಶೀಲಮ್ಮ (83) ಅವರು ಮಂಗಳವಾರ ನಿಧನರಾದರು.

ಅವರಿಗೆ ಒಬ್ಬ ಮಗ ಮತ್ತು ಮಗಳು ಇದ್ದಾರೆ. ಹೆಬ್ಬಾಳದ ಚಿತಾಗಾರದಲ್ಲಿ ಮಂಗಳವಾರ ಮಧ್ಯಾಹ್ನ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾರ್ಗ ವಿಸ್ತರಣೆಗೊಂಡ ಬಳಿಕ ದಟ್ಟಣೆ : ಮೆಟ್ರೊ ರೈಲುಗಳ ಸಂಖ್ಯೆ ಹೆಚ್ಚಿಸಲು ಒತ್ತಾಯ

# 2 ಕೋಟಿ ದಾಟಿದ ಪ್ರಯಾಣಿಕರ ಸಂಖ್ಯೆ

**ಮೆಟ್ರೊ ಪ್ರಯಾಣಿಕರ ಅಂಕಿ ಅಂಶ**

| 2022ರ ಡಿಸೆಂಬರ್ | 2023ರ ಸೆಪ್ಟೆಂಬರ್ | 2023ರ ಅಕ್ಟೋಬರ್ | 2023ರ ನವೆಂಬರ್ | 2023ರ ಡಿಸೆಂಬರ್ |
|---|---|---|---|---|
| 5.32 ಲಕ್ಷ | 6.32 ಲಕ್ಷ | 6.40 ಲಕ್ಷ | 6.64 ಲಕ್ಷ | 6.88 ಲಕ್ಷ |



ಮೆಟ್ರೊ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವೆ ಬಾಕಿ ಉಳಿದಿದ್ದ ಕಾಮಗಾರಿ ಪೂರ್ಣಗೊಂಡ ಬಳಿಕ ಮೆಟ್ರೊ ರೈಲಿನಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ಡಿಸೆಂಬರ್ ತಿಂಗಳಲ್ಲಿ ಪ್ರಯಾಣಿಕರ ಸಂಖ್ಯೆ 2 ಕೋಟಿ ದಾಟಿದೆ.

ನಿತ್ಯ 6.88 ಲಕ್ಷ ಮಂದಿ ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದಾರೆ. ಕೆಂಗೇರಿ–ವೈಟ್‌ಫೀಲ್ಡ್ ಮಾರ್ಗದ ನಡುವೆ ಬಾಕಿ ಉಳಿದಿದ್ದ ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವಿನ ಕಾಮಗಾರಿ ಪೂರ್ಣಗೊಂಡು, ಅಕ್ಟೋಬರ್ 9ರಿಂದ ಸಂಚಾರ ಆರಂಭವಾಗಿದ್ದು ಹಾಗೂ ನೇರಳ ಮಾರ್ಗದಲ್ಲಿ ಕೆಂಗೇರಿ–ಚಲ್ಲಘಟ್ಟ ನಡುವೆ 2.10 ಕಿ.ಮೀ ಕಾಮಗಾರಿ ಪೂರ್ಣಗೊಂಡಿದ್ದರಿಂದ ಪ್ರಯಾಣಿಕರ ಸಂಖ್ಯೆ ಒಮ್ಮೆಲೇ ಹೆಚ್ಚಾಗಿತ್ತು.

ಪ್ರಸ್ತುತ ವಾರಾಂತ್ಯ ಹೊರತುಪಡಿಸಿ ಉಳಿದ ದಿನಗಳಲ್ಲಿ 7 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ನವೆಂಬರ್‌ನಲ್ಲಿ 1.99 ಕೋಟಿ ಜನರು ಪ್ರಯಾಣಿಸಿದ್ದರು. ಡಿಸೆಂಬರ್‌ನಲ್ಲಿ ಮೆಟ್ರೊ ಪ್ರಯಾಣಿಕರ ಸಂಖ್ಯೆ 2.13 ಕೋಟಿಗೆ ತಲುಪಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡಿಸೆಂಬರ್‌ನಲ್ಲಿ ರಜಾದಿನಗಳು ಹೆಚ್ಚಿದ್ದರಿಂದ ನಿತ್ಯ ಪ್ರಯಾಣಿಸುವವರ ಪ್ರಮಾಣ ಸರಾಸರಿ 7 ಲಕ್ಷಕ್ಕೆ ತಲುಪಿಲ್ಲ. ಜನವರಿಯಲ್ಲಿ ತಲುಪುವ ನಿರೀಕ್ಷೆ ಇದೆ. ಮೆಟ್ರೊ ಹಸಿರು ಮಾರ್ಗದಲ್ಲಿ ನಾಗಸಂದ್ರದಿಂದ ಮಾದಾವರವರೆಗೆ 3.7 ಕಿ.ಮೀ.ವರೆಗಿನ ಕಾಮಗಾರಿ ಮುಕ್ತಾಯಗೊಂಡರೆ ಮತ್ತೆ 50 ಸಾವಿರ ಪ್ರಯಾಣಿಕರು ಮೆಟ್ರೊ ಅವಲಂಬಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಹೆಚ್ಚಿದ ದಟ್ಟಣೆ:** ಮೆಟ್ರೊ ಮಾರ್ಗ ವಿಸ್ತರಣೆಗೊಂಡ ಬಳಿಕ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದೆ. ವಾರದ ದಿನಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ನೇರಳೆ ಮಾರ್ಗದಲ್ಲಿ ನಿಂತುಕೊಳ್ಳಲೂ ಜಾಗ ಇಲ್ಲದಷ್ಟು ಸಂದಣಿ ಉಂಟಾಗುತ್ತಿದ್ದು, ರೈಲುಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.

ಚೀನಾದ ಸಿಆರ್‌ಆರ್ ನಂಜಿಂಗ್ ಪುಝೆನ್ ಕೊ ಲಿ ಕಂಪನಿಯ 216 ಕೋಚ್‌ಗಳನ್ನು ಬಿಎಂಆರ್‌ಸಿಎಲ್‌ಗೆ ಪೂರೈಕೆ ಮಾಡಲಿದೆ. ಅಲ್ಲಿವರೆಗೆ ರೈಲುಗಳ ಸಂಖ್ಯೆ ಹೆಚ್ಚಿಸುವುದು ಕಷ್ಟ. ಈಗಿರುವ ರೈಲುಗಳೇ ಹೆಚ್ಚು ಟ್ರಿಪ್ ಮಾಡುತ್ತಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



**33** ನೇರಳೆ ಮಾರ್ಗದಲ್ಲಿ ಸಂಚರಿಸುವ ರೈಲುಗಳ ಸಂಖ್ಯೆ

**24** ಹಸಿರು ಮಾರ್ಗದಲ್ಲಿ ಸಂಚರಿಸುವ ರೈಲುಗಳ ಸಂಖ್ಯೆ

**174** ನೇರಳೆ ಮಾರ್ಗದಲ್ಲಿ ಪ್ರತಿದಿನದ ಟ್ರಿಪ್

**159** ಹಸಿರು ಮಾರ್ಗದಲ್ಲಿ ಪ್ರತಿದಿನದ ಟ್ರಿಪ್

## ಮಹಿಳೆ, ಪುರುಷನ ಮೇಲೆ ಹಲ್ಲೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

**ಅಕ್ಕಿಆಲೂರು (ಹಾವೇರಿ ಜಿಲ್ಲೆ):** ಹೋಟೆಲ್‌ನ ಕೊಠಡಿಗೆ ಹಿಂದೂ ಪುರುಷನೊಬ್ಬ ಮುಸ್ಲಿಂ ವಿವಾಹಿತ ಮಹಿಳೆಯನ್ನು ಕರೆದೊಯ್ದಿದ್ದಕ್ಕೆ ಸಿಟ್ಟಿಗೆದ್ದು ಮುಸ್ಲಿಂ ಯುವಕರ ಗುಂಪು ದಾಂದಲೆ ಮಾಡಿ, ಹಲ್ಲೆ ನಡೆಸಿ ಜೀವಬೆದರಿಕೆ ಹಾಕಿದ ಘಟನೆ ಹಾನಗಲ್ ತಾಲ್ಲೂಕಿನ ನಾಲ್ಕರ್ ಕ್ರಾಸ್ ಸಮೀಪ ನಡೆದಿದೆ.

‘ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನವರಾದ ಪುರುಷ ಮತ್ತು ಮಹಿಳೆ ಶನಿವಾರ ನಾಲ್ಕರ್ ಕ್ರಾಸ್ ಬಳಿ ಹೋಟೆಲ್‌ನಲ್ಲಿ ಕೊಠಡಿ ಬಾಡಿಗೆಗೆ ಪಡೆದು ತಂಗಿದ್ದರು. ಆಟೊ ಚಾಲಕನೊಬ್ಬ ನೀಡಿದ ಮಾಹಿತಿ ಮೇರೆಗೆ ಅಕ್ಕಿಆಲೂರಿನ ಐವರು ಯುವಕರು ಹೋಟೆಲ್‌ನ ಕೊಠಡಿಗೆ ನುಗ್ಗಿ, ಇಬ್ಬರನ್ನೂ ಎಳೆದಾಡಿ ಹಲ್ಲೆ ಮಾಡಿದ್ದಾರೆ. ಇದರ ವಿಡಿಯೊಗಳು ಬುಧವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿವೆ’ ಎಂದು ಹಾನಗಲ್ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಅಫ್ತಾಬ್ ಮಕ್ಬೂಲ್ ಅಹ್ಮದ್ ಚಂದನಕಟ್ಟಿ (24), ಮದರ್‌ಸಾಬ್ ಮಹ್ಮದ್ ಇಸಾಕ್ ಮಂಡಕ್ಕಿ (23) ಎಂಬುವರನ್ನು ಬಂಧಿಸಲಾಗಿದೆ. ಇನ್ನೂ ಮೂವರು ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ ತಿಳಿಸಿದ್ದಾರೆ.




ಕಲ್ಲಡ್ಕ ಪ್ರಭಾಕರ ಭಟ್ ಜಾಮೀನು ಅರ್ಜಿ

## ಜ.17ಕ್ಕೆ ಆದೇಶ ಕಾಯ್ದಿರಿಸಿದ ಕೋರ್ಟ್

ಪ್ರಜಾವಾಣಿ ವಾರ್ತೆ

**ಶ್ರೀರಂಗಪಟ್ಟಣ:** ಮುಸ್ಲಿಂ ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡಿದ ಆರೋಪದ ಮೇಲೆ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ ದಾಖಲಾಗಿರುವ ಪ್ರಕರಣದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ಪಟ್ಟಣದ ಮೂರನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಆದೇಶವನ್ನು ಜ.17ಕ್ಕೆ ಕಾಯ್ದಿರಿಸಿತು.



ಪ್ರಭಾಕರ ಭಟ್

ಡಿ.24ರಂದು ಪಟ್ಟಣದಲ್ಲಿ ನಡೆದಿದ್ದ ಮೂಡಲ ಬಾಗಿಲು ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ವೇಳೆ ಅವರು ಮಾತನಾಡಿದ್ದರ ವಿರುದ್ಧ ಸಾಮಾಜಿಕ ಕಾರ್ಯಕರ್ತೆ, ಪಿರಿಯಾಪಟ್ಟಣ ಮೂಲದ ನಜ್ಮಾ ನಜೀರ್ ಎಂಬವರು ದೂರು ದಾಖಲಿಸಿದ್ದು, ಫಿರ್ಯಾದಿ ಪರ ಹೈಕೋರ್ಟ್‌ನ ಹಿರಿಯ ವಕೀಲ ಎಸ್. ಬಾಲನ್ ವಾದ ಮಂಡಿಸಿದರು.

‘ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಕಾರ ಪ್ರಭಾಕರ ಭಟ್ ಅವರು ಪ್ರಚೋದನಕಾರಿ ಹೇಳಿಕೆ ನೀಡಿದ್ದು, ಘೋರ ಅಪರಾಧವಾಗಿದೆ. ರಾಷ್ಟ್ರೀಯ ಐಕ್ಯತೆಗೂ ಧಕ್ಕೆ ತರುವಂತೆ ಮಾತನಾಡಿರುವುದರಿಂದ ಟಾಡಾ ಮತ್ತು ಕೋಕಾ ಕಾಯಿದೆ ವ್ಯಾಪ್ತಿಗೂ ಸೇರುತ್ತದೆ. ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ನಡೆಸಿದ್ದು, ಇದು ಸೈಬರ್ ಅಪರಾಧ. ಈ ಬಗ್ಗೆ ಅವರ ಧ್ವನಿ ಪರೀಕ್ಷೆ ಮಾಡುವಂತೆಯೂ ಮನವಿ ಮಾಡಲಾಗಿದೆ’ ಎಂದು ವಿಚಾರಣೆಯ ಬಳಿಕ ಎಸ್. ಬಾಲನ್ ಸುದ್ದಿಗಾರರಿಗೆ ತಿಳಿಸಿದರು.

‘ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ತೀರ್ಪುಗಳನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿದ್ದು, ಜಾಮೀನು ನೀಡದಂತೆ ಕೋರಲಾಗಿದೆ’ ಎಂದರು.

ಪ್ರಭಾಕರ ಭಟ್ ಅವರ ಪರ ವಾದ ಮಂಡಿಸಿದ ವಕೀಲ ಡಿ. ಚಂದ್ರೇಗೌಡ, ‘ಪ್ರಭಾಕರ ಭಟ್ ಅವರ ವಿರುದ್ಧ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಗುರಿಪಡಿಸುವಂತಹ ಗಂಭೀರ ಪ್ರಕರಣ ದಾಖಲಾಗಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಬಂದ ಮತ್ತು ದೂರಿನಲ್ಲಿರುವ ಸಂಗತಿಗಳು ಇನ್ನೂ ತನಿಖೆಗೆ ಒಳಪಡಬೇಕಿದ್ದು, ಆರೋಪಿತರು ತನಿಖೆಗೆ ಸಹಕರಿಸಲು ಸಿದ್ಧರಿದ್ದಾರೆ. ಅವರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ. ಯಾವುದೇ ಷರತ್ತು ವಿಧಿಸಿದರೂ ಒಪ್ಪಲು ಸಿದ್ಧರಿದ್ದು, ಅವರಿಗೆ ಜಾಮೀನು ನೀಡಬೇಕು’ ಎಂದು ವಾದ ಮಂಡಿಸಿದರು.

ಫಿರ್ಯಾದಿ ನಜ್ಮಾ ನಜೀರ್, ಸಹಾಯಕ ವಕೀಲ ಲಕ್ಷ್ಮಣ ಚೀರನಹಳ್ಳಿ ಇದ್ದರು.



## ಸಂಕ್ರಾಂತಿಗೆ ಸಿಹಿ ಸಂಭ್ರಮ

ಸಂಕ್ರಾಂತಿ ಹಬ್ಬ ಸಮೀಪಿಸಿದ್ದು ಮಾರಾಟಕ್ಕೆ ತಂದಿರುವ ಕಬ್ಬನ್ನು ನಗರದ ಕೆ.ಆರ್. ಮಾರುಕಟ್ಟೆ ರಸ್ತೆಬದಿಯಲ್ಲಿ ರೈತರು ಜೋಡಿಸಿದರು –ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ನಕಲಿ ಅಂಕಪಟ್ಟಿ ನೀಡಿ ಹುದ್ದೆ

## ಶಿರಸಿ: 14 ಜನರ ವಿರುದ್ಧ ಪ್ರಕರಣ ದಾಖಲು

**ಶಿರಸಿ (ಉತ್ತರ ಕನ್ನಡ ಜಿಲ್ಲೆ):** ನಕಲಿ ಅಂಕಪಟ್ಟಿ ನೀಡಿ ಗ್ರಾಮೀಣ ಅಂಚೆ ಸೇವಕ ಹುದ್ದೆ ಪಡೆದ ಆರೋಪದ ಮೇಲೆ 14 ಜನರ ವಿರುದ್ಧ ಇಲ್ಲಿನ ಅಂಚೆ ಅಧಿಕಾರಿಗಳು ಬುಧವಾರ ಹೊಸ ಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಯಾದಗಿರಿಯ ಮೋಹನ ರುಕ್ಯಾ ನಾಯಕ, ಬೆಳಗಾವಿಯ ಹನುಮಂತ ಭೀಮಪ್ಪಾ ಮದಿಹಳ್ಳಿ, ವಿಠಲ ಬಸಪ್ಪ ಹೊಸೂರ, ದುಂಡಪ್ಪ ರಾಮಪ್ಪ ಆಶಿರೋಟಿ, ರವಿ ಮಹಾದೇವಪ್ಪ ದಡ್ಡಿ, ಕಲಬುರಗಿಯ ಶರಣ್ ಕುಮಾರ್ ಮೋತಿಲಾಲ್ ಚಂದಾಪುರ, ವಿಜಯಪುರದ ಸುರೇಶ ಶಿವಪ್ಪ ಕುಡಗಿ, ಸಚಿನ ಮಾರುತಿ ಭಜಂತ್ರಿ, ಮಮಿತಾ ಬಾಬು ರಾಥೋಡ್, ಮೋಹನ್ ನಾಮದೇವ ಚವಾಣ್, ದಿಲೀಪ್ ಧನಸಿಂಗ್‌ ಪವಾರ, ಸತೀಶ ಮೋತಿಲಾಲ್ ಪವಾರ, ಆಕಾಶ್ ಶ್ರೀನಿವಾಸ ಭಜಂತ್ರಿ ಹಾಗೂ ಬಾಗಲಕೋಟೆಯ ಅಮೃತಾ ಅರವಿಂದಬಾಬು ನಾಯಕ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಅಂಚೆ ನಿರೀಕ್ಷಕ ಮಂಜುನಾಥ ದೊಡ್ಮನಿ ನೀಡಿದ ದೂರು ಆಧರಿಸಿ ಆರೋಪಿಗಳ ಬಂಧನಕ್ಕೆ ಹೊಸ ಮಾರುಕಟ್ಟೆ ಠಾಣೆಯ ಪಿಎಸ್‌ಐ ರತ್ನಾ ಕುರಿ ಅವರು ಕಾರ್ಯಾಚರಣೆ ನಡೆಸಿದ್ದಾರೆ.

## ಗೂಬೆ ರಕ್ಷಣೆ



ಬಾರ್ನ್ ಗೂಬೆಯೊಂದಿಗೆ ಎಸ್‌.ವಿನಯ್

**ನೆಲಮಂಗಲ:** ತಾಲ್ಲೂಕಿನ ಕೊಡಿಗೆಹಳ್ಳಿಯಲ್ಲಿ ಚಂದನ್ ಅವರ ತೋಟದ ಮುಳ್ಳುತಂತಿಗೆ ರೆಕ್ಕೆ ಸಿಕ್ಕಿಕೊಂಡು ನರಳಾಡುತ್ತಿದ್ದ ಸುಮಾರು 4 ವರ್ಷದ ಗೂಬೆಯನ್ನು (ಬರ್ನ್ ಔಲ್) ಪಟ್ಟಣದ ನಿವಾಸಿ ಎಸ್. ವಿನಯ್ ರಕ್ಷಿಸಿದ್ದಾರೆ.

ಪಶು ಆಸ್ಪತ್ರೆಯಲ್ಲಿ ಗೂಬೆಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಬನ್ನೇರುಘಟ್ಟದಲ್ಲಿರುವ ವನ್ಯಜೀವಿ ಸಂರಕ್ಷಣಾ ಮತ್ತು ಪುನರ್ವಸತಿ ಕೇಂದ್ರಕ್ಕೆ ಬಿಡಲಾಯಿತು ಎಂದು ಅವರು ತಿಳಿಸಿದ್ದಾರೆ.

## ಸಿದ್ಧರಾಮೇಶ್ವರ 851ನೇ ಜಯಂತಿ 14ರಿಂದ

**ಹಾವೇರಿ:** ‘ಬೆಂಗಳೂರಿನ ನೊಳಂಬ ಲಿಂಗಾಯತ ಸಂಘದ ವತಿಯಿಂದ ಗುರು ಶಿವಯೋಗಿ ಸಿದ್ಧರಾಮೇಶ್ವರರ 851ನೇ ಜಯಂತಿ ಮಹೋತ್ಸವ ಜನವರಿ 14 ಮತ್ತು 15ರಂದು ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಗ್ರಾಮದಲ್ಲಿ ನಡೆಯಲಿದೆ’ ಎಂದು ಹಳೇಬೀಡಿನ ಪುಷ್ಪಗಿರಿ ಸಂಸ್ಥಾನದ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

‘ಜ.14ರಂದು ಷಟಸ್ಥಳ ಧ್ವಜಾರೋಹಣ ಮತ್ತು ಸಿದ್ಧರಾಮೇಶ್ವರರ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 11ಕ್ಕೆ ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆ ವಹಿಸುವರು’ ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮಧ್ಯಾಹ್ನ 3ಕ್ಕೆ ಶರಣ ಸಾಹಿತ್ಯ ಗೋಷ್ಠಿಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸುವರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಗ್ರಂಥ ಬಿಡುಗಡೆ ಮಾಡುವರು. ನಟ ಡಾಲಿ ಧನಂಜಯ ಕ್ಯಾಲೆಂಡರ್ ಬಿಡುಗಡೆಗೊಳಿಸುವರು’ ಎಂದರು.

ಜನವರಿ 15ರಂದು ಬೆಳಿಗ್ಗೆ ಮಹಿಳಾ ಗೋಷ್ಠಿಯನ್ನು ಸಂಸದ ಶಿವಕುಮಾರ ಉದಾಸಿ ಉದ್ಘಾಟಿಸುವರು. ಬೆಳಿಗ್ಗೆ 11ಕ್ಕೆ ಕೃಷಿಗೋಷ್ಠಿಗೆ ಸಚಿವ ಮಧು ಬಂಗಾರಪ್ಪ ಚಾಲನೆ ನೀಡುವರು. ಮಧ್ಯಾಹ್ನ 3ಕ್ಕೆ ನಡೆಯುವ ಸಮಾರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳುವರು’ ಎಂದರು.

## ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಗ್ರಾಮಸ್ಥರಿಂದ ಆರೋಪಿಗೆ ಥಳಿತ

**ರಾಣೆಬೆನ್ನೂರು (ಹಾವೇರಿ ಜಿಲ್ಲೆ):** ಎಂಟು ವರ್ಷದ ಬಾಲಕಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿದ್ದಾನೆ ಎಂಬ ಆರೋಪದ ಮೇಲೆ 40 ವರ್ಷದ ವ್ಯಕ್ತಿಯೊಬ್ಬರನ್ನು ಅರೆಬೆತ್ತಲೆಗೊಳಿಸಿ ಗ್ರಾಮಸ್ಥರು ಕಂಬಕ್ಕೆ ಕಟ್ಟಿ ಹಿಗ್ಗಾಮುಗ್ಗಾ ಥಳಿಸಿದ ಘಟನೆ ತಾಲ್ಲೂಕಿನ ಗ್ರಾಮವೊಂದರಲ್ಲಿ ಬುಧವಾರ ನಡೆದಿದೆ.

ಕೂಡಲೇ ಘಟನಾ ಸ್ಥಳಕ್ಕೆ ಧಾವಿಸಿದ ಗ್ರಾಮೀಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

## ‘ವಿಮಾನ ತಯಾರಿಕಾ ಕ್ಷೇತ್ರಕ್ಕೆ ಆದ್ಯತೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಗರಿಕ ವಿಮಾನಗಳ ಬೇಡಿಕೆ ಹೆಚ್ಚುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲೇ ವಿಮಾನ ತಯಾರಿಕೆ, ದುರಸ್ತಿ ಪ್ರಕ್ರಿಯೆಗಳು ನಡೆಯುವಂತೆ ಸೌಲಭ್ಯಗಳನ್ನು ಕಲ್ಪಿಸಬೇಕಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.



ವೈಮಾಂತರಿಕ್ಷ ಹಾಗೂ ರಕ್ಷಣಾ ಔದ್ಯಮಿಕ ಕ್ಷೇತ್ರದ ಬೆಳವಣಿಗೆಗಳಿಗೆ ಕೈಗೊಳ್ಳಬೇಕಾಗಿರುವ ಉಪಕ್ರಮಗಳ ಕುರಿತು ಸಲಹೆ ನೀಡಲು ಸರ್ಕಾರ ರಚಿರುವ ವಿಷನ್ ಗ್ರೂಪ್‌ನ ಮೊದಲ ಸಭೆಯಲ್ಲಿ ಅವರು ಮಾತನಾಡಿದರು.

ಸಭೆಯಲ್ಲಿ ಏರ್ ಬಸ್ ಇಂಡಿಯಾದ ನಿರ್ದೇಶಕ ಕೃತ್ತಿವಾಸನ್ ಮುಖರ್ಜಿ, ಆರ್‌.ಟಿ.ಎಕ್ಸ್ ಕಾಲಿನ್ಸ್ ಏರೋಸ್ಪೇಸ್ ಕಂಪನಿಯ ಮುಖ್ಯಸ್ಥ ಸಮಿತ್ ರಾಯ್, ಡೈನಮಿಕ್ ಟೆಕ್ನಾಲಜೀಸ್ ಲಿಮಿಟೆಡ್ ಸಿಇಒ ಉದ್ಯಂತ್ ಮಲ್ಹೋತ್ರ, ಬೋಯಿಂಗ್ ಇಂಡಿಯಾ ಹಿರಿಯ ನಿರ್ದೇಶಕ ಅಶ್ವನಿ ಭಾರ್ಗವ ಪಾಲ್ಗೊಂಡಿದ್ದರು. ಎಚ್‌ಎಎಲ್ ನಿರ್ದೇಶಕ ಜಯದೇವ್ ಮತ್ತು ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮುಖ್ಯಸ್ಥ ಅಪ್ಪಾರಾವ್ ವೆಂಕಟ ವಲ್ಲಾವರಪು ಅವರು ಆನ್‌ಲೈನ್ ಮೂಲಕ ಭಾಗವಹಿಸಿದ್ದರು.



ನಗರದಲ್ಲಿ ಪರ್ಯಾವರಣ ಸಂರಕ್ಷಣೆ ಗತಿವಿಧಿ ಕರ್ನಾಟಕ ದಕ್ಷಿಣ ಪ್ರಾಂತ್ಯ ಬುಧವಾರ ಆಯೋಜಿಸಿದ್ದ ‘ಪಾಲಿಥಿನ್ ಮುಕ್ತ ಅಯೋಧ್ಯೆಯತ್ತ ನಮ್ಮ ಚಿತ್ತ’ ಸಂವಾದ ಕಾರ್ಯಕ್ರಮದಲ್ಲಿ ಘನತ್ಯಾಜ್ಯ ನಿರ್ವಹಣೆ ತಜ್ಞ ರಾಮಪ್ರಸಾದ ಮಾತನಾಡಿದರು. ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ಕರ್ನಾಟಕ ದಕ್ಷಿಣ ಪ್ರಾಂತ್ಯದ ಕಾರ್ಯದರ್ಶಿ ಜಗನ್ನಾಥ್ ಶಾಸ್ತ್ರಿ, ಆನಂದ ಗುರೂಜಿ, ಪತ್ರಕರ್ತೆ ಶ್ರೀಲಕ್ಷ್ಮಿ ರಾಜಕುಮಾರ ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ

## ಇಂದಿನಿಂದ ಮತ್ತೆ ಕಾಡಾನೆ ಸೆರೆ ಕಾರ್ಯಾಚರಣೆ

**ಹಾಸನ:** ಮಲೆನಾಡು ಭಾಗದಲ್ಲಿ ಕಾಡಾನೆ ಹಾವಳಿ ಹೆಚ್ಚುತ್ತಿದ್ದು, ಅರಣ್ಯ ಇಲಾಖೆ ಗುರುವಾರದಿಂದ ಕಾಡಾನೆ ಸೆರೆ ಕಾರ್ಯಾಚರಣೆ ಪ್ರಾರಂಭಿಸಲು ಸಿದ್ಧತೆ ಮಾಡಿಕೊಂಡಿದೆ.

ಡಿ.4ರಂದು ಅಂಬಾರಿ ಆನೆ ಅರ್ಜುನನ ಸಾವಿನ ನೋವಿನೊಂದಿಗೆ ಸ್ಥಗಿತಗೊಂಡಿದ್ದ ಕಾರ್ಯಚರಣೆ ಮತ್ತೆ ಪ್ರಾರಂಭವಾಗಲಿದ್ದು, ಬೇಲೂರು ತಾಲ್ಲೂಕಿನ ಬಿಕ್ಕೋಡು ಆನೆ ಶಿಬಿರಕ್ಕೆ ಸಾಕಾನೆಗಳು ಬಂದಿವೆ.

ಬುಧವಾರ ಸಾಕಾನೆಗಳಾದ ಹರ್ಷ, ಸುಗ್ರೀವ, ಧನಂಜಯ, ಅಶ್ವತ್ಥಾಮ, ಪ್ರಶಾಂತ ಶಿಬಿರಕ್ಕೆ ಬಂದಿದ್ದು, ಗುರುವಾರ ಕರ್ನಾಟಕ ಭೀಮ, ಮಹೇಂದ್ರ, ಅಭಿಮನ್ಯು ಸೇರಿ ಇನ್ನು ಕೆಲವು ಸಾಕಾನೆಗಳು ಬರುವ ನಿರೀಕ್ಷೆ ಇದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಜುನನನ್ನು ಕೊಂದ ಆನೆಯನ್ನು ಹಿಡಿದೇ ತೀರುತ್ತೇವೆ ಎಂದು ಶಪಥ ಮಾಡಿದ್ದ ಮಾವುತರು ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿದ್ದು, ಮಲೆ ನಾಡಿನ ಕಾಡಾನೆ ಉಪಟಳದ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ಮತ್ತೆ ಪ್ರಾರಂಭಿಸಲಾಗಿದೆ. ಈ ಬಾರಿ 10 ಸಾಕಾನೆಗಳ ಮೂಲಕ ಕಾರ್ಯಾಚರಣೆ ಆರಂಭಿಸಲಾಗುತ್ತಿದ್ದು, ಅಭಿಮನ್ಯು ನೇತೃತ್ವದಲ್ಲಿ ಬೇಲೂರು ಭಾಗದಲ್ಲಿ ಕಾರ್ಯಾಚರಣೆ ಮುಂದುವರಿಯಲಿದೆ.

**ಸೌರಭ್‌ಕುಮಾರ್ ನೇತೃತ್ವ**

ಹಾಸನದ ನೂತನ ಅರಣ್ಯ ಉಪ ಸಂರಕ್ಷಣಾಧಿಕಾರಿಯಾಗಿ ಸೌರಭ್ ಕುಮಾರ್ ಅವರನ್ನು ನೇಮಕ ಮಾಡಿ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದ್ದು, ಅವರ ನೇತೃತ್ವದಲ್ಲಿ ಆನೆ ಸೆರೆ ಕಾರ್ಯಾಚರಣೆ ಆರಂಭವಾಗಲಿದೆ. ಅವರು 2019ನೇ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ.



ಬೇಲೂರು ತಾಲ್ಲೂಕಿನ ಬಿಕ್ಕೋಡು ಆನೆ ಶಿಬಿರದಲ್ಲಿ ಸಾಕಾನೆಗಳಿಗೆ ಮಜ್ಜನ ಮಾಡಿಸಿದ ಮಾವುತರು.

ಕುವೆಂಪು ಕುರಿತ ವಿಚಾರ ಗೋಷ್ಠಿಯಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ

# ‘ಧಾರ್ಮಿಕ ಮೂಲಭೂತವಾದ ವಿಜೃಂಭಣೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಧಾರ್ಮಿಕ ಮೂಲಭೂತವಾದ ವಿಜೃಂಭಿಸುತ್ತಿರುವ ಕಾಲಘಟ್ಟದಲ್ಲಿ ಇದ್ದೇವೆ. ಒಂದು ಕಡೆ ದ್ವೇಷೋತ್ಪಾದನೆ ಇದ್ದರೆ, ಇನ್ನೊಂದೆಡೆ ಭಯೋತ್ಪಾದನೆಯಿದೆ. ಆದ್ದರಿಂದ ಈ ವೇಳೆ ಕುವೆಂಪು ಅವರ ಸರ್ವಜನಾಂಗದ ಶಾಂತಿಯತೋಟ ಮುಖ್ಯವಾಗುತ್ತದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಸರ್ಕಾರಿ ಕಲಾ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಜಿ.ಎನ್. ಉಪಾಧ್ಯ ಅವರ ‘ಕುವೆಂಪು: ವಿಚಾರ ಸಾಹಿತ್ಯ ನಿರ್ಮಾಪಕರು’ ಕೃತಿ ಬಿಡುಗಡೆ ಮಾಡಿ, ಕುವೆಂಪು ಕುರಿತ ವಿಚಾರ ಗೋಷ್ಠಿಯಲ್ಲಿ ಮಾತನಾಡಿದರು.

‘ನಾಡು, ದೇಶದ ಬಗ್ಗೆ ಮಾತನಾಡುವಾಗ ಕುವೆಂಪು ಅವರ ಆಶಯವನ್ನು ಅನುಸರಿಸಿದರೆ ನಿಜವಾದ ಅರ್ಥದಲ್ಲಿ ನಾವು ಪ್ರಜಾಪ್ರಭುತ್ವವಾದಿಗಳಾಗಿರುತ್ತೇವೆ. ಧಾರ್ಮಿಕ ಮೂಲಭೂತವಾದ ಯಾವ ಧರ್ಮದಿಂದ ಬಂದರೂ ನಾನು ಖಂಡಿಸುತ್ತೇನೆ. ಜಾತ್ಯತೀತ ತತ್ವಕ್ಕೂ ಧಕ್ಕೆ ಬರುವ ಸಂದರ್ಭದಲ್ಲಿ ಇದ್ದೇವೆ. ಈ ಕಾರಣದಿಂದ ಕುವೆಂಪು ಅವರ ಜಾತ್ಯತೀತ ತತ್ವ ಹಾಗೂ ಅವರು ಪ್ರಸ್ತುತ ಆಗುತ್ತಾರೆ. ಅವರು ರಚಿಸಿದ ‘ನಾಡಗೀತೆ’ಯು ಒಕ್ಕೂಟ ಪದ್ಧತಿಯನ್ನು ಪ್ರತಿಪಾದನೆ ಮಾಡುತ್ತದೆ’ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ (ಎಡದಿಂದ ಎರಡನೆಯವರು) ಅವರು ‘ಕುವೆಂಪು: ವಿಚಾರ ಸಾಹಿತ್ಯ ನಿರ್ಮಾಪಕರು’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಬೈರಮಂಗಲ ರಾಮೇಗೌಡ, ಎಲ್‌.ಜಿ. ಮೀರಾ, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಶ್ರೀನಿವಾಸ ನಾಯಕ್ ಮತ್ತು ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಸಂಚಾಲಕ ಬಿ. ರಾಜಶೇಖರಮೂರ್ತಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಕುವೆಂಪು ಅವರು ಪುರೋಹಿತಶಾಹಿ, ವೈದಿಕ ಶಾಹಿಯ ಬಗ್ಗೆ ಮಾತನಾಡಿದ್ದರು. ಆದರೆ, ಅವರು ಬ್ರಾಹ್ಮಣರ ದ್ವೇಷಿಯಾಗಿದ್ದರು ಎಂದು ಸರಳೀಕರಿಸಲಾಯಿತು. ಪುರೋಹಿತಶಾಹಿ ಎನ್ನುವುದು ಬ್ರಾಹ್ಮಣರನ್ನೂ ಒಳಗೊಂಡಂತೆ ಶೂದ್ರರಲ್ಲಿಯೂ ಇರುವ ಒಂದು ಮನೋಧರ್ಮ. ಆದ್ದರಿಂದ ಪುರೋಹಿತಶಾಹಿ, ವೈದಿಕಶಾಹಿ ಒಂದು ಜಾತಿಯಲ್ಲ. ಬ್ರಾಹ್ಮಣರನ್ನು ಅವರು ವಿರೋಧಿಸಿದ್ದರೆ ತಮ್ಮ ಕೃತಿಯಾದ ‘ರಾಮಾಯಣ ದರ್ಶನಂ’ ಅನ್ನು ಬ್ರಾಹ್ಮಣರಾದ ಟಿ.ಎಸ್. ವೆಂಕಣ್ಣಯ್ಯ ಅವರಿಗೆ ಅರ್ಪಿಸುತ್ತಿರಲಿಲ್ಲ’ ಎಂದು ತಿಳಿಸಿದರು.

‘ಕುವೆಂಪು ಅವರ ಕಾವ್ಯದಲ್ಲಿ ಮಹಿಳೆ’ ಎಂಬ ವಿಷಯದ ಬಗ್ಗೆ ಮಾತನಾಡಿದ ವಿಮರ್ಶಕಿ ಎಲ್. ಜಿ. ಮೀರಾ, ‘ಕನ್ನಡ ನಾಡಿನ ಸ್ತ್ರೀಯರು ಕುವೆಂಪು ಅವರಿಗೆ ನಮನ ಸಲ್ಲಿಸುತ್ತಾರೆ. ಕುವೆಂಪು ಇಲ್ಲದ ಸಾಹಿತ್ಯ ಲೋಕವನ್ನು ಊಹಿಸಲೂ ಸಾಧ್ಯವಿಲ್ಲ. ಅವರು ದೇಶ, ನಾಡು ಮತ್ತು ಸ್ವಾತಂತ್ರ್ಯವನ್ನು ‘ಕಾಳಿ’ಗೆ ಹೋಲಿಸಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**‘ಹಿಂದೂವಲ್ಲದ ಕುವೆಂಪು ಹೇಗೆ ಒಕ್ಕಲಿಗ?’**

‘ಒಕ್ಕಲಿಗರ ಸಂಘದ ಚುನಾವಣೆಗಳ ಕರಪತ್ರದಲ್ಲಿ ಕುವೆಂಪು ಅವರ ಫೋಟೊಗಳನ್ನು ಹಾಕಿಕೊಳ್ಳುತ್ತಾರೆ. ಅವರು ಒಕ್ಕಲಿಗರು ಎಂಬ ಕಾರಣಕ್ಕೆ ಬಳಸುವುದಾಗಿ ಆ ಸಮುದಾಯದವರು ಹೇಳುತ್ತಾರೆ. ಆದರೆ, ಒಕ್ಕಲಿಗರು ಕುವೆಂಪು ಅವರನ್ನು ಎಷ್ಟು ಓದಿಕೊಂಡಿದ್ದಾರೆ? ಕುವೆಂಪು ಅವರು ತಾನು ಹಿಂದೂ ಅಲ್ಲವೆಂದು ನಿರಾಕರಿಸಿದ್ದಾರೆ. ಇನ್ನು ಅವರೆಲ್ಲಿ ಒಕ್ಕಲಿಗರಾಗುತ್ತಾರೆ? ಮುಗ್ಧತನದಿಂದಲೋ, ಮೂರ್ಖತನದಿಂದಲೋ ಒಂದು ಜಾತಿಗೆ ಸಂಬಂಧಿಸಿದಂತೆ ಗುರುತಿಸಲಾಗುತ್ತಿದೆ’ ಎಂದು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಬೇಸರ ವ್ಯಕ್ತಪಡಿಸಿದರು.

‘ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿದ್ದ ಬಾಲಗಂಗಾಧರನಾಥ ಸ್ವಾಮೀಜಿ ಅವರು ಕುವೆಂಪು ಅವರನ್ನು ನೋಡಲು ಬಯಸಿದ್ದರು. ಕುವೆಂಪು ಅವರು ತಮ್ಮ ಜಾತಿಯ ದೊಡ್ಡ ಕವಿ, ಜ್ಞಾನಪೀಠ ಸೇರಿ ವಿವಿಧ ಪ್ರಶಸ್ತಿಗಳು ಬಂದಿವೆ ಎಂಬ ಕಾರಣಕ್ಕೆ ಸ್ವಾಮೀಜಿ ಅವರ ಬಳಿ ಹೋಗಿದ್ದರು. ಮಠಾಧೀಶರಿಗೂ ಈ ರೀತಿಯ ತಪ್ಪು ತಿಳಿವಳಿಕೆ ಇರುತ್ತದೆ’ ಎಂದು ಹೇಳಿದರು.

**ಪುಸ್ತಕ ಪರಿಚಯ**

- ಪುಸ್ತಕ: ‘ಕುವೆಂಪು: ವಿಚಾರ ಸಾಹಿತ್ಯ ನಿರ್ಮಾಪಕರು’
- ಲೇಖಕ: ಜಿ.ಎನ್. ಉಪಾಧ್ಯ
- ಪುಟಗಳು: 126
- ಬೆಲೆ: ₹ 150
- ಪ್ರಕಾಶನ: ಜನಪ್ರಕಾಶನ

## ಬಾಲಕಿಗೆ ಹೆರಿಗೆ: ವಾರ್ಡನ್ ಅಮಾನತು

ಪ್ರಜಾವಾಣಿ ವಾರ್ತೆ

**ಮಧುಗಿರಿ/ಚಿಕ್ಕಬಳ್ಳಾಪುರ:** ತಾಲ್ಲೂಕಿನ ವಸತಿ ಶಾಲೆಯ ಹಾಸ್ಟೆಲ್ ವಿದ್ಯಾರ್ಥಿನಿ ಆಸ್ಪತ್ರೆಯಲ್ಲಿ ಮಗುವಿಗೆ ಜನ್ಮ ನೀಡಿದ ಪ್ರಕರಣದ ಸಂಬಂಧ ವಸತಿ ನಿಲಯದ ಮಹಿಳಾ ವಾರ್ಡನ್‌ನನ್ನು ಬುಧವಾರ ಅಮಾನತುಗೊಳಿಸಲಾಗಿದೆ.

‘ಹಾಸ್ಟೆಲ್ ವಿದ್ಯಾರ್ಥಿನಿ ಗರ್ಭಿಣಿಯಾಗಿದ್ದರೂ ಅದನ್ನು ಗಮನಿಸದೆ ಕರ್ತವ್ಯಲೋಪ ಎಸಗಿದ ಆರೋಪದಲ್ಲಿ ವಾರ್ಡನ್ ಅಮಾನತು ಮಾಡಲಾಗಿದೆ’ ಎಂದು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜಿ.ಪ್ರಭು ಆದೇಶದಲ್ಲಿ ತಿಳಿಸಿದ್ದಾರೆ.

ತುಮಕೂರು ಜಿಲ್ಲೆಯ ವಸತಿ ಶಾಲೆಯಲ್ಲಿದ್ದ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಲಕಿ ಹೊಟ್ಟೆ ನೋವು ಎಂದು ಊರಿಗೆ ಮರಳಿದ್ದಳು. ನೋವು ಹೆಚ್ಚಾಗಿದ್ದರಿಂದ ಪೋಷಕರು ಆಕೆಯನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದರು.

ಹೊಟ್ಟೆನೋವು ಎಂದ ಕಾರಣ ಬಾಲಕಿಯ ಸ್ಕ್ಯಾನಿಂಗ್ ಹಾಗೂ ಇತರ ವೈದ್ಯಕೀಯ ಪರೀಕ್ಷೆ ಮಾಡಿದಾಗ ಏಳು ತಿಂಗಳು ಗರ್ಭಿಣಿಯಾಗಿರುವುದು ದೃಢಪಟ್ಟಿದೆ. ವೈದ್ಯರು ಮಂಗಳವಾರ ಶಸ್ತ್ರಚಿಕಿತ್ಸೆಯ ಮೂಲಕ ಮಗುವನ್ನು ಹೊರತೆಗೆದಿದ್ದರು.

ಈ ಬಗ್ಗೆ ವೈದ್ಯರು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದ ಬಾಲಕಿಯನ್ನು ಈ ಕುರಿತು ಪ್ರಶ್ನಿಸಿದಾಗ ವಸತಿ ಶಾಲೆಯ ಬಳಿಯ ಯುವಕನೊಬ್ಬನೊಂದಿಗೆ ದೈಹಿಕ ಸಂಪರ್ಕ ಹೊಂದಿರುವುದಾಗಿ ತಿಳಿಸಿದ್ದಾಳೆ.

ಕಳೆದ ಮೂರು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 317 ಬಾಲಕಿಯರು ಗರ್ಭ ಧರಿಸಿದ್ದರು.

### ಮಧ್ಯವರ್ತಿಗಳಿಲ್ಲದೆ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದತ್ತ ಸರ್ಕಾರದ ಚಿತ್ತ

# 6 ಮಂದಿಗೆ ಸಚಿವದರ್ಜೆ ‘ಗ್ಯಾರಂಟಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜ್ಯ ಸರ್ಕಾರದ ಎಲ್ಲ ಐದೂ ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನ ಮತ್ತು ಮೇಲುಸ್ತುವಾರಿಗೆ ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮುಂಬರುವ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ನಡೆದ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಮತ್ತು ಪ್ರಮುಖ ನಾಯಕರ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

ರಾಜ್ಯಮಟ್ಟದ ಸಮಿತಿಯಲ್ಲಿ ಅಧ್ಯಕ್ಷರು, ಐದು ಜನ ಉಪಾಧ್ಯಕ್ಷರು, 31 ಸದಸ್ಯರು ಇರಲಿದ್ದಾರೆ. ಜಿಲ್ಲಾಮಟ್ಟದ ಸಮಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, 21 ಸದಸ್ಯರು, ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, 11 ಸದಸ್ಯರು ಇರಲಿದ್ದಾರೆ.

‘ರಾಜ್ಯಮಟ್ಟದ ಸಮಿತಿಯ ಅಧ್ಯಕ್ಷರಿಗೆ ಸಂಪುಟ ದರ್ಜೆ, ಉಪಾಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನ ಮತ್ತು ಸೌಲಭ್ಯ ನೀಡಲಾಗುವುದು. ಜಿಲ್ಲಾ ಮಟ್ಟದ ಸಮಿತಿಯ ಅಧ್ಯಕ್ಷರಿಗೆ ₹ 50 ಸಾವಿರ, ತಾಲ್ಲೂಕುಮಟ್ಟದ ಅಧ್ಯಕ್ಷರಿಗೆ ₹ 25 ಸಾವಿರ ಗೌರವಧನ, ಸಮಿತಿಗಳಲ್ಲಿರುವ ಇತರರಿಗೆ ಸಭೆ ಹಾಜರಾತಿ ಭತ್ಯೆ ನೀಡಲಾಗುವುದು. ಸಮಿತಿಗಳಿಗೆ ಕಚೇರಿ ಸೌಲಭ್ಯವನ್ನೂ ಕಲ್ಪಿಸಲಾಗುವುದು’ ಎಂದು ಮುಖ್ಯಮಂತ್ರಿ ವಿವರಿಸಿದರು.

‘ಎಲ್ಲ ಸಮಿತಿಗಳಲ್ಲಿ ಕಾರ್ಯಕರ್ತರಿಗೆ ಅವಕಾಶ ನೀಡಲಾಗುವುದು. ಅರಣ್ಯ ಸಮಿತಿ, ಆಸ್ಪತ್ರೆ ಸಮಿತಿ ಹೀಗೆ ವಿವಿಧ ಇಲಾಖೆಗಳ ಅಡಿಯಲ್ಲಿರುವ ಸಮಿತಿಗಳನ್ನು ತಕ್ಷಣ ರಚಿಸಲು ಆಯಾ ಇಲಾಖೆಗಳ ಸಚಿವರ ವಿವೇಚನೆಗೆ ಬಿಡಲಾಗಿದೆ. ಈ ಸಮಿತಿಗಳಿಗೆ ಹೆಸರು ಪಡೆಯುವಾಗ ಪಕ್ಷದ ಶಾಸಕರು, ಸಂಸದರ ಸಲಹೆ ಪಡೆಯಬೇಕು. ಕೆಲವು ಶಾಸಕರಿಗೆ, ವಿಧಾನಸಭೆ ಟಿಕೆಟ್ ದೊರೆಯದವರಿಗೆ ನಿಗಮ ಮಂಡಳಿಗಳಲ್ಲಿ ಅವಕಾಶ ಕಲ್ಪಿಸಲಾಗುವುದು’ ಎಂದೂ ವಿವರಿಸಿದರು.

**ಸಚಿವರಿಗೂ 2 ವರ್ಷ ಅನ್ವಯವೇ?:** ಸುದ್ದಿಗೋಷ್ಠಿಗೂ ಮೊದಲು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಮತ್ತು ಪ್ರಮುಖ ನಾಯಕರ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ‘ನಿಗಮ ಮಂಡಳಿಗಳಿಗೆ ನೇಮಕಗೊಳ್ಳುವವರ ಅಧಿಕಾರ ಅವಧಿ ಎರಡು ವರ್ಷ ಮಾತ್ರ ಇರಲಿದೆ’ ಎಂದರು. ಆಗ, ಕೆಲವು ಶಾಸಕರು ಗಟ್ಟಿ ಧ್ವನಿಯಲ್ಲಿ, ‘ಈ ಮಾನದಂಡ ಸಚಿವರಿಗೂ ಅನ್ವಯವೇ’ ಎಂದು ಪ್ರಶ್ನಿಸಿದರು. ಕೈ ಎತ್ತಿ ಜೋರಾಗಿ ಕೇಳಿದ ಈ ಪ್ರಶ್ನೆಯನ್ನು ಕೇಳಿಸಿಯೂ ಕೇಳಿಸಿಕೊಳ್ಳದಂತಿದ್ದ ಸಿದ್ದರಾಮಯ್ಯ ಪ್ರತಿಕ್ರಿಯೆಯನ್ನೇ ನೀಡಲಿಲ್ಲ ಎಂದು ಸಭೆಯಲ್ಲಿದ್ದ ಶಾಸಕರೊಬ್ಬರು ಹೇಳಿದರು.



ಬೆಂಗಳೂರಿನ ಕೆಪಿಸಿಸಿ ಕಚೇರಿಯ ‘ಭಾರತ್ ಜೋಡೊ’ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಗೃಹ ಸಚಿವ ಜಿ. ಪರಮೇಶ್ವರ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

## ಸರ್ಕಾರಕ್ಕೆ ‘ಸಂಪುಟ’ ದರ್ಜೆಯ ಭಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತಂಡದಲ್ಲಿ 33 ಸಚಿವರು ಸಂಪುಟ ದರ್ಜೆಯ ಸಚಿವರಿದ್ದಾರೆ. ಜೊತೆಗೆ, ಸಂಪುಟ ದರ್ಜೆ ಸ್ಥಾನಮಾನ ಹೊಂದಿದ ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ (ಬಸವರಾಜ ರಾಯರಡ್ಡಿ), ನೀತಿ ಮತ್ತು ಕಾರ್ಯಕ್ರಮ ಸಲಹೆಗಾರ (ಬಿ.ಆರ್. ಪಾಟೀಲ), ಕಾನೂನು ಸಲಹೆಗಾರ (ಎ.ಎಸ್.ಪೊನ್ನಣ್ಣ), ಮುಖ್ಯ ಸಲಹೆಗಾರ (ಸುನೀಲ್ ಕನುಗೋಲು), ಮಾಧ್ಯಮ ಸಲಹೆಗಾರ (ಕೆ.ವಿ. ಪ್ರಭಾಕರ್), ಇಬ್ಬರು ರಾಜಕೀಯ ಕಾರ್ಯದರ್ಶಿಗಳು (ಕೆ.ಗೋವಿಂದರಾಜು, ನಸೀರ್ ಅಹಮದ್), ಇಬ್ಬರು ದೆಹಲಿ ಪ್ರತಿನಿಧಿಗಳಾದ ಟಿ.ಬಿ. ಜಯಚಂದ್ರ, ಪ್ರಕಾಶ ಹುಕ್ಕೇರಿ ಇದ್ದಾರೆ.

ಇದೀಗ ಗ್ಯಾರಂಟಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ರಚನೆಯಾಗಲಿರುವ ರಾಜ್ಯಮಟ್ಟದ ಸಮಿತಿಯ ಅಧ್ಯಕ್ಷರಿಗೂ ಸಂಪುಟ ದರ್ಜೆ ಸ್ಥಾನ ಸಿಗಲಿದೆ. ಈ ಸಮಿತಿಯ ಐವರು ಉಪಾಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ ಸಿಗಲಿದೆ. ಶೀಘ್ರದಲ್ಲೇ 80ಕ್ಕೂ ಹೆಚ್ಚು ನಿಗಮ– ಮಂಡಳಿಗಳಿಗೂ ನೇಮಕ ನಡೆಯಲಿದ್ದು, ಆ ಪೈಕಿ ಹಲವರಿಗೆ ಸಂಪುಟ ದರ್ಜೆ, ರಾಜ್ಯ ಸಚಿವ ಸ್ಥಾನಮಾನ ಖಚಿತವಾಗಿದೆ.

## ಸಮಿತಿಗಳಿಗೆ ವಾರ್ಷಿಕ ₹ 16 ಕೋಟಿ ವೆಚ್ಚ?

‘ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳಿಗೆ ವಾರ್ಷಿಕ ₹ 16 ಕೋಟಿ ವೆಚ್ಚವಾಗಲಿದೆ’ ಎಂದು ಮುಖ್ಯಮಂತ್ರಿ ಸಚಿವಾಲಯದ ಮಾಧ್ಯಮ ಹೇಳಿಕೆ ತಿಳಿಸಿತ್ತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘₹ 5 ಕೋಟಿಯಿಂದ ₹ 6 ಕೋಟಿ ವೆಚ್ಚವಾಗಲಿದೆ. ಎಲ್ಲ ಐದೂ ಗ್ಯಾರಂಟಿಗಳಿಗೆ ಸುಮಾರು ₹ 59 ಸಾವಿರ ಕೋಟಿ ವೆಚ್ಚ ಮಾಡುತ್ತಿರುವಾಗ, ಈ ಯೋಜನೆಗಳ ಸಮರ್ಪಕ ಅನುಷ್ಠಾನದ ಉದ್ದೇಶಕ್ಕೆ ಇಷ್ಟು ವೆಚ್ಚ ದೊಡ್ಡ ವಿಷಯವೇನೂ ಅಲ್ಲ. ಸರ್ಕಾರಕ್ಕೆ ಈ ಮೊತ್ತ ಹೊರೆಯೇನೂ ಅಲ್ಲ. ಯೋಜನೆಗಳು ಪರಿಣಾಮಯಾಗಿ ಅನುಷ್ಠಾನ ಆಗಬೇಕು. ಅಪಪ್ರಚಾರಕ್ಕೆ ಉತ್ತರ ಕೊಡಲು ಈ ಸಮಿತಿಗಳನ್ನು ರಚಿಸಲಾಗುತ್ತಿದೆ’ ಎಂದರು.

## ಚುನಾವಣೆ ಬಳಿಕ ಸಚಿವರು, ಶಾಸಕರ ಮೌಲ್ಯಮಾಪನ: ಸುರ್ಜೇವಾಲಾ

ಲೋಕಸಭೆಯ ಎಲ್ಲ 28 ಕ್ಷೇತ್ರಗಳನ್ನು ಗೆಲ್ಲಲು ಸಚಿವರನ್ನು ಉಸ್ತುವಾರಿಗಳನ್ನಾಗಿ ನೇಮಿಸಲಾಗಿದೆ. ಒಂದು ವೇಳೆ ಪಕ್ಷ ಯಶಸ್ಸು ಗಳಿಸದಿದ್ದರೆ ಸಂಪುಟವನ್ನು ಪುನರ್ ರಚನೆ ಮಾಡಲಾಗುವುದು ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಭೆಯಲ್ಲಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಸಭೆಯಲ್ಲಿ ಮಾತನಾಡಿದ ಅವರು, ‘ಚುನಾವಣೆ ಬಳಿಕ ಎಲ್ಲ ಶಾಸಕರು, ಸಚಿವರ ಕಾರ್ಯವೈಖರಿ, ಸಾಧನೆಯ ಮೌಲ್ಯಮಾಪನ ನಡೆಸಲಾಗುವುದು. ನಿಗಮ ಮಂಡಳಿಗೆ ನೇಮಕ ಆದವರಿಗೆ 2 ವರ್ಷ ಮಾತ್ರ ಅಧಿಕಾರ ಅವಧಿ ಇರಲಿದೆ. ಎಲ್ಲರಿಗೂ ಅವಕಾಶ ನೀಡುವ ಉದ್ದೇಶದಿಂದ ಎರಡು ವರ್ಷಗಳ ಬಳಿಕ ಹೊಸಬರ ನೇಮಕ ಆಗಲಿದೆ’ ಎಂದಿದ್ದಾರೆ.

‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನದ ಮಧ್ಯೆಯೂ ಪಕ್ಷದ ಎಲ್ಲ ಶಾಸಕರಿಗೆ ತಲಾ ₹ 25 ಕೋಟಿ ವಿಶೇಷ ಅನುದಾನವನ್ನು ಸರ್ಕಾರ ಹಂಚಿಕೆ ಮಾಡಲಿದೆ. ಅದಕ್ಕೆ ಕ್ರಿಯಾಯೋಜನೆ ರೂಪಿಸಬೇಕು’ ಎಂದು ಶಾಸಕರಿಗೆ ಸುರ್ಜೇವಾಲ ತಿಳಿಸಿದ್ದಾರೆ.

‘ಉಸ್ತುವಾರಿ ಸಚಿವರು ತಿಂಗಳಲ್ಲಿ ಎರಡು ಬಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ (ಡಿಸಿಸಿ) ಕಚೇರಿಗೆ ಹೋಗಬೇಕು. ತಿಂಗಳಿಗೊಮ್ಮೆ ಕೆಪಿಸಿಸಿ ಕಚೇರಿಗೂ ಹೋಗಬೇಕು’ ಎಂದೂ ಸೂಚನೆ ನೀಡಿದ್ದಾರೆ.

‘ಮುಂದಿನ ಮೂರು ವಾರಗಳ ಒಳಗೆ ಗ್ಯಾರಂಟಿ ಅನುಷ್ಠಾನ ಸಮಿತಿ ಸಹಿತ ಎಲ್ಲ ಸಮಿತಿಗಳಿಗೆ ನೇಮಕ ಮಾಡಲಾಗುವುದು. ಇದರಿಂದ ಪಕ್ಷದ ಐದು ಸಾವಿರ ಕಾರ್ಯಕರ್ತರಿಗೆ ಅವಕಾಶ ಸಿಗಲಿದೆ’ ಎಂದಿದ್ದಾರೆ.

‘ಗ್ಯಾರಂಟಿ ಯೋಜನೆಗಳ ಬಗ್ಗೆ ಮಾಹಿತಿ ಇರುವ ಕರಪತ್ರಗಳನ್ನು ಕೆಪಿಸಿಸಿಯಿಂದ ಸಿದ್ಧಪಡಿಸಿ, ಮನೆ ಮನೆಗೆ ತಲುಪಿಸಲಾಗುವುದು’ ಎಂದು ಅವರು ಹೇಳಿದ್ದಾರೆ.

# ಅಭ್ಯರ್ಥಿಗಳ ಬದಲಿಗೆ ಒತ್ತಡ

### ಲೋಕಸಭಾ ಚುನಾವಣೆ ಸಿದ್ಧತೆಗೆ ಬಿಜೆಪಿ ಕ್ಲಸ್ಟರ್‌ವಾರು ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲೋಕಸಭಾ ಚುನಾವಣಾ ಸಿದ್ಧತೆಗೆ ಬಿಜೆಪಿಯ ರಾಜ್ಯ ಘಟಕದ ಪ್ರಮುಖರು ಆರಂಭಿಸಿರುವ ಕ್ಲಸ್ಟರ್‌ವಾರು ಸಭೆಯ ಮೊದಲ ದಿನವೇ ಹಲವು ಕ್ಷೇತ್ರಗಳ ಅಭ್ಯರ್ಥಿಗಳನ್ನು ಬದಲಾವಣೆ ಮಾಡುವಂತೆ ಸ್ಥಳೀಯ ನಾಯಕರು ಬೇಡಿಕೆ ಇಟ್ಟಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಗರದ ಹೊರ ವಲಯದ ರಮಾಡ ರೆಸಾರ್ಟ್‌ನಲ್ಲಿ ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೆ 13 ಲೋಕಸಭಾ ಕ್ಷೇತ್ರಗಳ ಮುಖಂಡರ ಸಭೆ ನಡೆಯಿತು. ಗುರುವಾರ 15 ಲೋಕಸಭಾ ಕ್ಷೇತ್ರಗಳ ಮುಖಂಡರ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ.

ಸಂಸದ ಡಿ.ವಿ. ಸದಾನಂದ ಗೌಡ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ಜಿ.ವಿ. ರಾಜೇಶ್, ಪ್ರಧಾನ ಕಾರ್ಯದರ್ಶಿ ವಿ. ಸುನಿಲ್ ಕುಮಾರ್, ಶಾಸಕರಾದ ಬಸವರಾಜ ಬೊಮ್ಮಾಯಿ, ಡಾ.ಸಿ. ಎನ್. ಅಶ್ವತ್ಥ ನಾರಾಯಣ, ಮಾಜಿ ಸಚಿವ ಸಿ.ಟಿ.ರವಿ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿದ್ದರು.

ಬೀದರ್ ಲೋಕಸಭಾ ಕ್ಷೇತ್ರದಿಂದ ಸಭೆ ಆರಂಭಿಸಲಾಯಿತು. ಶಾಸಕರಾದ ಪ್ರಭು ಚವ್ಹಾಣ್ ಮತ್ತು ಶರಣು ಸಲಗರ ಕೇಂದ್ರ ಸಚಿವ ಭಗವಂತ್ ಖೂಬಾ ವಿರುದ್ಧ ಆಕ್ಷೇಪ ಎತ್ತಿದರು. ಸಚಿವರು ವಿಧಾನಸಭಾ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ಪ್ರಯತ್ನಿಸಿದ್ದು, ಲೋಕಸಭಾ ಚುನಾವಣೆಯಲ್ಲಿ ಅವರನ್ನು ಕಣಕ್ಕಿಳಿಸಬಾರದು ಎಂಬ ಬೇಡಿಕೆ ಮಂಡಿಸಿದರು. ಈ ವೇಳೆ ಸಚಿವರ ಬೆಂಬಲಿಗರು ಮತ್ತು ಶಾಸಕರ ಮಧ್ಯೆ ವಾಗ್ವಾದ ನಡೆದಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಕೊಪ್ಪಳ, ಬಳ್ಳಾರಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹಾಲಿ ಸಂಸದರ ಬದಲಿಗೆ ಬೇರೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುವಂತೆ ಒತ್ತಾಯಿಸಿದ್ದಾರೆ. ಬಹುತೇಕ ಎಲ್ಲ ಕ್ಷೇತ್ರಗಳಿಂದಲೂ ಕೆಲವರ ಹೆಸರುಗಳನ್ನು ಸ್ಥಳೀಯ ಮುಖಂಡರು ಪ್ರಸ್ತಾಪಿಸಿದ್ದಾರೆ’ ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದರು.

**ಕ್ಷೇತ್ರವಾರು ಯೋಜನೆಗೆ ನಿರ್ಧಾರ:** ಪ್ರತಿ ಲೋಕಸಭಾ ಕ್ಷೇತ್ರದ ಪ್ರಸಕ್ತ ಸ್ಥಿತಿಗತಿ, ವಿಧಾನಸಭಾ ಚುನಾವಣೆ ಬಳಿಕ ಬಿಜೆಪಿಯ ಸ್ಥಿತಿ, ಕಾಂಗ್ರೆಸ್‌ನ ಪ್ರಾಬಲ್ಯದ ಕುರಿತು ನಾಯಕರು ಸ್ಥಳೀಯ ಮುಖಂಡರಿಂದ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಜೆಡಿಎಸ್ ಜತೆಗಿನ ಸಮನ್ವಯದ ಕುರಿತೂ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಪ್ರತಿ ಗ್ರಾಮಕ್ಕೊಬ್ಬ ಪ್ರಮುಖರನ್ನು ನೇಮಿಸುವುದು, ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶ ಆಯೋಜನೆ, ಯುವ ಮತದಾರರನ್ನು ಬಿಜೆಪಿಯತ್ತ ಸೆಳೆಯುವುದು, ಜನವರಿ 24ರಂದು ರಾಜ್ಯದಾದ್ಯಂತ ಸಂಪರ್ಕ ಅಭಿಯಾನ ನಡೆಸುವುದು, ಬೆಂಗಳೂರಿನಲ್ಲಿ ಚುನಾವಣಾ ಕಚೇರಿ ಆರಂಭಿಸಿ ಎಲ್ಲ ಕ್ಷೇತ್ರಗಳೊಂದಿಗೆ ಸಂಪರ್ಕ ಸಾಧಿಸುವ ಬಗ್ಗೆ ಚರ್ಚೆ ನಡೆದಿದೆ.



ಲೋಕಸಭಾ ಚುನಾವಣಾ ಸಿದ್ಧತೆ ಕುರಿತು ಚರ್ಚಿಸಲು ಬೆಂಗಳೂರಿನ ರಮಾಡ ಹೋಟೆಲ್‌ನಲ್ಲಿ ಬುಧವಾರ ನಡೆದ ಸಭೆಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪಕ್ಷದ ಸಂಸ್ಥಾಪಕರಾದ ಶ್ಯಾಮಾಪ್ರಸಾದ್ ಮುಖರ್ಜಿ, ದೀನದಯಾಳ್ ಉಪಾಧ್ಯಾಯ ಮತ್ತು ಭಾರತಾಂಬೆಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ವಿ. ಸುನಿಲ್ ಕುಮಾರ್, ಮಾಜಿ ಸಚಿವ ಸಿ.ಟಿ. ರವಿ, ಪಕ್ಷದ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ. ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

## ಕೇಂದ್ರ ನಾಯಕರ ಪ್ರವಾಸ

ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಫೆಬ್ರುವರಿ 19ರೊಳಗೆ ರಾಜ್ಯದಲ್ಲಿ ಮೊದಲ ಸುತ್ತಿನ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸಲಿದ್ದಾರೆ ಎಂಬ ಮಾಹಿತಿಯನ್ನು ಪಕ್ಷದ ರಾಜ್ಯ ನಾಯಕರು ಹಂಚಿಕೊಂಡಿದ್ದಾರೆ.

ಲೋಕಸಭಾ ಕ್ಷೇತ್ರ ಮಟ್ಟದ ಸ್ಥಳೀಯ ಮುಖಂಡರ ಸಭೆಯಲ್ಲಿ ಯಡಿಯೂರಪ್ಪ ಮತ್ತು ವಿಜಯೇಂದ್ರ ಈ ಮಾಹಿತಿ ನೀಡಿದ್ದು, ‘ದಿನವೊಂದರಲ್ಲಿ ಮೂವರೂ ತಲಾ ಪ್ರತ್ಯೇಕವಾಗಿ ಒಂದೊಂದು ಕ್ಷೇತ್ರಗಳಿಗೆ ಭೇಟಿ ನೀಡುತ್ತಾರೆ. ಅದಕ್ಕೆ ಪೂರಕವಾಗಿ ಪ್ರವಾಸದ ಸಿದ್ಧತೆ ಮಾಡಬೇಕು’ ಎಂಬ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಕಾರ್ಯತಂತ್ರ ರೂಪಿಸಲು ಅಮಿತ್ ಶಾ ಅವರು ಎರಡು ದಿನಗಳನ್ನು ಮೀಸಲಿಡಲಿದ್ದಾರೆ ಎಂಬುದನ್ನೂ ತಿಳಿಸಿದ್ದಾರೆ.

### ‘ಪ್ರತಿ ಕ್ಷೇತ್ರಕ್ಕೂ ಪ್ರತ್ಯೇಕ ಕಾರ್ಯತಂತ್ರ’

‘ಪ್ರತಿ ಲೋಕಸಭಾ ಕ್ಷೇತ್ರಕ್ಕೂ ಪ್ರತ್ಯೇಕವಾದ ಚುನಾವಣಾ ಕಾರ್ಯತಂತ್ರ ರೂಪಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ’ ಎಂದು ಸಂಸದ ಡಿ.ವಿ. ಸದಾನಂದ ಗೌಡ ತಿಳಿಸಿದರು. ಸುದ್ದಿಗಾರರ ಜತೆ ಮಾತ ನಾಡಿದ ಅವರು, ‘ಮುಂದಿನ ದಿನಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಇಂತಹ ಸಭೆ ನಡೆಸುವುದಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ತಿಳಿಸಿದ್ದಾರೆ. ಅಲ್ಲಿ ಸ್ಥಳೀಯವಾಗಿ ಚುನಾವಣಾ ಕಾರ್ಯತಂತ್ರ ನಿರ್ಧರಿಸಲಾಗುವುದು’ ಎಂದರು.

# 21ಕ್ಕೆ ಕಾರ್ಯಕರ್ತರ ಸಮಾವೇಶ– ಡಿಕೆಶಿ

**ಬೆಂಗಳೂರು:** ‘ಇದೇ 21ರಂದು ಪಕ್ಷದ ಕಾರ್ಯಕರ್ತರ ಸಮಾವೇಶ ಆಯೋಜಿಸುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಚಿಸಿದ್ದಾರೆ. ಈ ಸಮಾವೇಶ ನಡೆಯಲಿರುವ ಸ್ಥಳವನ್ನು ಎರಡು ದಿನಗಳಲ್ಲಿ ತಿಳಿಸಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಚಿವರು, ಶಾಸಕರು, ಜಿಲ್ಲಾ ಮತ್ತು ಬ್ಲಾಕ್ ಮುಖಂಡರು, ಸಹಕಾರ ಸಂಸ್ಥೆಗಳ ಪ್ರತಿನಿಧಿಗಳು, ವಿವಿಧ ಘಟಕಗಳ ಪದಾಧಿಕಾರಿಗಳು, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದವರು, ಸೋತವರು, ಬೂತ್ ಮಟ್ಟದ ಪ್ರತಿನಿಧಿಗಳನ್ನು ಸೇರಿಸಿ ಸಮಾವೇಶ ಹಮ್ಮಿಕೊಳ್ಳಲು ಖರ್ಗೆ ಸಲಹೆ ನೀಡಿದ್ದಾರೆ’ ಎಂದರು.

‘ಲೋಕಸಭೆ ಚುನಾವಣೆ ಅಭ್ಯರ್ಥಿ ಆಯ್ಕೆ ವಿಚಾರವಾಗಿ ಮುಖ್ಯಮಂತ್ರಿ, ನಾನು ಮತ್ತು ಎಐಸಿಸಿ ಮೂಲಕ ಸಮೀಕ್ಷೆ ನಡೆಸುತ್ತಿದ್ದೇವೆ’ ಎಂದೂ ತಿಳಿಸಿದರು.

‘ಫೆ.12ರಿಂದ ವಿಧಾನಮಂಡಲದ ಅಧಿವೇಶನ ಆರಂಭವಾಗುವ ಸಾಧ್ಯತೆ ಇದೆ. ಅಷ್ಟರ ಒಳಗೆ ಜಿಲ್ಲಾ ಹಾಗೂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಆಯೋಜಿಸಲು ತೀರ್ಮಾನಿಲಾಗಿದೆ’ ಎಂದರು.

‘ಮನೆ, ಮನೆಗೆ ಕಾಂಗ್ರೆಸ್ ಎಂಬ ಕಾರ್ಯಕ್ರಮವನ್ನು ಶೀಘ್ರದಲ್ಲಿ ರೂಪಿಸಲಾಗುವುದು. ಕಾರ್ಯಕರ್ತರಿಗೆ ಶಕ್ತಿ ತುಂಬಲು ನಿಗಮ ಮಂಡಳಿಗಳ ನೇಮಕದ ಮೊದಲ ಪಟ್ಟಿ ಸದ್ಯದಲ್ಲೇ ಪ್ರಕಟವಾಗಲಿದೆ’ ಎಂದೂ ಹೇಳಿದರು.

‘ಗ್ಯಾರಂಟಿ ಯೋಜನೆಗಳ ಸಮರ್ಪಕ ಜಾರಿಗೆ ಹೊಸ ಸ್ವರೂಪದ ಕಾರ್ಯಕ್ರಮ ರೂಪಿಸಿದ್ದೇವೆ. ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಸಂದಾಯ ಮಾಡಿ ಪಾರದರ್ಶಕತೆ ಕಾಪಾಡಿಕೊಂಡಿದ್ದೇವೆ. ಶೇ 80ರಷ್ಟು ಕುಟುಂಬಗಳಿಗೆ ಈ ಯೋಜನೆ ತಲುಪಿದೆ’ ಎಂದರು.

### ‘ಹೆಚ್ಚುವರಿ ಡಿಸಿಎಂ ಸೃಷ್ಟಿಗೆ ಡಿ.ಕೆ.ಶಿವಕುಮಾರ್ ವಿರೋಧ ಇಲ್ಲ’

# ಖರ್ಗೆ ಸ್ಪಷ್ಟನೆ ಬಳಿಕವೂ ರಾಜಣ್ಣ ಪಟ್ಟು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜ್ಯದಲ್ಲಿ ಇನ್ನೂ ಮೂರು ಉಪಮುಖ್ಯಮಂತ್ರಿ (ಡಿಸಿಎಂ) ಪ್ರಸ್ತಾವ ಇಲ್ಲ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದ ಬಳಿಕವೂ, ‘ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿಸಬೇಕೆಂಬ ನನ್ನ ಹೇಳಿಕೆಗೆ ಈಗಲೂ ಬದ್ಧ. ಹೆಚ್ಚುವರಿ ಡಿಸಿಎಂ ಮಾಡುವುದಕ್ಕೆ ಡಿ.ಕೆ. ಶಿವಕುಮಾರ್ ವಿರೋಧ ಇಲ್ಲ’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಡಿಸಿಎಂ, ಲೋಕಸಭೆ ಚುನಾವಣೆ ಹೀಗೆ ಎಲ್ಲ ವಿಚಾರಗಳನ್ನು ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಹೆಚ್ಚುವರಿ ಡಿಸಿಎಂ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ವಿರೋಧ ಮಾಡುತ್ತಿದ್ದಾರೆಂದು ಯಾರು ತಿಳಿದುಕೊಳ್ಳಬೇಡಿ’ ಎಂದರು.

ಹೆಚ್ಚುವರಿ ಡಿಸಿಎಂ ವಿಚಾರದಲ್ಲಿ ಖರ್ಗೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ರಾಜಣ್ಣ, ‘ಆ ಪ್ರಸ್ತಾಪ ಇನ್ನೂ ನಮ್ಮ ಗಮನಕ್ಕೆ ಬಂದಿಲ್ಲ ಎಂದು ಖರ್ಗೆ ಹೇಳಿದ್ದಾರೆಯೇ ಹೊರತು, ಮಾಡುವುದಿಲ್ಲ ಎಂದು ಹೇಳಿಲ್ಲ’ ಎಂದರು.

‘ಹೆಚ್ಚುವರಿ ಡಿಸಿಎಂ ಪ್ರಸ್ತಾವವನ್ನು ಖರ್ಗೆ ತಳ್ಳಿ ಹಾಕಿಲ್ಲ. ಈ ಸಮಯದಲ್ಲಿ ಗೊಂದಲ ಬೇಡ ಅಂದಿದ್ದಾರೆ. ನಾವು ಈ ವಿಚಾರವನ್ನು ಇನ್ನೂ ಖರ್ಗೆಯವರ ಗಮನಕ್ಕೆ ತೆಗೆದುಕೊಂಡು ಹೋಗಿಲ್ಲ’ ಎಂದರು.

‘ಹೆಚ್ಚುವರಿ ಡಿಸಿಎಂ ಪ್ರಸ್ತಾಪ ಇಲ್ಲ’ ಎಂದು ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರಲ್ಲ ಎಂದಾಗ, ‘ಅವರು ಹೇಳಿದ್ದು ಸರಿಯಿದೆ ಅಥವಾ ಸರಿ ಇಲ್ಲ ಎಂದು ಹೇಳಲು ಆಗುವುದಿಲ್ಲ’ ಎಂದರು. ‘ಹೈಕಮಾಂಡ್ ನಿಮ್ಮ ಮಾತನ್ನು ಗಂಭೀರವಾಗಿ ತೆಗೆದುಕೊಳುತ್ತಿಲ್ಲವೇ’ ಎಂದು ಕೇಳಿದಾಗ, ‘ಹೈಕಮಾಂಡ್ ಅಥವಾ ಇನ್ನೊಬ್ಬರು ತೆಗೆದುಕೊಳ್ಳುವುದು, ನಾನು ಹೇಳುವುದು ಬೇರೆ. ಹಿಂದಿನ ಬಿಜೆಪಿ ಸರ್ಕಾರದಲ್ಲಿ ಕಾರಜೋಳ, ಅಶ್ವತ್ಥ ನಾರಾಯಣ, ಈಶ್ವರಪ್ಪ ಹೀಗೆ ಮೂವರು ಉಪ ಮುಖ್ಯಮಂತ್ರಿಗಳಿದ್ದರು. ಹೊಸ ಸರ್ಕಾರ ಬಂದಿರುವ 3 ರಾಜ್ಯಗಳಲ್ಲಿ ಇತರ ಸಮುದಾಯಗಳಿಗೂ ನ್ಯಾಯ ದೊರಕಿಸಬೇಕೆಂದು ಸಮುದಾಯವಾರು ಉಪ ಮುಖ್ಯಮಂತ್ರಿ ಮಾಡಿದ್ದಾರೆ. ಅದೇ ರೀತಿ ನಮ್ಮಲ್ಲೂ ಮಾಡಿದರೆ ಲೋಕಸಭೆ ಚುನಾವಣೆಯ ಫಲಿತಾಂಶ ಉತ್ತಮವಾಗಿ ಬರಲಿದೆ’ ಎಂದು ಅಭಿಪ್ರಾಯಪಟ್ಟರು.

‘ರಾಜ್ಯದ 28 ಲೋಕಸಭೆ ಕ್ಷೇತ್ರಗಳಲ್ಲಿ 20 ಸ್ಥಾನ ಗೆಲ್ಲದಿದ್ದರೆ ನಮಗೆ ಯಾವ ನೈತಿಕತೆ ಇರಲಿದೆ. ಸಮುದಾಯವಾರು ಉಪ ಮುಖ್ಯಮಂತ್ರಿ ಮಾಡಿದರೆ ಎಲ್ಲ 28 ಕ್ಷೇತ್ರಗಳನ್ನೂ ಗೆಲ್ಲುತ್ತೇವೆ’ ಎಂದರು.

**ರಾಜಣ್ಣ – ಡಿಕೆಶಿ ಮಾತುಕತೆ:** ಸಭೆಯ ಬಳಿಕ ರಾಜಣ್ಣ ಅವರು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಕೆಲಹೊತ್ತು ಗೌಪ್ಯವಾಗಿ ಮಾತುಕತೆ ನಡೆಸಿದರು. ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿಸಿ ಕೆಲವು ಸಮುದಾಯಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಬೇಕೆಂಬ ಬೇಡಿಕೆಯ ಬೆನ್ನಲ್ಲೇ ಈ ಇಬ್ಬರ ಭೇಟಿ ಕುತೂಹಲ ಮೂಡಿಸಿದೆ.


### ‘ಹೆಚ್ಚುವರಿ ಡಿಸಿಎಂ– ಊಹಾಪೋಹ’

‘ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿ ವಿಚಾರ ಊಹಾಪೋಹದ ಸುದ್ದಿ’ ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದರು.

‘ನಾವು ಪ್ರಮುಖ ವಿಚಾರಗಳಿಗೆ ಬಗ್ಗೆ ಹೆಚ್ಚಿನ ಆದ್ಯತೆ ನೀಡುತ್ತೇವೆ. ಎಲ್ಲ ಕ್ಷೇತ್ರಗಳಲ್ಲೂ ಜನ ಕಲ್ಯಾಣಕ್ಕೆ ಒತ್ತು ನೀಡುತ್ತೇವೆ. ಗ್ಯಾರಂಟಿ ಜಾರಿ ನಮ್ಮ ಆದ್ಯತೆ. ಪ್ರತಿಯೊಂದು ಕ್ಷೇತ್ರಗಳಲ್ಲಿ ಆಸ್ಪತ್ರೆ, ರಸ್ತೆ, ಬಸ್ ನಿಲ್ದಾಣ, ಮೂಲ ಸೌಕರ್ಯಗಳನ್ನು ಒದಗಿಸುವುದು ಪ್ರಮುಖ ಆದ್ಯತೆ’ ಎಂದರು.

# ‘ಮುಸ್ಲಿಂ ಮಹಿಳೆಯರು ಮೋದಿ ಪರ ನಿಲ್ಲುತ್ತಾರೆ’

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

**ಬೆಂಗಳೂರು:** ‘ಮುದ್ರಾ, ಆಯುಷ್ಮಾನ್ ಭಾರತ್, ಪ್ರಧಾನಮಂತ್ರಿ ಆವಾಸ್ ಸೇರಿದಂತೆ ಪ್ರಧಾನಿ ನರೇಂದ್ರ ಮೋದಿಯವರ ವಿವಿಧ ಯೋಜನೆಗಳ ಅನುಕೂಲ ಪಡೆದಿರುವ ಮುಸ್ಲಿಂ ಮಹಿಳೆಯರು ಈ ಬಾರಿ ಅವರ ಪರ ನಿಲ್ಲುತ್ತಾರೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

‘ಶುಕ್ರಿಯಾ ಮೋದಿ ಭಾಯ್ ಜಾನ್’ ಕಾರ್ಯಕ್ರಮ ಕುರಿತು ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಮೋದಿಯವರು ಏನೆಲ್ಲಾ ಕೆಲಸ ಮಾಡಿದ್ದಾರೆ ಎಂಬುದರ ಅರಿವು ಮುಸ್ಲಿಂ ತಾಯಂದಿರಿಗೆ ಇದೆ. ಆದರೆ, ಅದನ್ನು ಅದುಮಿಡುವ ಕೆಲಸ ನಡೆದಿದೆ. ಮುಸ್ಲಿಂ ತಾಯಂದಿರ ಅಭಿಪ್ರಾಯಗಳನ್ನು ಹೊರತರಲು ಶುಕ್ರಿಯಾ ಮೋದಿ ಭಾಯ್ ಜಾನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ’ ಎಂದರು.

ಈ ಕಾರ್ಯಕ್ರಮದಿಂದ ವಿರೋಧ ಪಕ್ಷಗಳ ‘ಇಂಡಿ’ ಮೈತ್ರಿಕೂಟಕ್ಕೆ ಹಿನ್ನಡೆ ಆಗುತ್ತದೆ. ಕೋಟ್ಯಂತರ ಮುಸ್ಲಿಂ ಮಹಿಳೆಯರು ಪ್ರಧಾನಿ ಪರ ನಿಲ್ಲುತ್ತಾರೆ ಎಂದು ಹೇಳಿದರು.

ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಪಾಲ್ಗೊಳ್ಳುವ ಸ್ತಬ್ಧಚಿತ್ರಗಳ ಆಯ್ಕೆಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬ ಆರೋಪದಲ್ಲಿ ಹುರುಳಿಲ್ಲ. ಮಾರ್ಗಸೂಚಿಯಂತೆ ಎಲ್ಲವೂ ನಡೆದಿದೆ. ಜನರನ್ನು ಕೆರಳಿಸಲು ಸುಳ್ಳು ಆರೋಪ ಮಾಡಲಾಗುತ್ತಿದೆ ಎಂದರು.

‘ರಾಜ್ಯದಿಂದ ಹೂಡಿಕೆದಾರರು ಹೊರ ಹೋಗುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ವಿದೇಶಿ ನೇರ ಹೂಡಿಕೆ ಶೇಕಡ 30ರಷ್ಟು ಕುಸಿದಿದೆ. ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳುವುದರಲ್ಲೇ ತಲ್ಲೀನರಾಗಿದ್ದಾರೆ’ ಎಂದು ಟೀಕಿಸಿದರು.

### ಕೊಪ್ಪಳದಲ್ಲಿ ನಿರ್ಮಾಣವಾಗಲಿದೆ ಸಹಸ್ರಾಂಜನೇಯ ದೇವಸ್ಥಾನ

# ‘ರಾಮನ ಕಲ್ಲಿ’ನಿಂದ ಆಂಜನೇಯ ಮೂರ್ತಿ

ಪ್ರಜಾವಾಣಿ ವಾರ್ತೆ

**ಕೊಪ್ಪಳ:** ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರತಿಷ್ಠಾಪಿಸಲು ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಕೆತ್ತಿರುವ ರಾಮನ ಮೂರ್ತಿಗೆ ಬಳಕೆ ಮಾಡಿ ಉಳಿದಿದ್ದ ಕಲ್ಲಿನಲ್ಲಿ ಕೊಪ್ಪಳದ ಕಲಾವಿದ ಪ್ರಕಾಶ್ ಶಿಲ್ಪಿ ಅವರು ಆಂಜನೇಯನ ಮೂರ್ತಿ ಕೆತ್ತನೆ ಮಾಡಿ, ದೇವಸ್ಥಾನ ನಿರ್ಮಿಸಲು ಮುಂದಾಗಿದ್ದಾರೆ.

ಮೈಸೂರು ಸಮೀಪದ ಹಾರೋಹಳ್ಳಿಯ ಕಲ್ಲಿನಿಂದ ರಾಮನ ಮೂರ್ತಿಯನ್ನು ಕೆತ್ತಲಾಗಿದೆ. ಮೂರ್ತಿಗಾಗಿ ತೆಗೆದುಕೊಂಡು ಹೋದ ಬಳಿಕ ಉಳಿದಿದ್ದ ಕಲ್ಲಿನ ಭಾಗ ಒಂದೆರಡು ದಿನಗಳಲ್ಲಿ ಕೊಪ್ಪಳಕ್ಕೆ ಬರಲಿದೆ. ರಾಮಮಂದಿರ ಉದ್ಘಾಟನೆಯಾಗಲಿರುವ ಜನವರಿ 22ರಂದೇ ಪ್ರಕಾಶ್ ಅವರು ಆಂಜನೇಯ ಮೂರ್ತಿ ಕೆತ್ತನೆ ಕಾರ್ಯ ಆರಂಭಿಸಲಿದ್ದಾರೆ.

ವಿಜಯದಾಸರ ಮೂರ್ತಿ ಕೆತ್ತನೆಗಾಗಿ ಕಲ್ಲು ಆಯ್ಕೆ ಮಾಡಿಕೊಳ್ಳಲು ಪ್ರಕಾಶ್ ಕಳೆದ ವರ್ಷ ಹಾರೋಹಳ್ಳಿಗೆ ಹೋಗಿದ್ದರು. ಅವರು ನೋಡಿದ್ದ ಕಲ್ಲು ಉತ್ಕೃಷ್ಟ ಗುಣಮಟ್ಟದ್ದಾಗಿದ್ದರೂ ತಮಗೆ ಬೇಕಾದಷ್ಟು ಅಳತೆಯಲ್ಲಿ ಇಲ್ಲ ಎಂಬ ಕಾರಣಕ್ಕೆ ಬಿಟ್ಟು ಬಂದಿದ್ದರು. ಈಗ ಅದೇ ಕಲ್ಲಿನಿಂದ ರಾಮನ ಮೂರ್ತಿಯನ್ನು ನಿರ್ಮಿಸಲಾಗಿದ್ದು, ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೆ ಸ್ಪರ್ಧೆಯಲ್ಲಿರುವ ರಾಮನ ಮೂರ್ತಿಗಳ ಪೈಕಿ ಒಂದಾಗಿದೆ.

ಪ್ರಕಾಶ್ ಅವರ ತಂದೆ ದಿವಂಗತ ಶೇಖರಪ್ಪ ಶಿಲ್ಪಿ ಅಪ್ಪಟ ಆಂಜನೇಯನ ಭಕ್ತರು. 2006ರಲ್ಲಿ ಅವರು ಮೃತಪಟ್ಟಾಗ ಅವರದ್ದೇ ಮೂರ್ತಿ ಕೆತ್ತಿ ದೇವಸ್ಥಾನ ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ, ಸಮಾಜದ ಹಿರಿಯರು ಹಾಗೂ ಕುಟುಂಬದವರು, ಶೇಖರಪ್ಪ ಆಂಜನೇಯನ ಭಕ್ತರಾಗಿದ್ದರಿಂದ ದೇವಸ್ಥಾನ ನಿರ್ಮಿಸಿ ಆಂಜನೇಯನ ಮೂರ್ತಿ ಪ್ರತಿಷ್ಠಾಪಿಸಲು ಸಲಹೆ ನೀಡಿದ್ದರು.

**ನಿತ್ಯ ಹನುಮನ ಮೂರ್ತಿ:** ತಂದೆಯಂತೆಯೇ ಪ್ರಕಾಶ್ ಕೂಡ ಆಂಜನೇಯನ ಭಕ್ತರು. 2007ರ ಜನವರಿ 26ರಿಂದ ನಿತ್ಯ ಬೆಳಿಗ್ಗೆ ಒಂದು ಅಥವಾ ಒಂದೂವರೆ ಅಡಿ ಎತ್ತರದ ಕಲ್ಲಿನ ಹನುಮನ ಮೂರ್ತಿ ಕಟೆದು ಅದಕ್ಕೆ ಪೂಜೆ ಸಲ್ಲಿಸಿದ ಬಳಿಕವೇ ಉಳಿದ ಕೆಲಸ ಮಾಡುತ್ತಾರೆ. ಗುರುವಾರದ (ಜ. 10) ಅಂತ್ಯಕ್ಕೆ ಅವರು ಕಟೆದ ಹನುಮನ ಮೂರ್ತಿಗಳ ಸಂಖ್ಯೆ 6,141 ಆಗಿದೆ.

‘17 ವರ್ಷಗಳಿಂದ ನಿತ್ಯ ಬೆಳಿಗ್ಗೆ ಆಂಜನೇಯನ ಮೂರ್ತಿ ಕೆತ್ತನೆ ಮಾಡುವುದು ರೂಢಿ. ಹಾರೋಹಳ್ಳಿಗೆ ಹೋದಾಗ ಅದೇ ಕಲ್ಲಿನ ಮುಂದೆ ಎಂದಿನಂತೆ ಮೂರ್ತಿ ತಯಾರಿಸಿದ್ದೆ. ಅಳತೆ ಸರಿ ಹೋಗಲಿಲ್ಲ ಎಂದು ವಿಜಯದಾಸರ ಮೂರ್ತಿ ತಯಾರಿಕೆಗೆ ಆ ಕಲ್ಲು ತರಲಿಲ್ಲ. ಈಗ ಅದೇ ಕಲ್ಲು ಅಯೋಧ್ಯೆಯ ರಾಮನಾಗುವ ಸ್ಪರ್ಧೆಯಲ್ಲಿರುವುದು ಹೆಮ್ಮೆಯ ಕ್ಷಣ. ಆ ಕಲ್ಲಿನ ಉಳಿದ ಭಾಗದಲ್ಲಿ ಆಂಜನೇಯನ ಮೂರ್ತಿ ತಯಾರಿಸಿ ಇಲ್ಲಿನ ಗವಿಶ್ರೀ ನಗರದಲ್ಲಿ ಸಹಸ್ರಾಂಜನೇಯ ದೇವಸ್ಥಾನ ನಿರ್ಮಿಸಿ ಪ್ರತಿಷ್ಠಾಪಿಸಲಾಗುವುದು’ ಎಂದು ಪ್ರಕಾಶ್ ತಿಳಿಸಿದರು.



ಕೊಪ್ಪಳದ ಕಲಾವಿದ ಪ್ರಕಾಶ್ ಶಿಲ್ಪಿ ತಮ್ಮ ಮನೆಯಲ್ಲಿ ನಿತ್ಯ ಒಂದು ಹನುಮನ ಮೂರ್ತಿ ಕಟೆದು ಸಂಗ್ರಹಿಸಿಟ್ಟಿರುವುದು –ಪ್ರಜಾವಾಣಿ ಚಿತ್ರ

**ಮುಖ್ಯಾಂಶಗಳು**

- ಕೊಪ್ಪಳದ ಕಲಾವಿದ ಪ್ರಕಾಶ್ ಶಿಲ್ಪಿ ಅವರಿಂದ ಕೆತ್ತನೆ
- ರಾಮನ ಮೂರ್ತಿಗೆ ಹಾರೋಹಳ್ಳಿಯ ಕಲ್ಲು ಬಳಕೆ
- 17 ವರ್ಷಗಳಿಂದ ಬೆಳಿಗ್ಗೆ ಆಂಜನೇಯ ಮೂರ್ತಿ ಕೆತ್ತನೆ ರೂಢಿ

### ‘ಉಳಿದ ಕಲ್ಲು ಎತ್ತಿಟ್ಟದ್ದೇವೆ’

‘ಹಾರೋಹಳ್ಳಿಯ ಹೊಲದಲ್ಲಿದ್ದ ಕಲ್ಲು ಬಳಸಿಕೊಂಡು ರಾಮನ ಮೂರ್ತಿ ತಯಾರಿಸಲಾಗಿದೆ. ಇದನ್ನು ಮೊದಲು ಕೊಪ್ಪಳದ ಪ್ರಕಾಶ್ ನೋಡಿ ಬಿಟ್ಟು ಹೋಗಿದ್ದರು. ಈಗ ರಾಮನ ಮೂರ್ತಿ ಯಾಗಿರುವುದು ತಿಳಿದು ಉಳಿದ ಇನ್ನಷ್ಟು ಕಲ್ಲಿನಲ್ಲಿ ಆಂಜನೇಯನ ಮೂರ್ತಿ ಮಾಡುವೆ; ನನಗೇ ಕಲ್ಲು ನೀಡಿ ಎಂದು ಪ್ರಕಾಶ್ ಕೇಳಿದ್ದಾರೆ. ಕೊಡಲು ಸಿದ್ಧರಿದ್ದು ಅವರಿಗಾಗಿಯೇ ಐದಾರು ಕಲ್ಲಿನ ಭಾಗಗಳನ್ನು ತೆಗೆದಿಟ್ಟಿದ್ದೇವೆ’ ಎಂದು ಕಲ್ಲು ಸಿಕ್ಕ ಹಾರೋಹಳ್ಳಿಯ ಹೊಲದಲ್ಲಿ ಕೆಲಸ ಮಾಡುವ ಶ್ರೀನಿವಾಸ್ ‘ಪ್ರಜಾವಾಣಿ’ಗೆ ತಿಳಿಸಿದರು.

# ಅರ್ಧ ಟಿಕೆಟ್ ಹಣ ಬಡ್ಡಿಸಹಿತ ವಾಪಸ್

### 2 ತಿಂಗಳಲ್ಲಿ ಪಾವತಿಸಲು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ

ಪ್ರಜಾವಾಣಿ ವಾರ್ತೆ

**ಬಾಗಲಕೋಟೆ:** 12 ವರ್ಷದೊಳಗಿನ ಬಾಲಕನಿಗೆ ಪೂರ್ಣ ಟಿಕೆಟ್ ಪಡೆದ ಕಂಡಕ್ಟರ್‌ಗೆ ಹೆಚ್ಚುವರಿಯಾಗಿ ಪಡೆದ ಟಿಕೆಟ್ ಹಣವನ್ನು ಶೇ 9ರ ಬಡ್ಡಿಯೊಂದಿಗೆ ಎರಡು ತಿಂಗಳಲ್ಲಿ ಪಾವತಿಸುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

ಮುಧೋಳ ತಾಲ್ಲೂಕಿನ ಅನಂತಪುರ ಗ್ರಾಮದ ನಿವಾಸಿ ದೀಪಾ ಹಿರೇಮಠ ಅವರು ಪುತ್ರನೊಂದಿಗೆ ಕಳೆದ ವರ್ಷ ಜುಲೈ 1ರಂದು ಮುಧೋಳದಿಂದ ವಿಜಯಪುರಕ್ಕೆ ಹೊರಟಿದ್ದರು.

‘ಪುತ್ರನಿಗೆ 10 ವರ್ಷ 11 ತಿಂಗಳು ಆಗಿದ್ದು ಅರ್ಧ ಟಿಕೆಟ್ ನೀಡಿ’ ಎಂದು ದೀಪಾ ಅವರು ಕಂಡಕ್ಟರ್‌ಗೆ ಕೇಳಿದರು. ‘12 ವರ್ಷ ಮೇಲ್ಪಟ್ಟಿದ್ದಾನೆ, ಪೂರ್ಣ ಟಿಕೆಟ್ ಪಡೆಯಬೇಕು’ ಎಂದು ಕಂಡಕ್ಟರ್ ಸೂಚಿಸಿದರು. ಆಗ ಜನ್ಮ ದಾಖಲೆಯ ಆಧಾರ್ ಕಾರ್ಡ್ ತೋರಿಸಿದರೂ ಒಪ್ಪದ ಅವರು, ‘ಬಸ್‌ನಿಂದ ಕೆಳಗೆ ಇಳಿಯಿರಿ’ ಎಂದರು. ಆಗ ಅವರು ಪೂರ್ಣ ಟಿಕೆಟ್ ಪಡೆದೇ ಪ್ರಯಾಣಿಸಿದರು.

ನಂತರ ಈ ವಿಷಯವನ್ನು ಡಿಪೊ ವ್ಯವಸ್ಥಾಪಕರ ಗಮನಕ್ಕೆ ತಂದು, ‘ಕಂಡಕ್ಟರ್ ವಿರುದ್ಧ ಕ್ರಮ ಕೈಗೊಂಡು, ಟಿಕೆಟ್ ಹಣ ವಾಪಸ್ ಕೊಡಬೇಕು’ ಎಂದು ಕೋರಿದರು. ಅಧಿಕಾರಿಗಳು ಕ್ರಮ ಕೈಗೊಳ್ಳಲಿಲ್ಲ. ವಕೀಲರಿಂದ ನೋಟಿಸ್ ಕಳುಹಿಸಿದರೂ ಸ್ಪಂದಿಸದ ಕಾರಣ ಆಯೋಗಕ್ಕೆ ದೂರು ಸಲ್ಲಿಸಿದ್ದರು.

‘ಕೆಎಸ್‌ಆರ್‌ಟಿಸಿ ನಿಯಮಾವಳಿ ಉಲ್ಲಂಘಿಸಿ ಪೂರ್ಣ ಟಿಕೆಟ್ ಕೊಟ್ಟು ಸೇವಾ ನ್ಯೂನತೆ ಮತ್ತು ಅನುಚಿತ ವ್ಯಾಪಾರ ಮಾಡಿದ್ದು ಸಾಬೀತಾಗಿದೆ. ದೂರುದಾರರಿಂದ ಹೆಚ್ಚುವರಿಯಾಗಿ ಪಡೆದ ₹50 ಅನ್ನು ಬಡ್ಡಿ ಸಮೇತ ನೀಡಬೇಕು.

ಜೊತೆಗೆ ಮಾನಸಿಕ ಹಿಂಸೆ ಅನುಭವಿಸಿರುವುದರಿಂದ ವಿಶೇಷ ಪರಿಹಾರವಾಗಿ ₹2 ಸಾವಿರ, ಪ್ರಕರಣದ ಖರ್ಚಾಗಿ ₹1 ಸಾವಿರ ನೀಡಬೇಕು’ ಎಂದು ಆಯೋಗದ ಅಧ್ಯಕ್ಷ ಡಿ.ವೈ. ಬಸಾಪುರ, ಸದಸ್ಯರಾದ ಸಿ.ಎಚ್. ಸಮಿಉನ್ನಿಸಾ ಅಬ್ರಾರ್, ಕಮಲಕಿಶೋರ ಅವರನ್ನೊಳಗೊಂಡ ಪೀಠ ಆದೇಶಿಸಿದೆ.

# ಅಯೋಧ್ಯೆ: ‘ಕೈ’ ನಿಲುವಿಗೆ ಬಿಜೆಪಿ ಆಕ್ಷೇಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಯೋಧ್ಯೆಯಲ್ಲಿ ಇದೇ 22ರಂದು ನಡೆಯುವ ಶ್ರೀರಾಮ ವಿಗ್ರಹ ಪ್ರತಿಷ್ಠಾಪನಾ ಸಮಾರಂಭದಿಂದ ದೂರ ಉಳಿಯಲು ನಿರ್ಧರಿಸಿರುವ ಕಾಂಗ್ರೆಸ್ ನಾಯಕರ ನಿರ್ಧಾರಕ್ಕೆ ಬಿಜೆಪಿಯ ರಾಜ್ಯ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ‘ಕಾಂಗ್ರೆಸ್ ಹಿಂದುತ್ವ ವಿರೋಧಿ ನಿಲುವು ಮುಂದುವರಿಸಿದೆ’ ಎಂದು ಟೀಕಿಸಿದ್ದಾರೆ.

ಈ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ‘ಅಲ್ಪಸಂಖ್ಯಾತರ ತುಷ್ಟೀಕರಣದಲ್ಲಿ ಮುಳುಗಿರುವ ಕಾಂಗ್ರೆಸ್ ಪಕ್ಷದ ನಿರ್ಧಾರದಿಂದ ಆಶ್ಚರ್ಯವೇನೂ ಆಗಿಲ್ಲ. ರಾಮನ ಅಸ್ತಿತ್ವವನ್ನೇ ಪ್ರಶ್ನಿಸುತ್ತಿದ್ದ ಕಾಂಗ್ರೆಸ್‌ನವರು ಈಗ ಅದನ್ನು ಮುಂದುವರಿಸಿದ್ದಾರೆ’ ಎಂದರು.

ಜ.22ರಂದು ರಾಜ್ಯದ ಮುಜರಾಯಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗೆ ಮುಜರಾಯಿ ಇಲಾಖೆ ಆದೇಶ ಹೊರಡಿಸಿದೆ. ಈಗ ಕಾಂಗ್ರೆಸ್‌ನ ವರಿಷ್ಠರ ತೀರ್ಮಾನದ ಪರಿಣಾಮವಾಗಿ ಆ ಆದೇಶ ಹಿಂಪಡೆದರೂ ಆಶ್ಚರ್ಯವಿಲ್ಲ ಎಂದು ಹೇಳಿದರು.

**‘ಕುತಂತ್ರ ರಾಜಕಾರಣ ಪ್ರದರ್ಶನ’:** ಇದೇ ವಿಷಯ ಕುರಿತು ಸುದ್ದಿಗಾರರ ಜತೆ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಇಡೀ ದೇಶವೇ ಶ್ರೀರಾಮ ಮಂದಿರದಲ್ಲಿ ರಾಮನ ವಿಗ್ರಹ ಪ್ರತಿಷ್ಠಾಪನೆಗೆ ಕಾಯುತ್ತಿದೆ. ಕಾಂಗ್ರೆಸ್ ಪಕ್ಷವು ಮುಸ್ಲಿಮರ ಓಲೈಕೆಗಾಗಿ ಕುತಂತ್ರ ರಾಜಕಾರಣ ಪ್ರದರ್ಶಿಸುತ್ತಿದೆ’ ಎಂದು ವಾಗ್ದಾಳಿ ನಡೆಸಿದರು.

ಅಯೋಧ್ಯೆ ರಾಮ ಜನ್ಮಭೂಮಿ ಪ್ರಕರಣವು ನ್ಯಾಯಾಲಯದಲ್ಲಿದ್ದಾಗ ಕಾಂಗ್ರೆಸ್ ವಿರುದ್ಧವಾದ ನಿಲುವು ತಳೆದಿತ್ತು. ಈಗ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಸಮಾರಂಭಕ್ಕೆ ಗೈರಾಗುವ ನಿರ್ಧಾರದ ಮೂಲಕ ಹಿಂದೂಗಳನ್ನು ಕಡೆಗಣಿಸಿದ್ದಾರೆ ಎಂದರು.

> **ಕಾಂಗ್ರೆಸ್ ನಾಯಕರು ಈ ರೀತಿಯ ನಿರ್ಧಾರದ ಮೂಲಕ ಹಿಂದೂಗಳ ಭಾವನೆಗೆ ಧಕ್ಕೆ ತಂದಿದ್ದಾರೆ. ಈ ಕ್ಷಣದಿಂದ ಅವರು ರಾಮ ಮಂದಿರದ ಕುರಿತು ಮಾತನಾಡುವುದನ್ನು ನಿಲ್ಲಿಸಬೇಕು.**
> **ವಿ. ಸುನಿಲ್ ಕುಮಾರ್,** ಬಿಜೆಪಿ ಶಾಸಕ

## ಜನಪ್ರತಿನಿಧಿ ಕೋರ್ಟ್: ಮಾಹಿತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಹಾಲಿ ಮತ್ತು ಮಾಜಿ ಶಾಸಕರು-ಸಂಸದರ ವಿರುದ್ಧ ಬಾಕಿಯಿರುವ ಹಾಗೂ ಸರ್ಕಾರ ವಾಪಸು ಪಡೆದಿರುವ ಕ್ರಿಮಿನಲ್ ಪ್ರಕರಣಗಳ ಕುರಿತಾದ ಸಮಗ್ರ ಮಾಹಿತಿಯನ್ನು ಮೂರು ವಾರಗಳಲ್ಲಿ ಒದಗಿಸಿ’ ಎಂದು ಹೈಕೋರ್ಟ್ ತನ್ನ ರಿಜಿಸ್ಟ್ರಿಗೆ ಸೂಚಿಸಿದೆ.

ಈ ಕುರಿತು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

# ಸ್ಪರ್ಧಾ ವಾಣಿ



# ಅಫೀಮು ಉತ್ಪಾದನೆ

## ಅಫ್ಘಾನಿಸ್ತಾನವನ್ನು ಹಿಂದಿಕ್ಕಿದ ಮ್ಯಾನ್ಮಾರ್

ಯು.ಟಿ.ಆಯಿಶ ಫರ್ಝಾನ

ಮಾದಕ ವಸ್ತುಗಳ ಉತ್ಪಾದನೆ ಹಾಗೂ ಮಾರಾಟವನ್ನು ತಡೆಗಟ್ಟುವುದು ನಾಗರಿಕ ಪ್ರಪಂಚದ ಬಹುದೊಡ್ಡ ಸವಾಲುಗಳಲ್ಲಿ ಒಂದಾಗಿದೆ. ಕಾನೂನಿನ ಅಂಕೆಯಿಂದಲೂ ನುಸುಳಿ ಹೋಗುವ ಈ 'ಅಮಲಿನ ಜಗತ್ತು' ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚಿದೆ. ಮಾದಕವಸ್ತುಗಳ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಅಫೀಮಿನ ಉತ್ಪಾದನೆ ಹಾಗೂ ಜಾಗತಿಕ ಮಟ್ಟದಲ್ಲಿ ಅದರ ಹಂಚಿಕೆ ಕುರಿತ ಕುತೂಹಲಕಾರಿ ಅಂಶಗಳು ಹೀಗಿವೆ.

2023ರಲ್ಲಿ ಮ್ಯಾನ್ಮಾರ್ ವಿಶ್ವದ ಪ್ರಮುಖ ಅಫೀಮು ಉತ್ಪಾದಕ ದೇಶ ಎನಿಸಿಕೊಂಡಿದೆ. ಈವರೆಗೆ ಅಫ್ಘಾನಿಸ್ತಾನವೇ ದೊಡ್ಡ ಪ್ರಮಾಣದಲ್ಲಿ ಅಫೀಮು ಉತ್ಪಾದನೆ ಮಾಡುತ್ತಿತ್ತು. ಆದರೆ ಮೊದಲ ಬಾರಿಗೆ ಮ್ಯಾನ್ಮಾರ್ ಅಫ್ಘಾನಿಸ್ತಾನವನ್ನು ಹಿಂದಿಕ್ಕಿದೆ.

ಯುನೈಟೆಡ್ ನೇಷನ್ಸ್ ಆಫೀಸ್ ಆನ್ ಡ್ರಗ್ಸ್ ಅಂಡ್ ಕ್ರೈಮ್ (UNODC) ಕಚೇರಿಯ ವರದಿಯನ್ವಯ, ತಾಲಿಬಾನ್ ಅಫ್ಘಾನಿಸ್ತಾನವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಬಳಿಕ 2022ರಲ್ಲಿ ಇಸ್ಲಾಮಿಕ್ ತತ್ವಗಳಿಗೆ ಅನುಗುಣವಾಗಿ ಮಾದಕವಸ್ತು ಉತ್ಪಾದನೆಗೆ ನಿಷೇಧ ಹೇರಿತ್ತು. ಅದರ ಪರಿಣಾಮ ಈ ಭಾಗದಲ್ಲಿ ಶೇ 95ರಷ್ಟು ಅಫೀಮು ಉತ್ಪಾದನೆ ಕುಸಿತಗೊಂಡಿದೆ.

2021ರಲ್ಲಿ ಮ್ಯಾನ್ಮಾರ್‌ನಲ್ಲಿ ಉಂಟಾದ ದಂಗೆಯಿಂದ ಆಂತರಿಕ ಕ್ಷೋಭೆ ಹೆಚ್ಚಾಯಿತು. ಜನರು ಜೀವನೋಪಾಯಕ್ಕಾಗಿ ಅಫೀಮಿಗೆ ಬಳಸಲಾಗುವ ಗಸಗಸೆಯ ಕೃಷಿಯತ್ತ ಮುಖ ಮಾಡಿದ್ದರು. ಇದರಿಂದ ರೈತರ ಆದಾಯದಲ್ಲಿ ಗಣನೀಯ ಏರಿಕೆ ಕಂಡಿತ್ತು. ಶೇ 75ಕ್ಕೂ ಹೆಚ್ಚಿನ ಲಾಭ ತಂದುಕೊಟ್ಟಿತ್ತು.

ಪ್ರತಿ ಕಿಲೋಗ್ರಾಂ ಅಫೀಮಿಗೆ ಬಳಸಲಾಗುವ ಗಸಗಸೆಗಳ ಸರಾಸರಿ ಬೆಲೆ 355 ಡಾಲರ್‌ಗಳಷ್ಟು ಏರಿಕೆಯಾಗಿದ್ದು, ಕೃಷಿ ಪ್ರದೇಶವು ಶೇ18ರಷ್ಟು ವಿಸ್ತರಣೆಗೊಂಡಿದೆ. ಅಂದರೆ 47,000 ಹೆಕ್ಟೇರ್ ಪ್ರದೇಶದಲ್ಲಿ ಇದನ್ನು ಬೆಳೆಯಲಾಗುತ್ತಿದೆ. 2001ರಿಂದ ಈವರೆಗೆ ಬೆಳೆಯುವ ಪ್ರಮಾಣ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ.

UNODC ಪ್ರಾದೇಶಿಕ ಪ್ರತಿನಿಧಿ ಜೆರೆಮಿ ಡಗ್ಲಾಸ್ ಅವರ ಪ್ರಕಾರ, ಮಿಲಿಟರಿ ಸ್ವಾಧೀನದ ಪರಿಣಾಮವಾಗಿ ಮ್ಯಾನ್ಮಾರ್‌ನ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ರೈತರು ಅಫೀಮು ಕೃಷಿಯತ್ತ ಹೆಚ್ಚು ವಾಲಿದ್ದಾರೆ. ಮ್ಯಾನ್ಮಾರ್‌ನ ಗಡಿ ಪ್ರದೇಶಗಳಲ್ಲಿ, ವಿಶೇಷವಾಗಿ ಉತ್ತರ ರಾಜ್ಯಗಳಾದ ಶಾನ್ , ಚಿನ್ ಮತ್ತು ಕಚಿನ್ ರಾಜ್ಯಗಳಲ್ಲಿ ಕಾಣಬಹುದು. ಅತ್ಯಾಧುನಿಕ ಕೃಷಿ ಪದ್ಧತಿಗಳನ್ನು ಅನುಸರಿಸಿ ಈ ಪ್ರಾಂತ್ಯದ ಕೃಷಿಕರು ಗಸಗಸೆ ಇಳುವರಿಯಲ್ಲಿ ಶೇ16ರಷ್ಟು ಹೆಚ್ಚಳ ಕಂಡಿದ್ದಾರೆ.

ಮ್ಯಾನ್ಮಾರ್ ಮಿಲಿಟರಿ ಮತ್ತು ಸಶಸ್ತ್ರ ಜನಾಂಗೀಯ-ಅಲ್ಪಸಂಖ್ಯಾತ ಗುಂಪುಗಳ ನಡುವೆ ನಡೆಯುತ್ತಿರುವ ಸಂಘರ್ಷದ ಕಾರಣದಿಂದಾಗಿ ಅಫೀಮಿನ ಕೃಷಿ ಹೆಚ್ಚಳಗೊಳ್ಳುವ ಸಾಧ್ಯತೆಯಿದ್ದು, ಇದು ಅಂತರರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಪ್ರಯತ್ನಗಳಿಗೆ ಗಂಭೀರ ಸವಾಲುಗಳನ್ನು ಒಡ್ಡುತ್ತದೆ ಎಂದು ಡಗ್ಲಾಸ್ ಎಚ್ಚರಿಸಿದ್ದಾರೆ.

**ಅಫೀಮು :** ಅಫೀಮು ಎಂಬುವುದು ಗಸಗಸೆ ಸಸ್ಯದಿಂದ ಪಡೆಯಲಾಗುವ ಒಂದು ಪ್ರಬಲ ಮಾದಕವಸ್ತು. ಇದನ್ನು ವೈಜ್ಞಾನಿಕವಾಗಿ ಪಾಪವರ್ ಸೋಮ್ನಿಫೆರಮ್ ಎಂದು ಕರೆಯಲಾಗುತ್ತದೆ.

ಗಸಗಸೆ ಕಾಳುಗಳನ್ನು ಅದರ ಲ್ಯಾಟೆಕ್ಸ್‌ಗಾಗಿ(ರಬ್ಬರ್‌ನಿಂದ ಬರುವ ಹಾಲಿನ ರೀತಿ) ಬೆಳೆಸಲಾಗುತ್ತದೆ. ಇದು ಮಾರ್ಫಿನ್ ಮತ್ತು ಕೊಡೈನ್ ಸೇರಿದಂತೆ ಹಲವಾರು ಆಲ್ಕಲಾಯ್ಡ್‌ಗಳನ್ನು ಹೊಂದಿರುತ್ತದೆ. ಈ ಆಲ್ಕಲಾಯ್ಡ್‌ಗಳು ನೋವುನಿವಾರಕ ಮತ್ತು ನಿದ್ರಾಜನಕ ಗುಣಲಕ್ಷಣಗಳನ್ನು ಹೊಂದಿವೆ. ವಿವಿಧ ಒಪಿಯಾಡ್ ಔಷಧಿಗಳ (ಒಪಿಯಾಡ್‌ಗಳು ಎಂದರೆ ಅಫೀಮು ಗಸಗಸೆ ಸಸ್ಯದಲ್ಲಿ ಕಂಡುಬರುವ ನೈಸರ್ಗಿಕ ಪದಾರ್ಥಗಳಿಂದ ಪಡೆಯುವ ಔಷಧಿಗಳ ಒಂದು ವರ್ಗ) ಉತ್ಪಾದನೆಯಲ್ಲಿ ಅಫೀಮು ಅತ್ಯವಶ್ಯಕ ವಸ್ತುವಾಗಿದೆ.

ಆದರೆ ಅಫೀಮು ಕುಖ್ಯಾತವಾಗಿರುವುದು ಅದರ ದುರುಪಯೋಗಕ್ಕಾಗಿ ಮತ್ತು ವ್ಯಸನಕಾರಿ ಅಂಶಗಳು ಮತ್ತು ಅದಕ್ಕೆ ಸಂಬಂಧಿಸಿದ ಸಾಮಾಜಿಕ ಮತ್ತು ಆರೋಗ್ಯ ಸಮಸ್ಯೆಗಳಿಂದಾಗಿ. ಹೆರಾಯಿನ್‌ನಂಥ ಕಾನೂನುಬಾಹಿರವಾಗಿ ಉತ್ಪಾದಿಸಲಾಗುವ ಒಪಿಯಾಡ್‌ಗಳನ್ನು ಕೂಡಾ ಅಫೀಮಿನಿಂದಲೇ ಪಡೆಯಲಾಗುತ್ತದೆ.

### ಗೋಲ್ಡನ್ ಟ್ರಯಾಂಗಲ್

ಗೋಲ್ಡನ್ ಟ್ರಯಾಂಗಲ್ ಆಗ್ನೇಯ ಏಷ್ಯಾದ ಒಂದು ಪ್ರದೇಶವಾಗಿದ್ದು, ಅಕ್ರಮ ಮಾದಕವಸ್ತು ಉತ್ಪಾದನೆಯ(ವಿಶೇಷವಾಗಿ ಅಫೀಮು) ಪ್ರಮುಖ ಕೇಂದ್ರವಾಗಿದೆ. ಈ ಪ್ರದೇಶವು ಮ್ಯಾನ್ಮಾರ್ (ಬರ್ಮಾ), ಲಾವೋಸ್ ಮತ್ತು ಥಾಯ್ಲೆಂಡ್‌ಗೂ ಸೇರಿದೆ. ಚಾರಿತ್ರಿಕವಾಗಿಯೂ ಈ ದೇಶಗಳು ಅಫೀಮು ಗಸಗಸೆಗಳ ಪ್ರಮುಖ ಉತ್ಪಾದಕ ದೇಶಗಳಾಗಿದ್ದು, ಗೋಲ್ಡನ್ ಟ್ರಯಾಂಗಲ್ ಪ್ರಪಂಚದ ಹೆರಾಯಿನ್ ಪೂರೈಕೆಯ ಪ್ರಮುಖ ಮೂಲವಾಗಿದೆ.

'ಗೋಲ್ಡನ್ ಟ್ರಯಾಂಗಲ್' ಪದವು 20ನೇ ಶತಮಾನದ ಮಧ್ಯಭಾಗದಲ್ಲಿ ಹುಟ್ಟಿಕೊಂಡಿದ್ದು ಈ ಪ್ರದೇಶವು ಅಫೀಮು ಕೃಷಿ ಮತ್ತು ಹೆರಾಯಿನ್ ಉತ್ಪಾದನೆಯ ಪ್ರಮುಖ ಕೇಂದ್ರವಾಗಿತ್ತು. ಕಾನೂನು ಜಾರಿಯಿಂದಾಗಿ ಈ ಪ್ರದೇಶದಲ್ಲಿ ಇವುಗಳ ಉತ್ಪಾದನೆಯನ್ನು ಕಡಿಮೆ ಮಾಡುವ ಪ್ರಯತ್ನಗಳು ನಡೆದಿವೆ. ಆದರೂ ರಾಜಕೀಯ ಅಸ್ಥಿರತೆ, ಜನಾಂಗೀಯ ಸಂಘರ್ಷ ಮತ್ತು ಬಡತನದಿಂದಾಗಿ ಮಾದಕ ವಸ್ತುಗಳ ಉತ್ಪಾದನೆ ಹಾಗೂ ಸಾಗಣೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸಾಧ್ಯವಾಗಿಲ್ಲ.

### ಗೋಲ್ಡನ್ ಕ್ರೆಸೆಂಟ್

ಗೋಲ್ಡನ್ ಕ್ರೆಸೆಂಟ್ ಅಫೀಮು ಮತ್ತು ಹೆರಾಯಿನ್ ಅಕ್ರಮ ಉತ್ಪಾದನೆಗೆ ಸಂಬಂಧಿಸಿದ ಮತ್ತೊಂದು ಪ್ರದೇಶವಾಗಿದೆ. ಆಗ್ನೇಯ ಏಷ್ಯಾದಲ್ಲಿ ನೆಲೆಗೊಂಡಿರುವ ಗೋಲ್ಡನ್ ಟ್ರಯಾಂಗಲ್‌ಗೆ ವ್ಯತಿರಿಕ್ತವಾಗಿ ಗೋಲ್ಡನ್ ಕ್ರೆಸೆಂಟ್ ದಕ್ಷಿಣ ಏಷ್ಯಾದಲ್ಲಿದೆ. ಇದು ಅಫ್ಘಾನಿಸ್ತಾನ, ಇರಾನ್ ಮತ್ತು ಪಾಕಿಸ್ತಾನಕ್ಕೆ ಸಂಬಂಧಪಟ್ಟ ಪ್ರದೇಶವಾಗಿದೆ. ಅಫೀಮು ಗಸಗಸೆ ಕೃಷಿಯು ಹೆರಾಯಿನ್ ಉತ್ಪಾದನೆಗೆ ಪ್ರಮುಖ ಮೂಲವಾಗಿದೆ.

❖

### ಯುನೈಟೆಡ್ ನೇಷನ್ಸ್ ಆಫೀಸ್ ಆನ್ ಡ್ರಗ್ಸ್ ಅಂಡ್ ಕ್ರೈಮ್ (UNODC)

ಯುನೈಟೆಡ್ ನೇಷನ್ಸ್ ಆಫೀಸ್ ಆನ್ ಡ್ರಗ್ಸ್ ಅಂಡ್ ಕ್ರೈಮ್ (ಯುಎನ್‌ಒಡಿಸಿ) ವಿಶ್ವಸಂಸ್ಥೆಯಡಿ ಬರುವ ವಿಶೇಷ ಸಂಸ್ಥೆಯಾಗಿದೆ. ಇದು ಮಾದಕವಸ್ತು, ಅಪರಾಧ, ಭ್ರಷ್ಟಾಚಾರ, ಭಯೋತ್ಪಾದನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

1997ರಲ್ಲಿ ಯುನೈಟೆಡ್ ನೇಷನ್ಸ್ ಡ್ರಗ್ ಕಂಟ್ರೋಲ್ ಪ್ರೋಗ್ರಾಂ (UNDCP) ಮತ್ತು ಯುನೈಟೆಡ್ ನೇಷನ್ಸ್ ಸೆಂಟರ್ ಫಾರ್ ಇಂಟರ್‌ನ್ಯಾಷನಲ್ ಕ್ರೈಮ್ ಪ್ರಿವೆನ್ಶನ್ ವಿಲೀನದ ಮೂಲಕ ಸ್ಥಾಪಿತಗೊಂಡಿತು.

ಇದರ ಪ್ರಧಾನ ಕಚೇರಿ ವಿಯೆನ್ನಾದಲ್ಲಿದೆ. 20 ಪ್ರಾದೇಶಿಕ ಕಚೇರಿಗಳನ್ನು ಒಳಗೊಂಡಿದೆ. ನ್ಯೂಯಾರ್ಕ್ ಮತ್ತು ಬ್ರಸೆಲ್ಸ್‌ನಲ್ಲಿ ಇದರ ಸಂಪರ್ಕ ಕಚೇರಿಗಳು ಇವೆ.



# ಜೈವಿಕ ಇಂಧನ

ಹನುಮಾನಾಯಕ್ ರಾಥೋಡ್

ಜೈವಿಕ ಮೂಲಗಳಿಂದ ಅಂದರೆ ಸಸ್ಯಜನ್ಯ ಅಥವಾ ಪ್ರಾಣಿಜನ್ಯ ಮೂಲಗಳಿಂದ ಉತ್ಪಾದನೆಯಾಗುವ ಇಂಧನವೇ ಜೈವಿಕ ಇಂಧನ. ವಿವಿಧ ಎಣ್ಣೆ ಬೀಜಗಳು, ಪ್ರಾಣಿಜನ್ಯ ಕೊಬ್ಬು, ಕಬ್ಬು, ಸಿಹಿಜೋಳ, ಗೋವಿನಜೋಳ ಮುಂತಾದ ಸಕ್ಕರೆ ಅಂಶವುಳ್ಳ ಉತ್ಪನ್ನಗಳಿಂದ ತಯಾರಿಸಲಾಗುತ್ತದೆ.

ಸಮುದ್ರದ ಹಿನ್ನೀರಿನಲ್ಲಿ, ಅನುಪಯುಕ್ತ ಹಾಗೂ ಮಲೀನ ನೀರಿನ ಮೇಲೆ ಸುಲಭವಾಗಿ ಬೆಳೆಯಬಲ್ಲ ಆಲ್ಗಿ ಬೆಳೆಗಳಿಂದಲೂ ಜೈವಿಕ ಇಂಧನವನ್ನು ತಯಾರಿಸಿ, ವಾಹನ ಚಲಾಯಿಸಲು ಹಾಗೂ ಇತರೆ ಕಾರ್ಯಗಳಿಗೆ ಬಳಸುವ ಬಗ್ಗೆಯೂ ಪ್ರಯೋಗ ನಡೆದಿದೆ.

### ಜೈವಿಕ ಡೀಸೆಲ್ ಮತ್ತು ಜೈವಿಕ ಎಥೆನಾಲ್

ಜೈವಿಕ ಡೀಸೆಲ್ ಅನ್ನು ಸಸ್ಯಜನ್ಯ ಎಣ್ಣೆ ಅಥವಾ ಪ್ರಾಣಿಜನ್ಯ ಕೊಬ್ಬಿನಿಂದ ಉತ್ಪಾದಿಸಲಾಗುತ್ತದೆ. ಎಣ್ಣೆ ಅಥವಾ ಕೊಬ್ಬನ್ನು ಮೀಥೆನಾಲ್ ಅಥವಾ ಎಥೆನಾಲ್ ಜೊತೆ ಸೇರಿಸಿ NaOH/ KOH ಎಂಬ ಪ್ರತ್ಯಾಮ್ಲ ಪ್ರಚೋದಕದೊಂದಿಗೆ ಟ್ರಾನ್ಸ್ ಎಸ್ಟರಿಫಿಕೇಷನ್ ಎಂಬ ರಾಸಾಯನಿಕ ಕ್ರಿಯೆಯ ಮೂಲಕ ಜೈವಿಕ ಡೀಸೆಲ್ ತಯಾರಿಸಲಾಗುತ್ತದೆ. ಇದನ್ನು ನೇರವಾಗಿ ಅಥವಾ ಡೀಸೆಲ್ ಜೊತೆ ವಿವಿಧ ಪ್ರಮಾಣದಲ್ಲಿ ಮಿಶ್ರಣಮಾಡಿ ಉಪಯೋಗಿಸಬಹುದು.

ಕೃಷಿ ತ್ಯಾಜ್ಯಗಳಾದ ಕಬ್ಬಿನ ಸಿಪ್ಪೆ, ಹುಲ್ಲು ಮೊದಲಾದವುಗಳಲ್ಲಿರುವ ಸೆಲ್ಯುಲೋಸ್ ಎಂಬ ಸಂಯುಕ್ತ ಶರ್ಕರಾಂಶದಿಂದಲೂ ಎಥೆನಾಲ್ ಅನ್ನು ಉತ್ಪಾದಿಸಬಹುದಾಗಿದೆ. ಜತೆಗೆ, ಅನುಪಯುಕ್ತ ಹಣ್ಣುಗಳನ್ನು ಕೂಡ ಉಪಯೋಗಿಸಿ ಎಥೆನಾಲ್ ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲಾಗಿದೆ. ಮೊದಲಿಗೆ ಸಂಯುಕ್ತಗಳನ್ನು ಸರಳ ಸಕ್ಕರೆಯನ್ನಾಗಿ ಪರಿವರ್ತಿಸಲಾಗುತ್ತದೆ. ನಂತರ ಇದನ್ನು ಸೂಕ್ಷ್ಮಜೀವಿಗಳನ್ನು ಬಳಸಿ ಹುದುಗಿಸಲಾಗುತ್ತದೆ. ಹೀಗೆ ಬರುವ ಎಥೆನಾಲ್ ಅನ್ನು ಬಟ್ಟಿ ಇಳಿಸುವಿಕೆಯ ಮುಖಾಂತರ ಜೈವಿಕ ಎಥೆನಾಲ್ ಅನ್ನು ಪಡೆಯಬಹುದು.

### ಜೈವಿಕ ಇಂಧನದ ಅನುಕೂಲಗಳು

ಹಲವರಿಗೆ ಉದ್ಯೋಗಾವಕಾಶಗಳು ಸಿಗಲಿದೆ. ಬೀಜ ಸಂಗ್ರಹಣೆ ಹಾಗೂ ಮಾರಾಟದಿಂದ ರೈತರು, ಕೃಷಿ ಕಾರ್ಮಿಕರು ಲಾಭ ಪಡೆಯಬಹುದು.

ಜೈವಿಕ ಇಂಧನ ಪೆಟ್ರೋಲಿಯಂ ಇಂಧನಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಬನ್ ಆಕ್ಸೈಡ್‌ಗಳನ್ನು ವಾತಾವರಣಕ್ಕೆ ಬಿಡುತ್ತದೆ ಎಂದು ಸಂಶೋಧನೆಗಳು ಹೇಳಿವೆ. ಜೈವಿಕ ಇಂಧನವು ಪರಿಸರಸ್ನೇಹಿ ಹಾಗೂ ನವೀಕರಿಸಬಹುದಾದ ಇಂಧನವಾಗಿದೆ.

ಜೈವಿಕ ಇಂಧನದಲ್ಲಿ ಗಂಧಕದ ಪ್ರಮಾಣ ಅತ್ಯಂತ ಕಡಿಮೆಯಾಗಿದೆ. ನಿರ್ವಹಣೆ, ಸಂಗ್ರಹಣೆ ಮತ್ತು ಸಾಗಣೆಯು ಸುರಕ್ಷಿತವಾಗಿರುತ್ತದೆ.

ಇದರ ಬಳಕೆಯಿಂದ ಇಂಜಿನ್‌ನ ಕಾರ್ಯಕ್ಷಮತೆ ಹೆಚ್ಚಿಸಿ, ಇಂಜಿನ್‌ನ ಬಾಳಿಕೆಯನ್ನು ಹೆಚ್ಚಿಸುತ್ತದೆ.

ಜೈವಿಕ ಇಂಧನಕ್ಕಾಗಿ ಮರಗಳನ್ನು ಬೆಳೆಯುವುದರಿಂದ ಮಣ್ಣಿನ ಸವಕಳಿಯನ್ನು ತಡೆಯಬಹುದು ಮತ್ತು ಮಣ್ಣಿನ ತೇವಾಂಶ ಕಾಪಾಡುತ್ತದೆ.

### ಜೈವಿಕ ಇಂಧನ ಕಾರ್ಯಪಡೆ

ಜೈವಿಕ ಇಂಧನ ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತವಾಗಿರುವ ಕೆಲವೇ ರಾಜ್ಯಗಳ ಪೈಕಿ ಕರ್ನಾಟಕ ಮುಂಚೂಣಿಯಲ್ಲಿದೆ. ಜೈವಿಕ ಇಂಧನವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ 2008ರಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಕಾರ್ಯಪಡೆಯನ್ನು ಸರ್ಕಾರ ರಚಿಸಿದೆ. ಈ ಕಾರ್ಯಪಡೆಯು ಜೈವಿಕ ಇಂಧನ ನೀತಿ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಕ್ರಮ ರೂಪಿಸುತ್ತದೆ.

### ಧ್ಯೇಯೋದ್ದೇಶಗಳು

ಜೈವಿಕ ಇಂಧನ ಅಭಿವೃದ್ಧಿ ಕಾರ್ಯಕ್ರಮ ರೂಪಿಸುವುದು. ಸರ್ಕಾರಕ್ಕೆ ಮಾರ್ಗದರ್ಶನ ಅಥವಾ ಶಿಫಾರಸು ನೀಡುವುದು.

ಜೈವಿಕ ಇಂಧನ ಸಸ್ಯಗಳನ್ನು ಬೆಳೆಸಲು ಯೋಗ್ಯವಾದ ಕೃಷಿಯೇತರ ಭೂಮಿಯನ್ನು ಗುರುತಿಸುವುದು. ವಿವಿಧ ಪ್ರದೇಶಗಳಿಗೆ ಯೋಗ್ಯವಾದ ಜೈವಿಕ ಇಂಧನ ಸಸ್ಯಗಳನ್ನು ಗುರುತಿಸುವುದು.

ಎಥೆನಾಲ್ ಉತ್ಪಾದನೆಗಾಗಿ ಪ್ರೋತ್ಸಾಹ ನೀಡುವುದು. ಸಕ್ಕರೆ ಕಾರ್ಖಾನೆಗಳಲ್ಲಿ ಎಥೆನಾಲ್ ಉತ್ಪಾದನೆಗಾಗಿ ಉತ್ತೇಜನ ನೀಡುವುದು.

ಜೈವಿಕ ಎಥೆನಾಲ್ ಉತ್ಪಾದನೆಗಾಗಿ ಕಬ್ಬು, ಬೀಟ್‌ರೂಟ್, ಗೋವಿನ ಜೋಳ ಬೇಸಾಯವನ್ನು ಪ್ರೋತ್ಸಾಹಿಸುವುದು.

### ರಾಜ್ಯ ಜೈವಿಕ ಇಂಧನ ನೀತಿ

ಜೈವಿಕ ಇಂಧನ ಕಾರ್ಯಪಡೆ ರಾಜ್ಯದ ಜೈವಿಕ ಇಂಧನ ನೀತಿ ರೂಪಿಸಿ, 2009ರಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ ಜಾರಿಗೊಳಿಸಿದೆ.

ರಾಜ್ಯದ 25,000 ಹೆಕ್ಟೇರ್ ಸರ್ಕಾರಿ ಭೂಮಿಯಲ್ಲೂ ಹಾಗೂ ರೈತರ ಹೊಲದ ಬದುಗಳಲ್ಲಿ ಒಟ್ಟು 3 ಕೋಟಿ ಸಸಿಗಳನ್ನು ಹಾಗೂ 20 ಲಕ್ಷ ಕಸಿ ಮಾಡಿದ ಉತ್ತಮ ತಳಿಯ ಮತ್ತು 3 ವರ್ಷಕ್ಕೇ ಅಧಿಕ ಇಳುವರಿ ನೀಡುವ ಹೊಂಗೆ ಮತ್ತು ಇತರ ಜೈವಿಕ ಇಂಧನ ಸಸಿಗಳನ್ನು ನೆಡಲು ಕ್ರಮ ಕೈಗೊಳ್ಳಲಾಗುತ್ತಿದೆ.

❖

# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

## ಇಂಗ್ಲಿಷ್

### ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

**I. Four alternatives are given for each of the following questions/incomplete statements. Only one of them is correct or most appropriate. Choose the correct alternative and write the complete answer along with its letter of alphabet.**

**1) Choose the appropriate question tag and fill in the blank. Manasa sings well, ……..?**

a. does she b. didn't she
c. doesn't she d. don't she

Ans:-(a) does she

**2) Read the given convers choose the language function underlined sentence:**

**Sanjay** : Good morning madam, ***Can I go home an hour early today***?
**Teacher**: Why? What happned?
**Sanjay:** My Sister is not well. I've to take her to the hospital.
**Teacher**: Okay, you can go

a) Asking,
b) Asking permission.
c) Making suggestion.
d) Offering help.

**Ans**: (b) Asking permission.

**3) Read the conversation and fill in the blank with correct 'If clause' choosing from the given alternatives :**

**Vandana :** You are still here ! did you miss the bus?
**Aishwarya**: Yes. by the time I reached the bus stop it was already 7:40 !
**Vandana:** Oh! if you had started early, you ............. missed the bus.

a) would have b) wouldn't have
c) should have d) shouldn't have

Ans:-( b) wouldn't have

**4) Read the conversation and choose the correct infinitive :**

**Meghana** : Hi Arati, will you come with me to the market? I want to buy vegetables.
**Arati** : Sure. Shall we go by bus?
**Meghana** : No. Let's take an auto.

a) take b) come
c) to buy d) go

**Ans:**- (c) to buy

**II. Do as directed:**

**5. Fill in the blank with appropriate tense forms of the verbs given in brackets:**

Prajwal ……………(be+study) in a government high school.

**Ans:**- is studying

**6. Fill in the blank with appropriate 'preposition':**

Raghav is a teacher. He works hard …………the welfare of his students.

**Ans**:- for

**7. Fill in the blank using suitable linker:**

…………..he was ill, Kiran completed his work.

**Ans**:- Though

**8. Fill in the blanks choosing the appropriate words given in the brackets:**

The ………….. (whether, weather) looked so unpredictable that we did not know ………(weather, whether) to carry the umbrella or not.

**Ans:**- The **weather** (whether, weather) looked so unpredictable that we did not know **whether** (weather, whether) to carry the umbrella or not.

**9. Combine the word in column 'A' with its collective word in column 'B'** :

| A | B |
|---|---|
| …………..Street | (road, Park, light, avenue) |

**Ans:**- Park

**10. Give one word answer**:

A great performer, especially a musician …………

**Ans:**- Maestro.

**11. Which one of the following words has two syllables?**

Continent, age, people, direction.

**Ans:**- people

**12. Write the correct form of the word given in the brackets**:

There is no ……….(compare) between them.

**Ans:**- comparison

**13. Frame a question to get the underlined word as answer**:

Raghu went to Mysore yesterday.

**Ans:**- When did Raghu go to Mysore?

**14. Read the following conversation and change the underlined sentence into passive voice**:

**Sharath** Hello Madhu, what did you buy yesterday?
**Madhu** : I bought a new dress.

**Ans:**- A new dress was bought by Madhu. [me]

**15. Change the following sentence into comparative degree:**

Ravish is the most intelligent boy in the class.

**Ans:**- Ravish is **more intelligent** than any other boys in the class.

**16. Use the word 'conduct' as verb in a sentence of your own.**

**Ans:**- Sureshaji conducted the singing programme in his home.

*(Contd……..)*

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

## II PUC MATHS

### REVISION : MODEL QUESTIONS

13. Evaluate $\sin\left\{\frac{\pi}{3}-\sin^{-1}\left(\frac{-1}{2}\right)\right\}$

$$\text{Ans}:-\ \sin\left\{\frac{\pi}{3}+\sin^{-1}\left(\frac{1}{2}\right)\right\}=\sin\left\{\frac{\pi}{3}+\frac{\pi}{6}\right\}=\sin\frac{\pi}{2}=1$$

**14. Find the area of the triangle whose vertices are (3,8) (-4, 2) (5, 1) using determinants.**

$$\text{Ans}:-\ \text{Area}=\frac{1}{2}\begin{vmatrix}3 & 8 & 1\\ -4 & 2 & 1\\ 5 & 1 & 1\end{vmatrix}=\frac{61}{2}\text{ sq units}$$

**15. Check the continuity of the function f(x) = 2x + 3 at x = 1**

**Ans:-** $\lim_{x\to1} f(x) = 2(1) + 3 = 5;\ f(1) = 5$

$\therefore \lim_{x\to1} f(x) = f(1) = 5$

Hence f(x) is continuous at x = 1

**16.Find the derivative of $(3x^2-7x+3)^{5/2}$ w.r.t. x.**

$$\text{Ans}:-\ \frac{dy}{dx}=\frac{5}{2}(3x^2-7x+3)^{\frac{5}{2}-1}\ \frac{d}{dx}(3x^2-7x+3)$$

$$\frac{dy}{dx}=\frac{5}{2}(3x^2-7x+3)^{\frac{3}{2}}\ (6x-7)$$

**17. If the radius of a sphere is measured as 9 cm with an error, 0.03 cm then find the approximate error in calculating its volume.**

**Ans:-** Let r be the radius of sphere and $\Delta r$ be the error in measuring the radius

$$V=\frac{4}{3}\pi r^3 \Rightarrow \frac{dV}{dr}=4\pi r^2$$

$$\text{and } dV=\left(\frac{dV}{dr}\right)\Delta r$$

$$\Rightarrow dV = 4\pi\ (9)^2\ (0.03) = 9.72\ \pi\ cm^3$$

18. Evaluate $\int\frac{dx}{\sin^2 x\cos^2 x}$

$$\text{Ans}:-\ \int\frac{1}{\sin^2 x\cos^2 x}dx=\int\frac{\sin^2+\cos^2 x}{\sin^2 x\cos^2 x}dx$$

$$\Rightarrow\int\frac{\sin^2 x}{\sin^2 x\cos^2 x}dx+\int\frac{\cos^2 x}{\sin^2 x\cos^2 x}dx\ (\sin^2 x\ \cos^2=1)$$

$$\Rightarrow\int\frac{1}{\cos^2 x}dx+\int\frac{1}{\sin^2 x}dx$$

$$\Rightarrow\int\sec^2 x\,dx+\int\text{cosec}^2 x\,dx$$

$$\Rightarrow \tan x+\cot x+c$$

**19. Evaluate $\int\log x\,dx$**

Ans:- Integration by parts f(x) = logx, g(x) = 1

$\int f(x)\ g(x)\ dx = f(x)\int g(x) - \int\{f'(x)\int g(x)\ dx\}\ dx$

$$=\log x.x-\int\left\{\frac{1}{x}x\right\}dx$$

$$=\log x.\ x-\int dx=\log x.\ x-x+c$$

$$=x(\log x-1)+c$$

**20. Find the order and degree of the differential equation**

**Ans:-** order : 2; degree : 1.

**21. If the position vectors of the points A and B are $\hat{i}+2\hat{j}-3\hat{k}$ and $\hat{j}-\hat{k}$ find the direction cosines of $\overrightarrow{AB}$**

**Soln:-** $\overrightarrow{OA}=\hat{i}+2\hat{j}-3\hat{k}$ and $\overrightarrow{OB}=\hat{j}-\hat{k}$

$\overrightarrow{AB}=\overrightarrow{OB}-\overrightarrow{OA}=-\hat{i}-\hat{j}+2\hat{k}\ |\overrightarrow{AB}|=\sqrt{6}$

$\therefore$ dc' are $\frac{-1}{\sqrt{6}},\frac{-1}{\sqrt{6}},\frac{2}{\sqrt{6}}$

**22. Find the vector of magnitude 8 units in the direction of the vector $\vec{a}=5\hat{i}-\hat{j}+2\hat{k}$**

$\text{Ans}:-\ |\vec{a}|=\sqrt{30}$

$$\text{vector of magnitude 8 units}=8\frac{\vec{a}}{|\vec{a}|}=8\left(\frac{5\hat{i}-\hat{j}+2\hat{k}}{\sqrt{30}}\right)$$

$$=\frac{40}{\sqrt{30}}\hat{i}-\frac{8}{\sqrt{30}}\hat{j}+\frac{16}{\sqrt{30}}\hat{k}$$

**23. Find the distance of the point (2, 3, -5) from the plane $\vec{r}.(\hat{i}+2\hat{j}-2\hat{k})=9$**

Ans :– Equation of plane is,

$$\left(\left(x\hat{i}+y\hat{j}+z\hat{k}\right).\left(\hat{i}+2\hat{j}-2\hat{k}\right)\right)-9=0$$

$$\Rightarrow x+2y-2z-9=0$$

$$d=\left|\frac{ax_1+by_1+cz_1+d}{\sqrt{a^2+b^2+c^2}}\right|$$

$$d=\left|\frac{1(2)+2(3)-2(-5)-9}{\sqrt{1^2+2^2+2^2}}\right|=\frac{9}{3}=3$$

**24. A die is thrown. If E is the event 'the number appearing is a multiple of 3' and F is the event 'the number appearing is even'. Find whether F and E are independent?**

**Ans:-** Sample space S={1, 2, 3, 4, 5, 6}, E = {3, 6},

$F=\{2,4,6\}$ and $E\cap F=\{6\}$

$$P(E)=\frac{2}{6}=\frac{1}{3},\ P(F)=\frac{3}{6}=\frac{1}{2}\text{ and }P(E\cap F)=\frac{1}{6}$$

$$P(E).P(F)=\frac{1}{3}\frac{1}{2}=\frac{1}{6}$$

$$P(E).\ P(F)=P(E\cap F)$$

$\therefore$ F and E are independent events.

**25. Verify whether the function $f:A\to B$ where A = R - {3} and B = R – {1} defined by $f(x)=\frac{x-2}{x-3}$ is one – one and on to or not. Give reason?**

**Ans:-** $\forall x_1, x_2\in R-\{3\}$

$f(x_1)=f(x_2)$

*(Contd……..)*

## ₹ 14 ಕೋಟಿಯಷ್ಟು ಜಿಎಸ್‌ಟಿ ವಂಚನೆ

**ಮೈಸೂರು:** ನಕಲಿ ಬಿಲ್ ಸೃಷ್ಟಿಸಿ ಎರಡು ತಿಂಗಳಲ್ಲಿ ₹ 60 ಕೋಟಿ ವಹಿವಾಟು ನಡೆಸಿದ್ದಲ್ಲದೇ ₹ 14 ಕೋಟಿ ಸರಕು ಮತ್ತು ಸೇವಾ ತೆರಿಗೆ ವಂಚಿಸಿದ್ದ ಆರೋಪಿಯನ್ನು ಇಲ್ಲಿನ ಸಿದ್ಧಾರ್ಥ ನಗರದ ಕೇಂದ್ರೀಯ ತೆರಿಗೆ ಜಿಎಸ್‌ಟಿ ಕಚೇರಿ ಅಧಿಕಾರಿಗಳು ಪತ್ತೆ ಹಚ್ಚಿ ಬಂಧಿಸಿದ್ದಾರೆ.

‘ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಗುಜರಿ ವಸ್ತುಗಳ ಮಾರಾಟ ನಡೆಸುತ್ತಿದ್ದ ‘ರಬ್ ಟ್ರೇಡರ್ಸ್’ ಮಾಲೀಕ ಇಮ್ರಾನ್ ಪಾಷಾ ಎಂಬುವರನ್ನು ಸೋಮವಾರ ತಡರಾತ್ರಿ ವಶಕ್ಕೆ ಪಡೆದು, 5ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಧೀಶರು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು’ ಎಂದು ಮೈಸೂರು ಜಿಎಸ್‌ಟಿ ಕಮಿಷನರೇಟ್‌ನ ಸೂಪರಿಂಟೆಂಡೆಂಟ್ ಜಿ.ಎನ್.ಶಶಿಧರ್ ‘ಪ್ರಜಾವಾಣಿ’ಗೆ ಬುಧವಾರ ತಿಳಿಸಿದರು.

‘ವಹಿವಾಟು ನಡೆಸದೆಯೇ ₹ 60 ಕೋಟಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿತ್ತು. ಕಾರ್ಯಾಚರಣೆಯಲ್ಲಿ ಮುಖ್ಯ ಆಯುಕ್ತ ಪಿವಿಎನ್ ಸುರೇಶ್ ಬಾಬು, ಹೆಚ್ಚುವರಿ ಆಯುಕ್ತ ಎಸ್.ಪಿ.ಪಾಂಡಾ, ಸಹಾಯಕ ಆಯುಕ್ತ ಕೆ.ಬಿ. ನಾಣಯ್ಯ ಪಾಲ್ಗೊಂಡಿದ್ದರು’ ಎಂದರು.

### ‘ಆಡಳಿತಾತ್ಮಕ ಕಾರಣ’ಕ್ಕೆ ಕಾನೂನು ಕೋಶದ ಮುಖ್ಯಸ್ಥ ಹುದ್ದೆ ನೇಮಕಾತಿ ಅಧಿಸೂಚನೆ ರದ್ದು

# ಕೆಪಿಎಸ್‌ಸಿ: ಕಾರ್ಯದರ್ಶಿ ಪ್ರತಿತಂತ್ರ

● ರಾಜೇಶ್ ರೈ ಚಟ್ಲ

**ಬೆಂಗಳೂರು:** ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ (ಎಚ್‌ಸಿಎಲ್) ಹುದ್ದೆಗೆ ಶಿಫಾರಸು ಮಾಡಿದ್ದ ಅಭ್ಯರ್ಥಿಯನ್ನು ನೇಮಿಸಿ ಆದೇಶ ಹೊರಡಿಸದಿದ್ದರೆ ಯಾವುದೇ ಆಯ್ಕೆ ಪಟ್ಟಿ ಅಥವಾ ಕಡತಕ್ಕೆ ಅನುಮೋದನೆ ನೀಡುವುದಿಲ್ಲವೆಂಬ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಒತ್ತಡಕ್ಕೆ ಸಡ್ಡು ಹೊಡೆದಿರುವ ಕಾರ್ಯದರ್ಶಿ, ಆ ನೇಮಕಾತಿ ಅಧಿಸೂಚನೆಯನ್ನೇ ರದ್ದುಪಡಿಸಿ ಹೊಸ ಅಧಿಸೂಚನೆ ಹೊರಡಿಸಿದ್ದಾರೆ.

‘ಎಚ್‌ಸಿಎಲ್ ನೇಮಕಾತಿ ವಿಷಯ ಇತ್ಯರ್ಥ ಆಗುವವರೆಗೆ ಯಾವುದೇ ಆಯ್ಕೆ ಪಟ್ಟಿ ಅಥವಾ ಕಡತವನ್ನು ಆಯೋಗಕ್ಕೆ ಸಲ್ಲಿಸಬಾರದು. ಆಯೋಗದ ಸೂಚನೆಯನ್ನು ಪದೇ ಪದೇ ನಿರ್ಲಕ್ಷಿಸುವುದು ಸರಿಯಾದ ಕ್ರಮವಲ್ಲ’ ಎಂದು ಸೂಚಿಸಿ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ ಅವರು ಕಾರ್ಯದರ್ಶಿ ಕೆ.ಎಸ್ ಲತಾಕುಮಾರಿ ಸಲ್ಲಿಸಿದ್ದ ಕಡತವನ್ನು ಇದೇ 8ರಂದು ಹಿಂದಿರುಗಿಸಿದ್ದರು. ಆ ಬೆನ್ನಲ್ಲೆ, ತಮಗಿರುವ ಅಧಿಕಾರ ಬಳಸಿ ಎಚ್‌ಸಿಎಲ್ ನೇಮಕಕ್ಕೆ ನ. 15ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಆಡಳಿತಾತ್ಮಕ ಕಾರಣ ನೀಡಿ ಕಾರ್ಯದರ್ಶಿ ಹಿಂಪಡೆದಿದ್ದಾರೆ.

> **ಕಾನೂನು ಕೋಶದ ಮುಖ್ಯಸ್ಥರ ಹುದ್ದೆಗೆ ಪಾರದರ್ಶಕವಾಗಿ ಮತ್ತು ನಿಯಮಾನುಸಾರವಾಗಿ ನೇಮಕಾತಿ ನಡೆಸಲು ಹೊಸತಾಗಿ ಅಧಿಸೂಚನೆ ಹೊರಡಿಸಲಾಗಿದೆ**
> **ಕೆ.ಎಸ್. ಲತಾಕುಮಾರಿ**, ಕಾರ್ಯದರ್ಶಿ, ಕೆಪಿಎಸ್‌ಸಿ

ಆಯೋಗದ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಒಳಗೊಂಡ ಆಯ್ಕೆ ಸಮಿತಿಯು, ಎಚ್‌ಸಿಎಲ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದ 10 ಮಂದಿಯನ್ನು ಸಂದರ್ಶನ ಮಾಡಿ ಒಬ್ಬರ ಹೆಸರನ್ನು ಶಿಫಾರಸು ಮಾಡಿತ್ತು. ಆದರೆ, ಸಂದರ್ಶನಕ್ಕೆ ಆಯ್ಕೆಯಾದ ಎಲ್ಲ ಅಭ್ಯರ್ಥಿಗಳ ಮೌಲ್ಯಮಾಪನ, ನೀಡಿದ ಅಂಕಗಳ ಮಾಹಿತಿಯನ್ನು ನೀಡಿರಲಿಲ್ಲ. ಈ ಕಾರಣಕ್ಕೆ ನೇಮಕಾತಿ ಆದೇಶ ಹೊರಡಿಸದೆ ಶಿಫಾರಸು ಕಡತವನ್ನು ಕಾರ್ಯದರ್ಶಿ ವಾಪಸು ಮಾಡಿದ್ದರು.

ಇದನ್ನು ‘ಪ್ರತಿಷ್ಠೆ’ಯಾಗಿ ತೆಗೆದುಕೊಂಡ ಆಯೋಗದ ಆರು ಸದಸ್ಯರು, ‘ಅಭ್ಯರ್ಥಿಗೆ ನೇಮಕಾತಿ ಆದೇಶ ಜಾರಿ ಮಾಡುವವರೆಗೂ ಆಯೋಗದ ಸಭೆಗಳಿಗೆ ಹಾಜರಾಗುವುದಿಲ್ಲವೆಂದೂ ಮತ್ತು ಆಯೋಗಕ್ಕೆ ಸಲ್ಲಿಕೆಯಾಗುವ ಯಾವುದೇ ಆಯ್ಕೆ ಪಟ್ಟಿಗಳಿಗೆ ಅನುಮೋದನೆ ನೀಡುವುದಿಲ್ಲ’ ಎಂದು ಅಧ್ಯಕ್ಷರಿಗೆ ಡಿ. 28ರಂದು ಪತ್ರ ನೀಡಿದ್ದರು. ಈ ಪತ್ರಕ್ಕೆ ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ, ಎಂ.ಬಿ. ಹೆಗ್ಗಣ್ಣವರ, ಡಾ. ಶಾಂತಾ ಹೊಸಮನಿ, ಡಾ.ಎಚ್.ಎಸ್. ನರೇಂದ್ರ, ಬಿ.ವಿ. ಗೀತಾ, ಮುಸ್ತಫಾ ಹುಸೇನ್ ಸಯ್ಯದ್ ಅಜೀಜ್ ಸಹಿ ಹಾಕಿದ್ದರು.

‘ಎಚ್‌ಸಿಎಲ್ ಹುದ್ದೆಯ ಆಯ್ಕೆ ಪ್ರಕ್ರಿಯೆಗೂ ಇತರ ಕಡತಗಳ ನಿರ್ವಹಣೆಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಎಚ್‌ಸಿಎಲ್ ಹುದ್ದೆಗೆ ನೇಮಕಾತಿ ಆದೇಶ ಹೊರಡಿಸುವವರೆಗೂ ಇತರ ಕಡತಗಳಿಗೆ ಅನುಮೋದನೆ ನೀಡುವುದಿಲ್ಲ. ಆಯೋಗದ ಸಭೆಗೆ ಹಾಜರಾಗುವುದಿಲ್ಲ-ವೆಂದು ತಿಳಿಸಿರುವುದು ಕಾರ್ಯದರ್ಶಿಯ ಮೇಲೆ ಒತ್ತಡ ಹೇರುವ ಪ್ರಯತ್ನವಾಗಿದೆ. ಎಚ್‌ಸಿಎಲ್ ಹುದ್ದೆಯ ಸಂದರ್ಶನಕ್ಕೆ ಹಾಜರಾದವರ ಮೌಲ್ಯಮಾಪನ ಹಾಗೂ ಅಂಕಗಳ ಬಗೆಗಿನ ದಾಖಲೆಗಳನ್ನು ಕಾರ್ಯದರ್ಶಿಗೆ ನೀಡಿಲ್ಲ. ಮೇಲ್ನೋಟಕ್ಕೆ ನೇಮಕಾತಿ ಪಾರದರ್ಶಕವಾಗಿ ನಡೆದಿದೆ ಎಂದು ಸಾಬೀತುಪಡಿಸುವ ಯಾವುದೇ ದಾಖಲೆಗಳು ಲಭ್ಯ ಇಲ್ಲ’ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

> **‘ಅಸಾಂವಿಧಾನಿಕ ಆಯ್ಕೆ?’**
>
> ‘ಕಾನೂನು ಕೋಶದ ಮುಖ್ಯಸ್ಥರ ಆಯ್ಕೆಗೆ ಸಂಬಂಧಿಸಿದ ನಡಾವಳಿಯಲ್ಲಿ ಯಾವುದೇ ಸ್ಪಷ್ಟ ಮಾಹಿತಿ ಇಲ್ಲದೇ ಇರುವುದರಿಂದ ಇದು ಅಸಾಂವಿಧಾನಿಕ ಆಯ್ಕೆ. ಆಯ್ಕೆ ಪ್ರಕ್ರಿಯೆಯಲ್ಲಿ ಆಗಿರುವ ಲೋಪಗಳನ್ನು ಆಯೋಗದ ಗಮನಕ್ಕೆ ತರಲು ಕಾರ್ಯದರ್ಶಿ ಪ್ರಯತ್ನಿಸಿದರೂ ಅದನ್ನು ಸರಿಪಡಿಸಿಕೊಳ್ಳುವ ಬದಲು ಆಯೋಗದ ಸಭೆಗಳಲ್ಲಿ ಮತ್ತು ಕಡತಗಳ ಮುಖಾಂತರ ಅನಗತ್ಯ ಒತ್ತಡ ಹೇರಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿ ಎಚ್‌ಸಿಎಲ್ ಹುದ್ದೆಯ ನೇಮಕಾತಿಗೆ ಮರು ಅಧಿಸೂಚನೆ ಹೊರಡಿಸಲಾಗಿದೆ’ ಎಂದು ಕೆಪಿಎಸ್‌ಸಿ ಮೂಲಗಳು ಹೇಳಿವೆ.

## ತುರ್ತು ವಿಚಾರಣೆಗೆ ‘ಸುಪ್ರೀಂ’ ನಕಾರ

**ನವದೆಹಲಿ:** ಕರ್ನಾಟಕದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ನೀಡಿರುವ ತಡೆಯಾಜ್ಞೆ ಆದೇಶದ ವಿರುದ್ಧ ಕರ್ನಾಟಕ ಸರ್ಕಾರದ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ. ಈ ಪ್ರಕರಣದ ವಿಚಾರಣೆಯನ್ನು ಫೆಬ್ರುವರಿ 19ರಂದು ನಡೆಸಲಾಗುವುದು ಎಂದು ಪೀಠ ತಿಳಿಸಿತು. ನೇಮಕಾತಿ ಪ್ರಕ್ರಿಯೆಗೆ ನೀಡಿರುವ ತಡೆಯಾಜ್ಞೆ ಆದೇಶವನ್ನು ಮಾರ್ಪಡಿಸಬೇಕು ಎಂದು ಕೋರಿ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಅರ್ಜಿ ಸಲ್ಲಿಸಿತ್ತು.





## ಸಕಾಲ: ಡಿಜಿಟಲೀಕರಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಕಾಲ ಕಾಯ್ದೆಯ ಅಡಿಯಲ್ಲಿ ಒದಗಿಸುತ್ತಿರುವ ಎಲ್ಲ ಸೇವೆಗಳನ್ನೂ ಡಿಜಿಟಲೀಕರಣ ಮಾಡುವಂತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬುಧವಾರ ಸಕಾಲ ಸೇವೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ‘ಕಂದಾಯ ಇಲಾಖೆಯಲ್ಲಿ ಬಹುತೇಕ ಸೇವೆಗಳನ್ನು ಆನ್‌ಲೈನ್ ರೂಪದಲ್ಲಿ ಒದಗಿಸಲಾಗುತ್ತಿದೆ. ಆ ಮಾದರಿಯನ್ನು ಸಕಾಲ ಸೇವೆಗಳಲ್ಲಿ ಏಕೆ ಅನುಷ್ಠಾನಕ್ಕೆ ತರಬಾರದು? ಸಕಾಲ ಅರ್ಜಿಗಳನ್ನೂ ಆನ್‌ಲೈನ್ ಮೂಲಕ ಸ್ವೀಕರಿಸುವ ಪ್ರಕ್ರಿಯೆ ಆರಂಭಿಸಬೇಕು’ ಎಂದು ನಿರ್ದೇಶನ ನೀಡಿದರು.

‘ಪ್ರತಿ ಹಳ್ಳಿಯಲ್ಲೂ ಈಗ ಸೈಬರ್ ಕೇಂದ್ರಗಳಿವೆ. ಗ್ರಾಮ-ಒನ್ ಸೇವೆಯನ್ನು ಮತ್ತಷ್ಟು ವಿಸ್ತರಿಸುವ ಮತ್ತು ಮೊಬೈಲ್ ಮೂಲಕವೂ ಸೇವೆ ಒದಗಿಸುವ ಉದ್ದೇಶವಿದೆ. ಜನರು ಮೊಬೈಲ್ ಮೂಲಕವೇ ಸಕಾಲ ಅರ್ಜಿ ಸಲ್ಲಿಸಿ ಸೇವೆಯನ್ನೂ ಪಡೆಯಬಹುದು. ಸಕಾಲ ಸೇವೆ ಡಿಜಿಟಲೀಕರಣ ಗೊಂಡರೆ ಡಿಜಿಟಲ್ ಹೆಜ್ಜೆ ಗುರುತಿನ ಮೂಲಕ ಅರ್ಜಿ ಎಲ್ಲಿದೆ? ವಿಳಂಬಕ್ಕೆ ಕಾರಣವೇನು? ಎಂಬ ಕುರಿತ ಮಾಹಿತಿ ನಮಗೂ ಲಭ್ಯವಾಗುತ್ತದೆ. ಹೀಗಾಗಿ ಮುಂದಿನ 5 ವರ್ಷದಲ್ಲಿ ಸಕಾಲ ಸಂಪೂರ್ಣ ಡಿಜಿಟಲಿಕರಣ ಆಗಬೇಕು’ ಎಂದರು.

**ಸಕಾಲಕ್ಕೆ ಮತ್ತಷ್ಟು ಸೇವೆ:** ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು, ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿ, ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 130 ಹೊಸ ಸೇವೆಗಳನ್ನು ಸಕಾಲದ ಮೂಲಕ ಒದಗಿಸಲು ಪ್ರಸ್ತಾವ ಸಲ್ಲಿಸಲಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸಂಶೋಧನೆ ಮತ್ತು ತರಬೇತಿ ಇಲಾಖೆ ಈಗಾಗಲೇ 65 ಸೇವೆಗಳನ್ನು ಸಕಾಲದಲ್ಲಿ ನೀಡುತ್ತಿವೆ. ಹೊಸದಾಗಿ 63 ಸೇವೆಗಳನ್ನು ನೀಡುವ ಪ್ರಸ್ತಾವವಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಈಗಾಗಲೇ 22 ಸೇವೆಗಳನ್ನು ನೀಡುತ್ತಿದ್ದು, ಹೊಸದಾಗಿ 16 ಸೇವೆಗಳನ್ನು ನೀಡಲು ಪ್ರಸ್ತಾವ ಸಲ್ಲಿಸಿದೆ. ಇನ್ನೂ ಹಲವು ಇಲಾಖೆಗಳು 600 ಸೇವೆಗಳನ್ನು ಒದಗಿಸುವ ಪ್ರಸ್ತಾವ ಸಲ್ಲಿಸಿವೆ.

## ವಿಮಾನದಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ

ಪ್ರಜಾವಾಣಿ ವಾರ್ತೆ



ಮಹಾಂತೇಶ್ವರ ಕಟ್ಟಿಮನಿ

**ಆಳಂದ(ಕಲಬುರಗಿ ಜಿಲ್ಲೆ):** ತಾಲ್ಲೂಕಿನ ಗಡಿಯಲ್ಲಿರುವ ಮಹಾರಾಷ್ಟ್ರದ ಮೈಂದರ್ಗಿ ಸರ್ಕಾರಿ ಕನ್ನಡ ಪ್ರಾಥಮಿಕ ಹೆಣ್ಣುಮಕ್ಕಳ ಶಾಲೆಯ ಮುಖ್ಯ ಶಿಕ್ಷಕ ಮಹಾಂತೇಶ್ವರ ಕಟ್ಟಿಮನಿ ಅವರು ₹ 2 ಲಕ್ಷ ಸ್ವಂತ ಹಣ ವೆಚ್ಚಮಾಡಿ 35 ವಿದ್ಯಾರ್ಥಿನಿಯರನ್ನು ವಿಮಾನದಲ್ಲಿ ದೆಹಲಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಿ ಬರುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮೈಂದರ್ಗಿ ಗ್ರಾಮದ ಈ ಶಾಲೆಯಲ್ಲಿ 260 ವಿದ್ಯಾರ್ಥಿನಿಯರು ಓದುತ್ತಿದ್ದಾರೆ. ಮುಖ್ಯಶಿಕ್ಷಕ ಮಹಾಂತೇಶ್ವರ ಅವರು ಶೈಕ್ಷಣಿಕ ಪ್ರವಾಸಕ್ಕೆ ಈ ಬಾರಿ ಮುಂಬೈ, ದೆಹಲಿಯನ್ನು ಆಯ್ಕೆ ಮಾಡಿಕೊಂಡಿದ್ದರು. ವಿದ್ಯಾರ್ಥಿನಿಯರಿಗೆ ತಲಾ ₹ 7 ಸಾವಿರ ಶುಲ್ಕ ನಿಗದಿಪಡಿಸಲಾಗಿತ್ತು. ಅರ್ಧದಷ್ಟು ಮಕ್ಕಳು ಮಾತ್ರ ಹಣ ಪಾವತಿಸಿದ್ದು, ಉಳಿದವರ ವೆಚ್ಚವನ್ನು ಮುಖ್ಯ ಶಿಕ್ಷಕರೇ ಭರಿಸಿದ್ದಾರೆ.

ಡಿ.28ರಂದು 35 ವಿದ್ಯಾರ್ಥಿನಿಯರು, ಆರು ಶಿಕ್ಷಕರು ಮುಂಬೈಗೆ ರೈಲಿನ ಮೂಲಕ ತೆರಳಿದ್ದಾರೆ. 29ರಂದು ಮುಂಬೈನಲ್ಲಿ ಬೀಚ್, ಗೇಟ್ ವೇ ಆಫ್ ಇಂಡಿಯಾ, ಸಿದ್ಧಿ ವಿನಾಯಕ ಮಂದಿರ, ಡಾ.ಅಂಬೇಡ್ಕರ್ ಅವರ ಚೈತ್ಯಭೂಮಿ, ವಿಧಾನಸೌಧ ಸೇರಿ ಹಲವು ತಾಣಗಳನ್ನು ವೀಕ್ಷಿಸಿದ್ದಾರೆ. ಡಿ.30ರಂದು ಮುಂಬೈನಿಂದ ವಿಮಾನದಲ್ಲಿ ದೆಹಲಿಗೆ ತೆರಳಿದ್ದಾರೆ. ದೆಹಲಿಯಲ್ಲಿ ಮೂರು ದಿನಗಳ ಕಾಲ ಕೆಂಪುಕೋಟೆ, ಇಂಡಿಯಾ ಗೇಟ್, ಇಂದಿರಾ ಗಾಂಧಿ ನಿವಾಸ, ಅಕ್ಷರಧಾಮ, ಗಾಂಧೀಜಿ ಸಮಾಧಿ ಸ್ಥಳ ರಾಜಘಾಟ್, ಸಂಸತ್ ಭವನ ವೀಕ್ಷಿಸಿದ್ದಾರೆ. ಅಧಿಕ ಚಳಿಯಲ್ಲಿಯೂ ವಿದ್ಯಾರ್ಥಿನಿಯರಿಗೆ ಯಾವುದೇ ತೊಂದರೆ ಆಗದಂತೆ ಆರೋಗ್ಯ, ಆಹಾರದ ಕುರಿತು ವಿಶೇಷ ಕಾಳಜಿ ವಹಿಸಲಾಗಿತ್ತು. ಮೈಂದರ್ಗಿಯಿಂದಲೇ ಸಜ್ಜೆ ರೊಟ್ಟಿ, ಶೇಂಗಾ ಚಟ್ನಿ ತಯಾರಿಸಿಕೊಂಡು ಹೋಗಲಾಗಿತ್ತು. ಹೀಗಾಗಿ ನಮ್ಮ ಪ್ರವಾಸಕ್ಕೆ ಯಾವುದೇ ಅಡ್ಡಿಯಾಗಲಿಲ್ಲ ಎಂದು ಮಹಾಂತೇಶ್ವರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೈಂದರ್ಗಿ ಸುತ್ತಮುತ್ತ ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿದೆ. ಕನ್ನಡ ಶಾಲೆಗಳತ್ತ ಮಕ್ಕಳು ಹಾಗೂ ಪಾಲಕರ ಒಲವು ಮೂಡಿಸಲು ಪ್ರವಾಸ ಕೈಗೊಂಡಿದ್ದೇವೆ. ಕನ್ನಡ ಶಾಲೆಗಳು ಉಳಿಯಬೇಕಾದರೆ ಗಡಿಭಾಗದ ಊರುಗಳಲ್ಲಿ ಕನ್ನಡ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕರ್ನಾಟಕ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಮಹಾತೇಶ್ವರ ಅಭಿಪ್ರಾಯಪಟ್ಟರು.

ವಿದ್ಯಾರ್ಥಿನಿಯರು ದೆಹಲಿಯಿಂದ ರೈಲು ಮೂಲಕ ಊರು ಸೇರಿದ್ದಾರೆ. ವಿದ್ಯಾರ್ಥಿನಿಯರೊಂದಿಗೆ ಸಹ ಶಿಕ್ಷಕರಾದ ವಿಜಯಕುಮಾರ ಗುಂಡದ, ಬಸವರಾಜ ಹಿಪ್ಪರಗಿ, ಗುರುಲಿಂಗಪ್ಪ ಶಿವಣಗಿ, ಸುಜತಾ ಸಬಸಗಿ, ರೇಖಾ ಸುತಾರ ಪ್ರವಾಸಕ್ಕೆ ತೆರಳಿದ್ದರು.




ವಿದ್ಯಾರ್ಥಿನಿಯರು ದೆಹಲಿಗೆ ಪ್ರವಾಸ ಹೊರಟ ವೇಳೆ ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿದ್ದ ಸಂದರ್ಭ

> **ಪಾಲಕರ ಮನವೊಲಿಸಿ ಪ್ರವಾಸಕ್ಕೆ ಹೋಗಿದ್ದೆ. ವಿಮಾನದಲ್ಲಿ ಪ್ರಯಾಣಿಸಿದ ಅನುಭವ ಅವಿಸ್ಮರಣೀಯ. ತುಂಬಾ ಖುಷಿ ನೀಡಿದೆ.**
> **ಅಂಜಲಿ ಪಾಟೀಲ**, ವಿದ್ಯಾರ್ಥಿನಿ

> **ವಿಮಾನ ಟಿಕೆಟ್ ದರ ₹5,500 ಇತ್ತು. ಐದು ದಿನ ಪ್ರವಾಸಕ್ಕೆ ₹4.30 ಲಕ್ಷ ಖರ್ಚು ಬಂದಿದೆ. ಮಕ್ಕಳಿಗಾಗಿ ₹2 ಲಕ್ಷ ಸ್ವಂತ ಹಣ ಖರ್ಚು ಮಾಡಿದ್ದೇನೆ.**
> **ಮಹಾಂತೇಶ್ವರ ಕಟ್ಟಿಮನಿ**, ಮುಖ್ಯಶಿಕ್ಷಕ

**ಮುಖ್ಯಾಂಶಗಳು**
- ಮುಂಬೈ–ದೆಹಲಿಗೆ ಪ್ರಯಾಣ
- 35 ವಿದ್ಯಾರ್ಥಿನಿಯರಿಗೆ ಪ್ರವಾಸ ಭಾಗ್ಯ




## ನಾಡೋಜ ಗೌರವ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ 32ನೇ ನುಡಿಹಬ್ಬದಲ್ಲಿ, ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಿದ ಗಣ್ಯರಾದ ಪ್ರೊ.ತೇಜಸ್ವಿ ವಿ.ಕಟ್ಟಿಮನಿ, ಬಸವಲಿಂಗ ಪಟ್ಟದ್ದೇವರು ಮತ್ತು ಪ್ರೊ.ಎಸ್.ಸಿ.ಶರ್ಮಾ ಅವರಿಗೆ ನಾಡೋಜ ಗೌರವ ಪದವಿ ಪ್ರದಾನ ಮಾಡಲಾಯಿತು. ಅಧ್ಯಯನಾಂಗದ ನಿರ್ದೇಶಕ ಪ್ರೊ.ಪಿ.ಮಹಾದೇವಯ್ಯ, ಕುಲಸಚಿವ ಪ್ರೊ. ವಿಜಯ ಪೂಣಚ್ಚ ತಂಬಂಡ, ಕುಲಪತಿ ಪ್ರೊ. ಡಿ.ವಿ.ಪರಮಶಿವಮೂರ್ತಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಅನಂತಪುರ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ಎ.ಕೋರಿ ಪಾಲ್ಗೊಂಡಿದ್ದರು

**ನಿಧನ ವಾರ್ತೆ**

## ಜವಾದ್ ರಹೀಂ



**ಬೆಂಗಳೂರು:** ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜವಾದ್ ರಹೀಂ (71) ಬುಧವಾರ ಬೆಳಗ್ಗೆ 6.50ರ ಸಮಯದಲ್ಲಿ ನಗರದ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ನಿಧನರಾದರು.

ಪತ್ನಿ ಮತ್ತು ಪುತ್ರಿಯನ್ನು ಅಗಲಿದ್ದಾರೆ. ನಂತರ 2006ರ ಜನವರಿ 6ರಲ್ಲಿ ಹೈಕೋರ್ಟ್ ನ್ಯಾಯಮೂರ್ತಿ-ಯಾಗಿ ನೇಮಕಗೊಂಡು ನಿವೃತ್ತಿ ಹೊಂದಿದ್ದರು. ‘ಮಿಲ್ಲರ್ಸ್ ರಸ್ತೆಯಲ್ಲಿರುವ ಖುದ್ದು ಸಾಹೇಬ್ ಈದ್ಗಾ ಮೈದಾನದ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಸಲಾಯಿತು’ ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.



❦ ಸುಭಾಷಿತ ❦

ನಾವು ಕೊಡುವ ಉಪದೇಶಕ್ಕೂ ನಮ್ಮ ಜೀವನಕ್ಕೂ ಸಂಬಂಧ ಇಲ್ಲದೇಹೋದರೆ ನಮ್ಮ ಮಾತಿಗೆ ಬೆಲೆ ಬಾರದು.

–ಶಿವರಾಮ ಕಾರಂತ

# ಭ್ರಷ್ಟಾಚಾರ ಪ್ರಕರಣಗಳ ವಿಚಾರಣೆಗೆ ಅನುಮತಿ: ವಿಳಂಬ ಧೋರಣೆ ಸಲ್ಲದು

**ರಾಜ್ಯ** ಸರ್ಕಾರದ ಅಧಿಕಾರಿಗಳು, ನೌಕರರು ಹಾಗೂ ಚುನಾಯಿತ ಪ್ರತಿನಿಧಿಗಳ ಲಂಚಗುಳಿತನ, ಅಕ್ರಮ ಆಸ್ತಿ ಸಂಪಾದನೆ, ಅಧಿಕಾರ ದುರ್ಬಳಕೆಯನ್ನು ತಡೆಯುವುದಕ್ಕಾಗಿ ಲೋಕಾಯುಕ್ತದ ಪೊಲೀಸ್ ವಿಭಾಗವು ಕಾರ್ಯನಿರ್ವಹಿಸುತ್ತಿದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ರಾಜ್ಯ ಸರ್ಕಾರಿ ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವ ಲೋಕಾಯುಕ್ತ ಪೊಲೀಸರಿಗೆ, ಆರೋಪಕ್ಕೆ ಒಳಗಾದ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಲು ಸಕ್ಷಮ ಪ್ರಾಧಿಕಾರಗಳಿಂದ ಸರಿಯಾದ ಸಹಕಾರ ಸಿಗುತ್ತಿಲ್ಲ. ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸಿದ ತನಿಖಾಧಿಕಾರಿಗಳು, ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸುವ ಮುನ್ನ ಸಕ್ಷಮ ಪ್ರಾಧಿಕಾರಗಳಿಂದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19ರ ಅಡಿಯಲ್ಲಿ ಮಂಜೂರಾತಿ ಪಡೆಯುವುದು ಕಡ್ಡಾಯ. ಕಾನೂನಿನಲ್ಲಿರುವ ಈ ಅವಕಾಶವನ್ನು ದುರ್ಬಳಕೆ ಮಾಡಿಕೊಂಡು ಸಕ್ಷಮ ಪ್ರಾಧಿಕಾರಗಳು ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡದೇ ಸತಾಯಿಸುವುದು ನಿರಂತರವಾಗಿ ನಡೆಯುತ್ತಿದೆ. ಕೆಲವೊಮ್ಮೆ ವರ್ಷಗಳ ಕಾಲ ಅಂತಹ ಪ್ರಸ್ತಾವಗಳನ್ನು ಬಾಕಿ ಇರಿಸಿಕೊಂಡು ತನಿಖೆಯನ್ನೇ ನಿಷ್ಫಲಗೊಳಿಸಿದ ಉದಾಹರಣೆಗಳಿವೆ. ಈಗ 22 ಇಲಾಖೆಗಳ ಅಧಿಕಾರಿಗಳು, ನೌಕರರ ವಿರುದ್ಧದ 156 ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ಪ್ರಸ್ತಾವಗಳು ದೀರ್ಘಕಾಲದಿಂದ ಸಕ್ಷಮ ಪ್ರಾಧಿಕಾರಗಳಲ್ಲಿ ಬಾಕಿ ಉಳಿದಿವೆ. ಈ ಪ್ರಸ್ತಾವಗಳನ್ನು ಪರಿಶೀಲಿಸಿ, ಆರೋಪ ಹೊತ್ತ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡಲು ಸಕ್ಷಮ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವಂತೆ ಲೋಕಾಯುಕ್ತದ ರಿಜಿಸ್ಟ್ರಾರ್ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ಈ ಪೈಕಿ 113 ಪ್ರಕರಣಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಂದಾಯ, ನಗರಾಭಿವೃದ್ಧಿ, ಆಹಾರ ಮತ್ತು ನಾಗರಿಕ ಪೂರೈಕೆ, ಲೋಕೋಪಯೋಗಿ ಹಾಗೂ ಇಂಧನ ಇಲಾಖೆಯ ಅಧಿಕಾರಿಗಳು, ನೌಕರರ ವಿರುದ್ಧ ಇವೆ. ಕೆಲವು ಪ್ರಕರಣಗಳಲ್ಲಿ ವಿಚಾರಣೆಗೆ ಮಂಜೂರಾತಿ ಕೋರಿರುವ ಪ್ರಸ್ತಾವಗಳು ಐದು ವರ್ಷಗಳಿಂದಲೂ ಸಕ್ಷಮ ಪ್ರಾಧಿಕಾರಗಳ ಬಳಿಯೇ ಉಳಿದುಕೊಂಡಿವೆ. ಸಕ್ಷಮ ಪ್ರಾಧಿಕಾರಗಳ ಈ ಧೋರಣೆಯು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ, ಸರ್ಕಾರಿ ನೌಕರರ ಸೇವಾ ನಿಯಮಾವಳಿ ಹಾಗೂ ತನಿಖಾ ಸಂಸ್ಥೆಗಳ ಅಸ್ತಿತ್ವವನ್ನೇ ಅಣಕಿಸುವಂತಿದೆ.



ಭ್ರಷ್ಟಾಚಾರ ಪ್ರಕರಣಗಳಲ್ಲಿನ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ವಿಚಾರದಲ್ಲಿ ಸರ್ಕಾರವು ಬದ್ಧತೆಯಿಂದ ಕೆಲಸ ಮಾಡಬೇಕು

ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆ ಮತ್ತು ವಿಚಾರಣೆಯಲ್ಲಿನ ವಿಳಂಬದ ಅನುಕೂಲ ಪಡೆದುಕೊಂಡು ಆರೋಪಿಗಳು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿರುತ್ತವೆ. ಈ ಕಾರಣಕ್ಕಾಗಿಯೇ ಇಂತಹ ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆಯನ್ನು ಪೂರ್ಣಗೊಳಿಸಿ, ಕಾಲಮಿತಿಯಲ್ಲಿ ಆರೋಪಪಟ್ಟಿ ಸಲ್ಲಿಸಿ, ಶೀಘ್ರವಾಗಿ ವಿಚಾರಣೆಯನ್ನೂ ಪೂರ್ಣಗೊಳಿಸಬೇಕಾದ ಅಗತ್ಯವಿರುತ್ತದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್–19ಕ್ಕೆ 2018ರಲ್ಲಿ ತಿದ್ದುಪಡಿ ತಂದ ಬಳಿಕ, ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ತನಿಖಾಧಿಕಾರಿಯು ಪ್ರಸ್ತಾವ ಸಲ್ಲಿಸಿದ ದಿನದಿಂದ ಮೂರು ತಿಂಗಳೊಳಗೆ ಸಕ್ಷಮ ಪ್ರಾಧಿಕಾರ ಅದನ್ನು ವಿಲೇವಾರಿ ಮಾಡುವುದು ಕಡ್ಡಾಯ. ಹೆಚ್ಚಿನ ವಿವರಣೆ ಅಗತ್ಯವಿರುವ ಪ್ರಕರಣಗಳಲ್ಲಿ ಮಾತ್ರ ಒಂದು ತಿಂಗಳ ಹೆಚ್ಚುವರಿ ಕಾಲಾವಕಾಶ ಇದೆ. ಈ ಕಾಲಮಿತಿಯನ್ನು ಸುಪ್ರೀಂ ಕೋರ್ಟ್ ಕೂಡ 2022ರ ತೀರ್ಪಿನಲ್ಲಿ ಎತ್ತಿಹಿಡಿದಿದೆ. ಆದರೆ, ಸಕ್ಷಮ ಪ್ರಾಧಿಕಾರಗಳಾಗಿರುವ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರು ಕಾಯ್ದೆ ಮತ್ತು ಸುಪ್ರೀಂ ಕೋರ್ಟ್ ತೀರ್ಪನ್ನೂ ಧಿಕ್ಕರಿಸಿ ಭ್ರಷ್ಟರ ರಕ್ಷಣೆಗೆ ನಿಂತಿರುವುದು ಕಳವಳಕಾರಿ ಬೆಳವಣಿಗೆ.

ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಾಗ ಉದ್ದೇಶಪೂರ್ವಕವಾಗಿ ಕೆಲವು ಲೋಪಗಳೊಂದಿಗೆ ಆದೇಶ ಹೊರಡಿಸುವುದೂ ನಡೆಯುತ್ತಿದೆ. ಪ್ರಬಲ ಸಾಕ್ಷ್ಯಾಧಾರಗಳಿದ್ದರೂ ವಿಚಾರಣೆಗೆ ಅನುಮತಿ ನೀಡುವ ಆದೇಶದಲ್ಲಿನ ಅಂತಹ ತಾಂತ್ರಿಕ ದೋಷಗಳ ಕಾರಣದಿಂದಾಗಿಯೇ ಆರೋಪಿಗಳು ಬಿಡುಗಡೆಯಾಗುತ್ತಿರುವ ಪ್ರಕರಣಗಳೂ ಹೆಚ್ಚುತ್ತಿವೆ. ಇದು ಕೂಡ ಭ್ರಷ್ಟಾಚಾರದ ವಿರುದ್ಧದ ಸಮರದಲ್ಲಿ ತನಿಖಾ ಸಂಸ್ಥೆಗಳು ಹಿನ್ನಡೆ ಅನುಭವಿಸಲು ಕಾರಣವಾಗುತ್ತಿದೆ. ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ವಿಚಾರಣೆಗೆ ಅನುಮತಿ ಕೋರಿರುವ ಪ್ರಸ್ತಾವಗಳನ್ನು ತಕ್ಷಣ ಪರಿಶೀಲಿಸಿ, ತ್ವರಿತವಾಗಿ ವಿಲೇವಾರಿ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಡಿಸೆಂಬರ್ 29ರಂದು ಸೂಚಿಸಿದ್ದಾರೆ. ಮುಖ್ಯಮಂತ್ರಿಯವರ ಸೂಚನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಭ್ರಷ್ಟಾಚಾರ ನಿಗ್ರಹ ಎಂಬುದು ರಾಜಕೀಯ ಪಕ್ಷಗಳು ಮತ್ತು ಅಧಿಕಾರಿಶಾಹಿಗೆ ಬಾಯಿ ಉಪಚಾರದ ಮಾತಿನಂತಾಗಬಾರದು. ಭ್ರಷ್ಟಾಚಾರದ ಆರೋಪ ಹೊತ್ತವರ ವಿರುದ್ಧದ ವಿಚಾರಣೆಗೆ ಅನುಮತಿ ಕೊಡುವ ವಿಚಾರದಲ್ಲಿ ಅಧಿಕಾರಿ ವರ್ಗದ ಒತ್ತಡಕ್ಕೆ ಮಣಿಯದೇ ನಿರ್ಧಾರ ಕೈಗೊಳ್ಳಬೇಕಾದುದು ಸರ್ಕಾರದ ಚುಕ್ಕಾಣಿ ಹಿಡಿದವರ ಹೊಣೆಗಾರಿಕೆ. ಲೋಕಾಯುಕ್ತ ಪೊಲೀಸರು ವಿಚಾರಣೆಗೆ ಅನುಮತಿ ಕೋರಿ ಸಲ್ಲಿಸುವ ಪ್ರಸ್ತಾವಗಳನ್ನು ವಿಲೇವಾರಿ ಮಾಡಲು ವಿಳಂಬ ಧೋರಣೆ ಅನುಸರಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಛಾತಿಯನ್ನು ರಾಜ್ಯ ಸರ್ಕಾರ ಪ್ರದರ್ಶಿಸಬೇಕು. ಭ್ರಷ್ಟಾಚಾರ ಪ್ರಕರಣಗಳಲ್ಲಿನ ಆರೋಪಿಗಳ ರಕ್ಷಣೆಗೆ ನಿಲ್ಲುವವರನ್ನು ಸಹಿಸುವುದಿಲ್ಲ ಎಂಬ ಬಲವಾದ ಸಂದೇಶವನ್ನು ರವಾನಿಸುವ ಕೆಲಸ ಮೇಲಿನ ಹಂತದಿಂದಲೇ ಆಗಬೇಕು. ಈ ವಿಚಾರದಲ್ಲಿ ಸರ್ಕಾರವು ಬದ್ಧತೆಯಿಂದ ಕೆಲಸ ಮಾಡದಿದ್ದರೆ ಜನರಿಗೆ ದ್ರೋಹ ಬಗೆದಂತಾಗುತ್ತದೆ.

## ದಿನದ ಟ್ವೀಟ್

### ನೀವು ಕಲಿಸಬೇಕಾದುದು...



ನಿಮ್ಮ ಮಗಳಿಗೆ ಆರ್ಥಿಕ ಸ್ವಾತಂತ್ರ್ಯದ ಮಹತ್ವದ ಬಗ್ಗೆ ಕಲಿಸಿ, ಅದರಿಂದ ಭವಿಷ್ಯದಲ್ಲಿ ಅವಳು ಒಬ್ಬ ಯಜಮಾನನನ್ನು ಅಲ್ಲದೆ ಸಂಗಾತಿಯನ್ನು ಹೊಂದಬಹುದು. ನಿಮ್ಮ ಮಗನಿಗೆ ಅಡುಗೆ ಮತ್ತು ಮನೆಗೆಲಸ ಮಾಡುವುದನ್ನು ಕಲಿಸಿ, ಅದರಿಂದ ಅವನು ಭವಿಷ್ಯದಲ್ಲಿ ಒಬ್ಬ ಸೇವಕಿಯನ್ನಲ್ಲದೆ ಸಂಗಾತಿಯನ್ನು ಹೊಂದಲು ಸಾಧ್ಯವಾಗುತ್ತದೆ.

**ಅಭಿಜಿತ್ ಚೋಕ್ರಿ**, ಪಶ್ಚಿಮಬಂಗಾಳ ಸರಕಾರ

## ಕಿಡಿನುಡಿ



ಒಳ್ಳೆಯದಕ್ಕಿಂತ ಹೆಚ್ಚು ಹಾನಿಯನ್ನೇ ಉಂಟುಮಾಡಿದ 'ಮೃದು ಹಿಂದುತ್ವ'ವನ್ನು ಪ್ರತಿಪಾದಿಸುವುದರ ಬದಲು, ಧರ್ಮವನ್ನು ರಾಜಕೀಯಕರಣಗೊಳಿಸುವುದರ ವಿರುದ್ಧ ಸ್ಪಷ್ಟವಾದ ನಿರ್ಧಾರ ಕೈಗೊಳ್ಳುವುದು ಒಳ್ಳೆಯದು.

(ಅಯೋಧ್ಯೆಯ ರಾಮ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗಿಯಾಗದಿರುವ ಕಾಂಗ್ರೆಸ್ ಪಕ್ಷದ ತೀರ್ಮಾನದ ಬಗ್ಗೆ ಪ್ರತಿಕ್ರಿಯೆ)

**ಅನುಜಾ ರವಿ ಸೂದ್**, ಪತ್ರಕರ್ತೆ

## 25 ವರ್ಷಗಳ ಹಿಂದೆ

ಸೋಮವಾರ, 11-1-1999

**ಮತಾಂತರ: ರಾಷ್ಟ್ರೀಯ ಚರ್ಚೆಗೆ ಪ್ರಧಾನಿ ವಾಜಪೇಯಿ ಸಲಹೆ**

ಅಹ್ವಾ (ಡಾಂಗ್ ಜಿಲ್ಲೆ), ಜ. 10– ಪ್ರಧಾನಿ ಎ.ಬಿ.ವಾಜಪೇಯಿ ಅವರು ಇಂದು ದೇಶದ ಎಲ್ಲ ಕೋಮಿನ ಜನರಿಗೂ ಸಂಪೂರ್ಣ ಧಾರ್ಮಿಕ ಭದ್ರತೆಯ ಭರವಸೆಯನ್ನು ನೀಡಿದರಲ್ಲದೆ ಮತಾಂತರದ ವಿಷಯವಾಗಿ ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂದು ಕರೆ ನೀಡಿದರು.

ಕೋಮು ಹಿಂಸಾಚಾರ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆಯೂ ಅವರು ರಾಜ್ಯ ಸರ್ಕಾರಗಳಿಗೆ ಆದೇಶ ನೀಡಿದರು.

ಈ ಜಿಲ್ಲೆಯಲ್ಲಿ ಹಿಂದೂಗಳು ಹಾಗೂ ಕ್ರೈಸ್ತರ ನಡುವೆ ಘರ್ಷಣೆ ನಡೆದ ಕೆಲವು ಸ್ಥಳಗಳ ಭೇಟಿಯ ನಂತರ ಇಲ್ಲಿ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ದೇಶದ ಜಾತ್ಯತೀತ ಸ್ವರೂಪವನ್ನು ರಕ್ಷಿಸಲಾಗುವುದು ಎಂದು ಭರವಸೆ ನೀಡಿದರು.

'ಯಾವುದೇ ಕೋಮಿನ ಯಾವನೇ ವ್ಯಕ್ತಿ ಅಥವಾ ಸಂಸ್ಥೆಯು ಇನ್ನೊಂದು ಕೋಮಿನವರ ಮೇಲೆ ನಡೆಸುವ ಹಿಂಸಾಚಾರವನ್ನು ರಾಜ್ಯ ಸರ್ಕಾರಗಳು ಸಹಿಸದೆ ಮಟ್ಟಹಾಕಬೇಕು' ಎಂದು ಅವರು ಕರೆ ನೀಡಿದರು.

## 50 ವರ್ಷಗಳ ಹಿಂದೆ

ಶುಕ್ರವಾರ, 11-1-1974

**ಹಣಕಾಸು ನಿರ್ವಹಣೆ ಸಾಧನಕ್ಕೆ ಕಂಪ್ಯೂಟರ್**

ಬೆಂಗಳೂರು, ಜ. 10 – ಪ್ರಥಮ ಬಾರಿಗೆ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಕರಾರುವಾಕ್ಕಾದ ಅಂಕಿ ಅಂಶಗಳನ್ನು ಪಡೆಯುವ ಉದ್ದೇಶದಿಂದ ಕಂಪ್ಯೂಟರ್ ಉಪಕರಣವನ್ನು ಹೊಂದಿ, ಹಣಕಾಸು ಹತೋಟಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕಂಪ್ಯೂಟರ್ ವಿಧಾನವನ್ನು ಜಾರಿಗೆ ತರಲಿದೆ.


ಕಂಪ್ಯೂಟರ್ ವಿಧಾನ ಅಳವಡಿಸುತ್ತಿರುವುದು ಮಹತ್ವದ ಹೆಜ್ಜೆ. ಈವರೆಗೆ ವಿವರಗಳನ್ನು ಪಡೆಯುವುದಕ್ಕೆ ಎರಡು ಮೂರು ತಿಂಗಳು ಕಾಯಬೇಕಾಗಿ ಬರುತ್ತಿತ್ತು. ಈಗ ಒಂದು ತಿಂಗಳಲ್ಲಿ ಅದನ್ನು ಪಡೆಯಲು ಮಾರ್ಗವಾಗುತ್ತದೆ. ಅದರಿಂದ ಹಣಕಾಸಿನ ನಿಜವಾದ ಚಿತ್ರಣ ಬೇಗನೆ ದೊರೆತು, ಸೂಕ್ತ ಆರ್ಥಿಕ ಹತೋಟಿ ವ್ಯವಸ್ಥೆಗೆ ಅವಕಾಶ ಉಂಟಾಗುವ ಎಂದು ಹಣಕಾಸು ಸಚಿವ ಎಂ.ವೈ. ಘೋರ್ಪಡೆ ಅವರು ವಿವರಿಸಿದರು.

ಓವರ್ ಡ್ರಾಫ್ಟ್ ಮಿತಿ ಮುಟ್ಟದಂತೆ ಅದನ್ನು ಮೀರದಿರುವುದಕ್ಕೆ ಯಾವ ಬಾಬ್ತಿನಲ್ಲಿ ವೆಚ್ಚವನ್ನು ಮುಂದೂಡಬಹುದು ಎಂದು ಅರಿತು, ತೊಂದರೆ ತಪ್ಪಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಸಚಿವರು ತಿಳಿಸಿದರು.

---

ಯಾಂತ್ರಿಕ ಬುದ್ಧಿಮತ್ತೆಯ ಹೊಸ ಹೊಸ ಸವಾಲುಗಳು ಹೊಸ ವರ್ಷದಲ್ಲಿ ಹೆಚ್ಚಲಿವೆಯೇ?

# ಸಮಸ್ತ ಲೋಕಕ್ಕೆ ಸುಖವೆಲ್ಲಿ ಬಂತು?



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

**ಎಪ್ಪತ್ತರ** ದಶಕದಲ್ಲಿ ಧಾರವಾಡದಲ್ಲಿ ಒಂದು ವದಂತಿ ಹಬ್ಬಿತ್ತು. ಎಕ್ಸ್‌ರೇ ಪವರ್ ಇರುವ ವಿದೇಶೀ ಗಾಗಲ್‌ಗಳು (ಕಪ್ಪು ಕನ್ನಡಕ) ಕಳ್ಳಸಾಗಣೆಯಲ್ಲಿ ಗೋವಾಕ್ಕೆ ಬಂದಿದ್ದು, ಅಂಥ ಕನ್ನಡಕ ಹಾಕಿಕೊಂಡರೆ ಎಲ್ಲೆಲ್ಲೂ ದಿಗಂಬರ ವ್ಯಕ್ತಿಗಳೇ ಕಾಣುತ್ತಾರೆ ಎಂಬ ಸುದ್ದಿ ಅದಾಗಿತ್ತು. ಅದನ್ನು ನಂಬಿ, ಮುಗ್ಧ ಹೆಣ್ಣುಮಕ್ಕಳು ಕೆಲಕಾಲ ಗಾಗಲ್‌ಧಾರಿ ಪುರುಷರಿದ್ದ ಕಡೆ ಸುಳಿಯಲೂ ಅಂಜುವಂತಾಗಿತ್ತು. ಇದೆಲ್ಲ ಅವೈಜ್ಞಾನಿಕ ಬುರುಡೆಯೆಂದೂ ಅಂಥ ಕನ್ನಡಕ ಇದ್ದುದೇ ಆದರೆ, ಅದನ್ನು ಧರಿಸಿದವರಿಗೆ ಹೆಣ್ಣು, ಗಂಡಿನ ವ್ಯತ್ಯಾಸವೇ ಇಲ್ಲದಂತೆ ಎಲ್ಲೆಲ್ಲೂ ಬರೀ ಅಸ್ಥಿಪಂಜರಗಳೇ ಕಾಣುತ್ತವೆಂದೂ ನಾವು ವಿಜ್ಞಾನದ ವಿದ್ಯಾರ್ಥಿಗಳು (ಎಕ್ಸ್-ರೇ ಫಿಲ್ಮ್‌ಗಳನ್ನು ತೋರಿಸಿ) ಸಮಜಾಯಿಷಿ ಕೊಡಬೇಕಾಗಿ ಬಂದಿತ್ತು.

ಈಗ ಐವತ್ತು ವರ್ಷ ಕಳೆದರೂ ಅಂಥ ಕನ್ನಡಕ ಬಂದಿಲ್ಲ, ಬರಲು ಸಾಧ್ಯವೂ ಇಲ್ಲ. ಆದರೆ ಅದಕ್ಕಿಂತ ಪವರ್‌ಫುಲ್ ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ಬಂದಿದೆಯಲ್ಲ? ಯಾರ ವಿಡಿಯೊ ಚಿತ್ರಣವನ್ನು ಬೇಕಾದರೂ ನಗ್ನಗೊಳಿಸಬಹುದು. ಕಳೆದ ಅಕ್ಟೋಬರ್‌ನಲ್ಲಿ ಅಮೆರಿಕದ ಲೂಸಿಯಾನಾದಲ್ಲಿ ಇಂಥದ್ದೊಂದು ಘಟನೆ ನಡೆಯಿತು. ಜೈಲಿನಲ್ಲಿದ್ದ ಅಪರಾಧಿಗಳನ್ನು ಪೆರೋಲ್ ಮೇಲೆ ಬಿಡುಗಡೆ ಮಾಡುವ ಮುಂಚೆ ಅವರ ನಡವಳಿಕೆ ಸರಿ ಇದೆಯೇ ಎಂದು ಮನೋವೈದ್ಯೆಯೊಬ್ಬರು ಪರೀಕ್ಷೆ ಮಾಡುತ್ತಿದ್ದ ದೃಶ್ಯ ಪ್ರಸಾರವಾಗಿತ್ತು. ಡಿಜಿಟಲ್ ಕಿಡಿಗೇಡಿಗಳು ಆ ವಿಡಿಯೊವನ್ನೇ ತಿರುಚಿ, ವೈದ್ಯೆಯ ಬಟ್ಟೆಬರೆಯನ್ನು ಕಳಚಿ ಹಾಕಿ, ಹುಟ್ಟುಡುಗೆಯಲ್ಲೇ ಆಕೆ ಸಂವಾದಿಸುವ ವಿಡಿಯೊವನ್ನು ಆನ್‌ಲೈನ್‌ನಲ್ಲಿ ಬಿತ್ತರಿಸಿದರು. ಜೊತೆಗೆ ಅಶ್ಲೀಲ, ವರ್ಣಲೇವಡಿಯ ಸಂಭಾಷಣೆಯೂ ಅದರಲ್ಲಿತ್ತು.

ಅಂಥ ಪಿರ್ಕಿ ವೆಬ್‌ಸೈಟ್‌ಗಳು ಇಂಟರ್ನೆಟ್‌ನಲ್ಲಿ ಬೇಕಾದಷ್ಟಿವೆ. ವಿಕೃತ ಟೆಕಿಗಳೇ ಯಾಂಬು ನೆರವು ಪಡೆದು, ಗಣ್ಯವ್ಯಕ್ತಿಗಳ ಬಾಯಿಂದ ಎಂಥ ಹೊಲಸು ಮಾತುಗಳನ್ನೂ ಅವರದೇ ಧ್ವನಿಯಲ್ಲಿ ಹೊಮ್ಮಿಸುತ್ತಾರೆ. ಹಿಟ್ಲರನ ಆತ್ಮಕಥೆಯನ್ನು ಖ್ಯಾತ ಬ್ರಿಟಿಷ್ ನಟಿ ಎಮ್ಮಾ ವ್ಯಾಟ್ಸನ್ ಓದುತ್ತಿರುವ ದೃಶ್ಯ, ಜೋ ಬೈಡನ್ ರಷ್ಯಾದ ಮೇಲೆ ಯುದ್ಧ ಘೋಷಿಸುವ ಮಾತು– ಎಲ್ಲ ಬರುತ್ತಿವೆ. ಮೈಕ್ರೊಸಾಫ್ಟ್, ಮೆಟಾ, ಗೂಗಲ್ ಹೀಗೆ ನೂರಾರು ಕಂಪನಿಗಳು ಒಳ್ಳೆಯ (ಲಾಭ ಮತ್ತು) ಉದ್ದೇಶಕ್ಕೆಂದೇ ನಾನಾ ಬಗೆಯ ಯಾಂಬುಗಳನ್ನು ಬಿಡುಗಡೆ ಮಾಡುತ್ತಿವೆ. ಅವುಗಳ ದುರ್ಬಳಕೆಯನ್ನು ತಡೆಯುವುದು ಹೇಗೆಂಬುದು ಮಾತ್ರ ಯಾರಿಗೂ ಗೊತ್ತಾಗುತ್ತಿಲ್ಲ. 'ಇದು ಯಾಂಬು ಸೃಷ್ಟಿಸಿದ್ದು' ಎಂಬ ಮುದ್ರೆ ಹಾಕಿರಬೇಕೆಂದು ಯೂಟ್ಯೂಬ್, ಟಿಕ್‌ಟಾಕ್‌ನಂಥ ಜನಪ್ರಿಯ ಮಾಧ್ಯಮ ಕಂಪನಿಗಳು ಹೇಳುತ್ತಿವೆಯಾದರೂ ಅವನ್ನೂ ಏಮಾರಿಸುವ ದುಷ್ಟಬುದ್ಧಿಗಳು ಅಂತರ್ಜಾಲದಲ್ಲಿ ಹಾವಳಿ ಎಬ್ಬಿಸುತ್ತಿವೆ. ಈ ವರ್ಷ ಅನೇಕ ದೇಶಗಳಲ್ಲಿ ಚುನಾವಣೆ ನಡೆಯಲಿದ್ದು, ರಾಜಕೀಯ ಲಾಭಕ್ಕೆಂದೇ ಹೊಸಹೊಸ ರೂಪದಲ್ಲಿ ಯಾಂಬು ದುರ್ಬಳಕೆಯ ಸಾಧ್ಯತೆಗಳು ಹೆಚ್ಚುತ್ತಿವೆ.

ಎ.ಐ. ಹೆಸರಿನ ಈ ದೈತ್ಯನ ಸದ್ಬಳಕೆಯೂ ಆಗುತ್ತಿದೆ ನಿಜ. ಚೀನಾದ ಲಕ್ಷಾಂತರ ಶಾಲೆಗಳಲ್ಲಿ ಎ.ಐ. ಕ್ಯಾಮೆರಾಗಳಿವೆ. ಕ್ಲಾಸ್ ನಡೆಯುತ್ತಿರುವಾಗ ಅವು ಪ್ರತಿ ಮಗುವಿನ ಕ್ಷಣಕ್ಷಣದ ಭಾವನೆಗಳನ್ನು ಅಳೆಯುತ್ತ, ಯಾವ ಮಗುವಿಗೆ ಗಣಿತದಲ್ಲಿ ಖುಷಿ, ಯಾವುದಕ್ಕೆ ಪ್ರದರ್ಶನ ಕಲೆಯಲ್ಲಿ ಆಸಕ್ತಿ ಎಂದೆಲ್ಲ ನೋಡುತ್ತವೆ. ಏಕಕಾಲಕ್ಕೆ ಕೋಟ್ಯಂತರ ಮಕ್ಕಳ ಚರ್ಯೆಯನ್ನು ಅಳೆಯುತ್ತ, ಹೋಲಿಸುತ್ತ ಯಾಂಬು ವಿಶ್ಲೇಷಣೆ ಮಾಡುತ್ತದೆ. ಎಕ್ಸಾಮ್ ಇಲ್ಲದೆಯೇ ಮಕ್ಕಳನ್ನು ವಿಂಗಡಿಸಿ ಕೆಲವರನ್ನು ವಿಶೇಷ ತರಬೇತಿಗೆ ಶಿಫಾರಸು ಮಾಡುತ್ತದೆ. ಸೈನ್ಸ್‌ನಲ್ಲಿ ಭಾರೀ ಚುರುಕಾಗಿರುವ ಹತ್ತು ವರ್ಷದ ಮಕ್ಕಳನ್ನು ಹಾರ್ವರ್ಡ್‌ಗೂ ಮೀರಿದ ವಿಶೇಷ ಶಾಲೆಗೆ ಸೇರಿಸಿ ಸಾವಿರಾರು ಐನ್‌ಸ್ಟೀನ್‌ಗಳನ್ನು ರೂಪಿಸಲು ಸಾಧ್ಯವಾದರೆ ಮನುಕುಲಕ್ಕೆ ಒಳ್ಳೆಯದೆಂದು ವಾದಿಸುವವರಿದ್ದಾರೆ. ಐನ್‌ಸ್ಟೀನ್ ಬದಲು ನೂರಾರು ಒಪ್ಪೆನ್‌ಹೀಮರ್‌ಗಳು ರೂಪುಗೊಂಡಾರೆಂದು ದಿಗಿಲು ಹಬ್ಬಿಸಲೂ ಸಾಧ್ಯವಿದೆ.

ಯಾಂಬು ಅನೂಹ್ಯ ವೇಗದಲ್ಲಿ ಹೊಸದನ್ನು ಕಲಿಯುತ್ತಿದೆ. ತಂತಾನೇ ಚಲಿಸುವ ಕಾರೊಂದು ಎಲ್ಲೋ ಚಿಕ್ಕ ಎಡವಟ್ಟು ಮಾಡಿದರೆ, ಅಂಥ ತಪ್ಪನ್ನು ಮತ್ತೊಮ್ಮೆ ಮಾಡದಂತೆ ಜಗತ್ತಿನ ಎಲ್ಲ ಸ್ವಯಂಚಾಲಿತ ಕಾರುಗಳೂ ಏಕಕಾಲಕ್ಕೆ ಹೊಸ ಪಾಠ ಕಲಿಯುತ್ತವೆ. ಅಂಥ ಸಾಮರ್ಥ್ಯ ಮನುಷ್ಯನಿಗಿಲ್ಲ. ಕೃತಕ ಬುದ್ಧಿಮತ್ತೆ ಈಗ ಸ್ವತಃ ಕೋಡಿಂಗ್ ಕೂಡ ಮಾಡುತ್ತ ತನ್ನ ಅಂಗಾಂಗಗಳನ್ನು ತಾನೇ ರೂಪಿಸಿಕೊಳ್ಳುತ್ತ ಬೆಳೆಯುತ್ತಿದೆ. ಅದರ ಫಲ ಏನೆಂದರೆ, ಯಾಂಬು ಸೃಷ್ಟಿಗೆ ಕಾರಣರಾದ ಟೆಕಿಗಳೇ ಸಾಲುಸಾಲಾಗಿ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಕಲಾವಿದರ ಸಹಾಯಕ್ಕೆ ಬಂದು ಕಲಾಕಾರರ ಕೆಲಸವನ್ನೇ ಕಬಳಿಸುತ್ತಿದೆ. ವಾಸ್ತುಶಿಲ್ಪಿಗಳು ರೂಪಿಸಿದ ಕಟ್ಟಡ ವಿನ್ಯಾಸಗಳನ್ನು ನೋಡಿ ಅದು ಇನ್ನೂ ಮಜಬೂತಾದ ಕಟ್ಟಡಗಳ ಡಿಸೈನ್ ಮಾಡುತ್ತಿದ್ದರೆ, ಇನ್ನು ಮುಂದೆ ವಾಸ್ತುಶಿಲ್ಪಿಗಳೇ ಬೇಕಾಗಿಲ್ಲ ಎಂಬಂತಾಗುತ್ತಿದೆ. ಐದು ವರ್ಷಗಳ ವೈದ್ಯಕೀಯ ಶಿಕ್ಷಣವನ್ನು ಐದೇ ದಿನಗಳಲ್ಲಿ ಪಡೆದು ವೈದ್ಯರನ್ನು ತಳ್ಳತೊಡಗಿದೆ. ಮುಂದಿನ ಹೆಜ್ಜೆಯಾಗಿ ಅದು ವಿಜ್ಞಾನಿಗಳನ್ನು, ಸಂಶೋಧಕರನ್ನು ಬಲಿಹಾಕೀತೆ?

ಅದೂ ಸಾಧ್ಯವಿದೆ. ತನಗೇ ಗೊತ್ತಿಲ್ಲದಂತೆ ಅದು ಸುಳ್ಳಿನ ಸರಮಾಲೆಗಳನ್ನು ಸೃಷ್ಟಿಸುತ್ತದೆ. ಅದಕ್ಕೆ ಇಂಗ್ಲಿಷ್‌ನಲ್ಲಿ ಹ್ಯಾಲುಸಿನೇಶನ್ (ಭ್ರಾಂತಿ) ಎನ್ನುತ್ತಾರೆ. ನಮ್ಮಲ್ಲಿ ಕೆಲವರಿಗೆ ಅನಗತ್ಯವಾಗಿ ಸುಳ್ಳು ಹೇಳುವ ಚಟವಿರುತ್ತದೆ. ಇನ್ನು ಕೆಲವರಿಗೆ ನಿದ್ರಾಹೀನತೆ, ಡ್ರಗ್ ಸೇವನೆಯಿಂದ ಭ್ರಾಂತಿ ಉಂಟಾಗುತ್ತದೆ. ಯಾಂಬುಗೆ ಅಂಟಿದ ಈ ಕಾಯಿಲೆಯ ಬಗ್ಗೆ ಸಖತ್ ಚರ್ಚೆ ನಡೆಯುತ್ತಿದೆ. ಚರಿತ್ರೆ, ಭೂಗೋಲ, ಅರ್ಥಶಾಸ್ತ್ರ, ವ್ಯಕ್ತಿ ಚಿತ್ರಗಳಿಗೆ ಸಂಬಂಧಿಸಿದಂತೆ ಯಾಂಬು ನೀಡುವ ಅಂಕಿ ಅಂಶಗಳು ಚಾಟ್‌ಜಿಪಿಟಿಯಲ್ಲಿ ಅಪರಾತಪರಾ ಆಗುವುದು ನಮಗೆಲ್ಲ ಗೊತ್ತಿದೆ. ಅದನ್ನು ನಂಬಿ ಹಿಟ್ ವಿಕೆಟ್ ಮಾಡಿಕೊಂಡ ವಕೀಲರದ್ದೂ ಕತೆಗಳಿವೆ. ಆದರೆ ಅಸ್ತಿತ್ವದಲ್ಲೇ ಇಲ್ಲದ ಒಂದು ವಿಜ್ಞಾನ ಪ್ರಬಂಧವನ್ನು ಯಾಂಬು ತಾನಾಗಿ ಕಲ್ಪಿಸಿಕೊಂಡು ನಮಗೆ ನೀಡಿದರೆ? ಎಲ್ಲರ ಮಿದುಳಿನಲ್ಲಿರುವ ಥ್ಯಾಲಮಸ್ ಎಂಬ ಗ್ರಂಥಿಯ ಬಗ್ಗೆ ಸಂಶೋಧನೆ ಮಾಡಲು ಹೊರಟ ವಿಜ್ಞಾನಿ ರಾಬಿನ್ ಎಮ್‌ಸ್ಲೇ ಎಂಬಾತ ಚಾಟ್‌ಜಿಪಿಟಿಯನ್ನು ನಂಬಿ ತಾನೆಷ್ಟು ಮೋಸ ಹೋದೆ ಎಂದು ಹೇಳಿಕೊಂಡಿದ್ದನ್ನು ಪ್ರತಿಷ್ಠಿತ 'ನೇಚರ್' ಪತ್ರಿಕೆ ಈಚೆಗೆ ಪ್ರಕಟಿಸಿದೆ. ತೀವ್ರ ವಿಷಕಾರಿ ಅಣಬೆಯ ಚಿತ್ರವನ್ನು ನೋಡಿ, ಅದು ರುಚಿಕರ, ಸುರಕ್ಷಿತ ಎಂದು ಯಾಂಬು ಹೇಳಿದ್ದೂ ಇದೆ. 'ಹೌದು ಅದೊಂದು (ಯಾಂತ್ರಿಕ ಭ್ರಾಂತಿ) ದೊಡ್ಡ ಸಮಸ್ಯೆ' ಎಂದು ಖುದ್ದಾಗಿ ಗೂಗಲ್ ಮುಖ್ಯಸ್ಥ ಸುಂದರ್ ಪಿಚ್ಚೈ ಒಪ್ಪಿಕೊಂಡಿದ್ದಾರೆ.

ಯಾಂಬು ಬಲಿಷ್ಠವಾದಷ್ಟೂ ಅದರಿಂದ ಬಡತನ, ರೋಗರುಜಿನ, ಪರಿಸರ ಸಮಸ್ಯೆಗಳೆಲ್ಲ ನೀಗುತ್ತವೆ; ನಾವೆಲ್ಲ ಶತಾಯುಷಿಗಳಾಗುತ್ತೇವೆ ಎಂಬ ವಾದಗಳೆಲ್ಲ ಪೊಳ್ಳೆಂದು ಕಂಪ್ಯೂಟರ್ ವಿಜ್ಞಾನಿ ರೋಜರ್ ಮಾರ್ಶಲ್ ಮೊನ್ನೆ 'ಡೆಕ್ಕನ್ ಹೆರಾಲ್ಡ್'ನಲ್ಲಿ ಬರೆದಿದ್ದಾರೆ. ಬಡತನ, ರೋಗರುಜಿನ ನಿವಾರಣೆಗೆ ಬೇಕಾದ 'ಔಷಧ'ಗಳನ್ನು ಯಾಂಬು ಸೂಚಿಸಬಹುದು. ಆದರೆ ಬಂಡವಾಳ ಹೂಡುವವರು ಯಾರು? ತಮಗೆ ಲಾಭ ತರುವ ಔಷಧಗಳಿಗೆ ಮಾತ್ರ ಹಣ ಸುರಿದು ಕಂಪನಿಗಳು ಹಣವನ್ನು ಮೊಗೆಯುತ್ತವೆ ಎಂದು ಅವರು ವಾದಿಸುತ್ತಾರೆ. ಶತಾಯುಷಿಗಳಾಗಬಲ್ಲ ಔಷಧವನ್ನು ಯಾಂಬು ಸೃಷ್ಟಿಸಿತು ಎಂದಿಟ್ಟುಕೊಳ್ಳಿ. ಕೆಲಸ ಕಳೆದುಕೊಳ್ಳುವ ಅಕ್ಷೋಹಿಣಿ ಜನರೇನು ತಮ್ಮ ಮೊಬೈಲ್‌ನಲ್ಲಿ ಮೂಡಿಬರುವ ಭ್ರಾಮಕ ಥ್ರೀಡಿ ದೃಶ್ಯಗಳ ಮಜ ನೋಡುತ್ತ ದಿನ ನೂಕಬೇಕೆ ಎಂದು ಮಾರ್ಶಲ್ ಕೇಳುತ್ತಾರೆ.

ಶಕ್ತ ರಾಷ್ಟ್ರಗಳು ಹಿಂದೆ ಪರಮಾಣು ಬಾಂಬುಗಳನ್ನು ಪೈಪೋಟಿಯಲ್ಲಿ ನಿರ್ಮಿಸಿದ ಹಾಗೆ, ಹೊಸಹೊಸ ಬಗೆಯ ಯಾಂಬುಗಳನ್ನು ಸೃಷ್ಟಿಸಲೆಂದು ಸರ್ಕಾರಗಳೂ ಖಾಸಗಿ ಕಂಪನಿಗಳೂ ನುಗ್ಗುತ್ತಿವೆ. ತಾನು ಹಿಂದೆ ಬಿದ್ದೇನೆಂಬ ಭಯವೇ ಹೊಸ ಭಯಾನಕ ಪರಿಕರಗಳನ್ನು ಸೃಷ್ಟಿಸುವಂತಾಗಿದೆ. ಬಾಂಬ್‌ಗೂ ಯಾಂಬುಗೂ ವ್ಯತ್ಯಾಸ ಏನೆಂದರೆ, ಬಾಂಬ್ ತಾನಾಗಿ ಇನ್ನೊಂದು ಬಾಂಬನ್ನು ಸೃಷ್ಟಿಸಲಾರದು. ಯಾಂಬು ಹಾಗಲ್ಲ; ಶತಾವತಾರ, ಶತಕೋಟಿ ಅವತಾರ ತಾಳಿ, ಯಾವುದೋ ಒಬ್ಬಂಟಿ ಹ್ಯಾಕರ್‌ನ ಕೈಯಲ್ಲೂ ದುಷ್ಟಾಸ್ತ್ರವಾಗಬಹುದು.

ಜಗತ್ತಿನ ಮುತ್ಸದ್ದಿಗಳೆಲ್ಲ ಸೇರಿ ಇದನ್ನು ತಡೆಯಲು ಸಾಧ್ಯವಿಲ್ಲವೇ? ಬಿಸಿಪ್ರಳಯದ ತುರ್ತು ಸಮಸ್ಯೆಗೂ ಇದೇ ಪ್ರಶ್ನೆ ಎದುರಾಗುತ್ತಿದೆ. ಪ್ರತಿಯೊಬ್ಬ ಮುತ್ಸದ್ದಿಯೂ ತನ್ನ ಪೀಠ, ತನ್ನ ಬೆಂಬಲಿಗ, ತನ್ನ ಪ್ರಜಾಸ್ತೋಮದ ಹಿತಾಸಕ್ತಿಯನ್ನು ಬದಿಗೊತ್ತಿ 'ಲೋಕಾಃ ಸಮಸ್ತಾಃ ಸುಖಿನೋ ಭವಂತು' -ಮನುಕುಲವೇ ಒಂದೆಂಬಂತೆ ಕೆಲಸ ಮಾಡಬೇಕು. ಅಂಥ ವ್ಯಕ್ತಿ ಎಲ್ಲಿದ್ದಾರೆ?

ಆ ಕಾಲ್ಪನಿಕ ಎಕ್ಸ್‌ರೇ ಗಾಗಲನ್ನೇ ಧರಿಸಿ ಹುಡುಕಬೇಕೇನೊ.





## ಚುರುಮುರಿ



### ಸೋಲೋ ಟ್ರಿಪ್!

• ಗುರು ಪಿ.ಎಸ್.

**'ಬೇಗ** ಬೇಗ ನನ್ನ ಲಗೇಜ್ ಎಲ್ಲ ಪ್ಯಾಕ್ ಮಾಡು. ನಾನು ಇವತ್ತು ರಾತ್ರಿಯೇ ಟೂರ್‌ಗೆ ಹೊರಡಬೇಕು' ಹೆಂಡತಿಗೆ ಆದೇಶಿಸಿದೆ.

ಬಸ್-ವಿಮಾನಗಳ ಟಿಕೆಟ್ ದುಬಾರಿ, ರೆಸಾರ್ಟ್‌ಗಳ ರೆಂಟ್ ಹೆಚ್ಚು, ಮನೆಯಲ್ಲಿ ಎಲ್ಲರೂ ಹೊರಟು ನಿಂತರೆ ಖರ್ಚೂ ಅಧಿಕ ಎನ್ನುವ ಕಾರಣ ಮುಂದುಮಾಡಿ, ನಾಲ್ಕೈದು ಬಾರಿ ಟ್ರಿಪ್ ಕ್ಯಾನ್ಸಲ್ ಮಾಡಿದ್ದ ನನ್ನ ಇತಿಹಾಸದ ಅರಿವಿದ್ದ ಪತ್ನಿ ವ್ಯಂಗ್ಯವಾಗಿ ನನ್ನತ್ತ ನೋಡಿದಳು.

'ಏನು ಹಾಗೆ ನೋಡ್ತಿದೀಯಾ? ನಾನು ಲಕ್ಷದ್ವೀಪಕ್ಕೆ ಹೋಗ್ತಿದೀನಿ. ಸೋಲೋ ಟ್ರಿಪ್'.

'ಅಲ್ಲಿಗೆ ಯಾಕೆ? ಫಾರಿನ್ ಟೂರೇ ಮಾಡಬಹುದಲ್ಲ' ಕುಹಕವಾಗಿ ನಕ್ಕಳು ಪತ್ನಿ.

'ಫಾರಿನ್ ಟೂರೇ ಹೋಗಬೇಕಂತಿದ್ದೆ. ಮಾಲ್ದೀವ್ಸ್‌ಗೆ ಹೋಗೋಕೆ ಎಲ್ಲ ಪ್ಲ್ಯಾನೂ ಮಾಡ್ಕೊಂಡಿದ್ದೆ. ಆದರೆ, ಆ ದೇಶದವರಿಗೆ ಎಷ್ಟು ಸೊಕ್ಕು ನೋಡು, ನಮ್ಮ ದೇಶದ ಟೂರಿಸ್ಟ್‌ಗಳ ಮೇಲೆ ಡಿಪೆಂಡ್ ಆಗಿದ್ದವರು ಈಗ ನಮ್ಮ ವಿರುದ್ಧವೇ ಮಾತಾಡ್ತಿದ್ದಾರೆ. 'ಇಂಡಿಯಾ ಫಸ್ಟ್' ಅಂತಿದ್ದವರು ಈಗ 'ಇಂಡಿಯಾ ವರ್ಸ್ಟ್' ಅಂತಿದ್ದಾರೆ. ಅದಕ್ಕೇ ನಾನು ಮಾಲ್ದೀವ್ಸ್ ಟೂರ್ ಬಾಯ್ಕಾಟ್ ಮಾಡಿದ್ದೀನಿ. ನಮ್ಮ ದೇಶದಲ್ಲೇ ಇರುವ ಲಕ್ಷದ್ವೀಪಕ್ಕೆ ಹೋದರೆ ಅದಾದರೂ ಡೆವಲಪ್ ಆಗುತ್ತೆ' ದೇಶಾಭಿಮಾನ ಮೆರೆದೆ.

'ನಿಮಗೊಬ್ಬರಿಗೇ ಏನ್ರೀ ದೇಶಾಭಿಮಾನ, ನಮಗೂ ಇದೆ. ನನ್ನನ್ನ ಮತ್ತು ಮಕ್ಕಳನ್ನ ಕೂಡ ಕರ್ಕೊಂಡು ಹೋಗ್ರಿ' ಹೆಂಡತಿ ದುಂಬಾಲು ಬಿದ್ದಳು.

'ಲಕ್ಷದ್ವೀಪದಲ್ಲಿ ಬೆಡ್‌ಗಳಿಲ್ವಂತೆ ಕಣೆ. ಇದ್ದಿದ್ದರೆ ಎಲ್ಲರೂ ಹೋಗಬಹುದಿತ್ತು'.

'ಬಾಯ್ಮುಚ್ರೀ ಸಾಕು. ನಮ್ಮ ರಾಜ್ಯದಲ್ಲೇ ಇರುವ ಮುರ್ಡೇಶ್ವರ, ಮಲ್ಪೆ, ಕೊಡಗು, ಆಗುಂಬೆ, ಭಟ್ಕಳ, ಚಿಕ್ಕಮಗಳೂರು, ಸಕಲೇಶಪುರದಂತಹ ಚಂದದ ತಾಣಗಳಿಗೇ ಕರ್ಕೊಂಡು ಹೋಗಿಲ್ಲ ನೀವು. ಈಗ ದೊಡ್ಡದಾಗಿ ಭಾಷಣ ಬಿಗೀತಾರೆ' ಹೆಂಡತಿ ರಾಂಗ್ ಆದಳು.

'ನಿಮ್ಮನ್ನು ಬಿಟ್ಟು ಹೋಗೋಕೆ ನನಗೂ ಮನಸ್ಸಿಲ್ಲ ಕಣೆ. ಹೋಗಲಿ ಬಿಡು, ನನ್ನ ಟ್ರಿಪ್ಪೇ ಕ್ಯಾನ್ಸಲ್ ಮಾಡ್ತೀನಿ'.

'ಅದೆಂಥದೋ ಟ್ರಿಪ್ ಅಂದ್ರಲ್ಲ ನೀವು ಆಗ'.

'ಸೋಲೋ ಟ್ರಿಪ್'.

'ನಿಮ್ಮದ್ಯಾವಾಗಲೂ ಸೋಲೋ ಟ್ರಿಪ್ಪೇ!'

---

## ಸಂಗತ

# ತೆರೆದ ಪುಸ್ತಕ ಪರೀಕ್ಷೆ: ಬೇಕು ಸಿದ್ಧತೆ

### ಈ ವಿಧಾನವನ್ನು ವಿದ್ಯಾರ್ಥಿಗಳು ಲಘುವಾಗಿ ಪರಿಗಣಿಸುವ ಸಾಧ್ಯತೆ ಹೆಚ್ಚು

• ಪ್ರೊ. ಬಿ.ಎಸ್.ಶ್ರೀಕಂಠ

**ವಿದ್ಯಾರ್ಥಿಗಳ** ಆತ್ಮಹತ್ಯೆ ತಡೆಯಲು, ಒತ್ತಡ ಕಡಿಮೆ ಮಾಡಲು ಉನ್ನತ ಶಿಕ್ಷಣದಲ್ಲಿ 'ತೆರೆದ ಪುಸ್ತಕ ಪರೀಕ್ಷಾ ಪದ್ಧತಿ' (ಓಪನ್ ಬುಕ್) ಪರಿಚಯಿಸುವಂತೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ.ಜಯಕರ ನೇತೃತ್ವದ ಸಮಿತಿಯು ಸರ್ಕಾರಕ್ಕೆ ಇತ್ತೀಚೆಗೆ ಶಿಫಾರಸು ಮಾಡಿರುವುದು ಗಮನಾರ್ಹ. ಈ ಶಿಫಾರಸು ಶೈಕ್ಷಣಿಕ ವಲಯದಲ್ಲಿ ಚರ್ಚೆಯನ್ನು ಹುಟ್ಟುಹಾಕಿರುವುದು ಸ್ವಾಗತಾರ್ಹ ಬೆಳವಣಿಗೆ.


ಪ್ರಪಂಚದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಈ ಬಗೆಯ ಪರೀಕ್ಷಾ ಪದ್ಧತಿ ಈಗಾಗಲೇ ಚಾಲ್ತಿಯಲ್ಲಿದೆ. ಕೋವಿಡ್ ಕಾಲಘಟ್ಟದಲ್ಲಿ ಮತ್ತು ನಂತರದ ದಿನಗಳಲ್ಲಿ ಆನ್‌ಲೈನ್ ಪರೀಕ್ಷೆ, ಓಪನ್ ಬುಕ್ ಪರೀಕ್ಷೆ ಸಾಮಾನ್ಯವಾಗಿವೆ. ಜ್ಞಾನ, ಕೌಶಲ, ಸಾಮರ್ಥ್ಯದ ಮೂಲಕ ವಿದ್ಯಾರ್ಥಿಯ ಕಲಿಕಾ ಮಟ್ಟವನ್ನು ಮೌಲ್ಯಮಾಪನಕ್ಕೆ ಒಳಪಡಿಸುವ ಪರೀಕ್ಷೆಯ ವಿಧಾನಗಳು ಹಲವಾರು. ಮೌಖಿಕ ಪರೀಕ್ಷೆ, ಮುಚ್ಚು ಪುಸ್ತಕದ ಪರೀಕ್ಷೆ (ನಮ್ಮ ದೇಶದಲ್ಲಿ ಹೆಚ್ಚು ಚಾಲ್ತಿಯಲ್ಲಿದೆ), ಆನ್‌ಲೈನ್ ಪರೀಕ್ಷೆ, ತೆರೆದ ಪುಸ್ತಕದ ಪರೀಕ್ಷೆಯಂತಹ ವಿಧಾನಗಳು ಚಾಲ್ತಿಯಲ್ಲಿವೆ.

ತೆರೆದ ಪುಸ್ತಕದ ಪರೀಕ್ಷಾ ಪದ್ಧತಿಯಲ್ಲಿ, ಪರೀಕ್ಷಾ ಪ್ರಾಧಿಕಾರ ಅನುಮತಿಸಿರುವ ಪುಸ್ತಕಗಳು, ನೋಟ್ಸ್, ಅಧ್ಯಯನ ವಸ್ತುಗಳು, ಕ್ಯಾಲ್ಕ್ಯುಲೇಟರುಗಳಂತಹ ಪೂರಕವಾದ ಸಲಕರಣೆಗಳನ್ನು ಪರೀಕ್ಷಾ ಕೊಠಡಿಗೆ ಒಯ್ಯಬಹುದು ಮತ್ತು ಅವುಗಳ ಸಹಾಯದಿಂದ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಬಹುದು.

ಈಗಿನ ಸಾಂಪ್ರದಾಯಿಕ ಕಲಿಕೆ ಮತ್ತು ಮೌಲ್ಯಮಾಪನ ಪದ್ಧತಿಗೆ ಒಗ್ಗಿಕೊಂಡಿರುವ ಬಹುತೇಕ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರಿಗೆ ಈ ವಿಧಾನ ಕ್ರಾಂತಿಕಾರಕ ಮತ್ತು ಅಸಂಗತ ಎನಿಸುತ್ತದೆ. ಇಂತಹ ಪರೀಕ್ಷೆಯಲ್ಲಿ ಯಾವುದೇ ಅರ್ಥವಿಲ್ಲ, ಕಲಿಕೆಯ ಮೌಲ್ಯಮಾಪನ ಪ್ರಕ್ರಿಯೆಯ ಉದ್ದೇಶವೇ ಈಡೇರುವುದಿಲ್ಲ ಎಂಬ ವಾದವನ್ನು ಕೆಲವರು ಮಂಡಿಸುತ್ತಾರೆ. ಆದರೂ ಈ ಪದ್ಧತಿಯಲ್ಲಿ ಹಲವು ಅನುಕೂಲಗಳನ್ನೂ ಕಾಣಬಹುದು. ಪರಿಕಲ್ಪನಾ ತಿಳಿವಳಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ವಿಶ್ಲೇಷಣಾ ಕೌಶಲಕ್ಕೆ ಈ ಪದ್ಧತಿ ಹೆಚ್ಚು ಒತ್ತು ನೀಡುತ್ತದೆ. ಸೃಜನಶೀಲ ಕಲಿಕೆ ಮತ್ತು ಸಂಶೋಧನೆಯಲ್ಲಿ ಆಸಕ್ತಿಯುಂಟಾಗುವ ಅವಕಾಶ ಇರುತ್ತದೆ. ಇದಕ್ಕೆ ವಿರುದ್ಧವಾಗಿ, ಪ್ರಸಕ್ತ ಪರೀಕ್ಷಾ ಪದ್ಧತಿಯಲ್ಲಿ ವಿಷಯಗಳ ಬಗೆಗಿನ ಜ್ಞಾನ ಮತ್ತು ಗ್ರಹಣ ಶಕ್ತಿಯನ್ನು ಅಳೆಯುವ ಬದಲು, ವಿದ್ಯಾರ್ಥಿಗಳ ಸ್ಮರಣ ಶಕ್ತಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಉತ್ತರಗಳ ಉರು ಹೊಡೆಯುವುದನ್ನು ಉತ್ತೇಜಿಸಲಾಗುತ್ತಿದೆ.

ತೆರೆದ ಪುಸ್ತಕ ಪರೀಕ್ಷಾ ವಿಧಾನದಲ್ಲಿ ಕೆಲವು ಅನನುಕೂಲಗಳಿವೆ. ವಿದ್ಯಾರ್ಥಿಗಳ ಸ್ಮರಣಶಕ್ತಿಯ ಸಂರಕ್ಷಣಾ ಸಾಮರ್ಥ್ಯ ಕುಗ್ಗುತ್ತದೆ. ನಿಯಮಗಳು, ಸೂತ್ರಗಳಂತಹ ಮೂಲಭೂತ ಅಂಶಗಳನ್ನು ಸಹ ಕಂಠಪಾಠ ಮಾಡುವ ಪ್ರಕ್ರಿಯೆ ಕುಂಠಿತವಾಗುತ್ತದೆ. ವಿಷಯಗಳ ಪರಿಕಲ್ಪನೆ ಮತ್ತು ಅನ್ವಯಿಸುವಿಕೆ ಆಧಾರದ ಪ್ರಶ್ನೆಗಳನ್ನು ಕೇಳುವುದರಿಂದ, ವಿದ್ಯಾರ್ಥಿಗಳಲ್ಲಿ ಆತಂಕ ಉಂಟಾಗಬಹುದು. ಸಾಮಾನ್ಯ ಗ್ರಹಿಕೆಯಿರುವ ವಿದ್ಯಾರ್ಥಿಗಳ ಸಾಧನೆಯ ಮಟ್ಟ ಕುಂಠಿತವಾಗಬಹುದು. ವಿದ್ಯಾರ್ಥಿಗಳ ಬಳಿ ಅಧ್ಯಯನ ಸಾಮಗ್ರಿಯಿದ್ದರೂ ಸರಿಯಾದ ಪರೀಕ್ಷಾ ಸಿದ್ಧತೆ ಇಲ್ಲದಿದ್ದಲ್ಲಿ ಉತ್ತರಗಳನ್ನು ಹುಡುಕಲು ಸಾಧ್ಯವಾಗದಿರಬಹುದು ಅಥವಾ ಹೆಚ್ಚು ಕಾಲ ತೆಗೆದುಕೊಳ್ಳಬಹುದು.

ಎಲ್ಲ ಪರೀಕ್ಷಾ ಪದ್ಧತಿಗಳಿಗಿಂತ ಈ ಪರೀಕ್ಷಾ ವಿಧಾನ ಬಹು ಕಠಿಣವಾದದ್ದು. ಹೀಗಿದ್ದರೂ ವಿದ್ಯಾರ್ಥಿಗಳು ಪರೀಕ್ಷೆಯನ್ನು ಲಘುವಾಗಿ ಪರಿಗಣಿಸಬಹುದು ಮತ್ತು ಅತಿಯಾದ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬಹುದು. ಪುಸ್ತಕಗಳನ್ನು ನೋಡಿಕೊಂಡು ಉತ್ತರವನ್ನು ನಕಲು ಮಾಡಬಹುದು ಎಂಬಂತಹ ತಪ್ಪುಕಲ್ಪನೆಯೂ ಇದೆ. ಪುಸ್ತಕಗಳಿಂದ ನೇರವಾಗಿ ಉತ್ತರಗಳನ್ನು ನಕಲು ಮಾಡಿದರೆ ಕೃತಿಚೌರ್ಯ ಶೋಧನೆಗೆ ಒಳಪಡಿಸಲಾಗುತ್ತದೆ ಎಂಬ ಮಾಹಿತಿ ವಿದ್ಯಾರ್ಥಿಗಳಿಗೆ ತಿಳಿದಿಲ್ಲ. ವಾಸ್ತವದಲ್ಲಿ, ಈ ಪದ್ಧತಿಯಲ್ಲಿ ನೇರವಾಗಿ ಉತ್ತರಿಸಬಲ್ಲ ಪ್ರಶ್ನೆಗಳೇ ಇರುವುದಿಲ್ಲ. ಹೀಗಾಗಿ, ಬುದ್ಧಿಶಕ್ತಿ ಬಳಸಿ ಬರೆಯುವ ಸಾಮರ್ಥ್ಯ ಇರಬೇಕಾಗುತ್ತದೆ.



ಈ ಪದ್ಧತಿ ಅಳವಡಿಕೆಗೆ ಮುನ್ನ ಬೋಧನೆ, ಕಲಿಕೆಗೆ ಸಂಬಂಧಿಸಿದಂತೆ ಮೊದಲು ಸುಧಾರಣೆಗಳನ್ನು ತರಬೇಕಾಗುತ್ತದೆ. ಈಗಿನ ಶಿಕ್ಷಕಕೇಂದ್ರಿತ ಕಲಿಕಾ ವಿಧಾನವು ವಿದ್ಯಾರ್ಥಿಕೇಂದ್ರಿತ ಆಗಬೇಕಾಗುತ್ತದೆ. ವಿದ್ಯಾರ್ಥಿಗಳು ವಿಷಯಗಳನ್ನು ಅರ್ಥ ಮಾಡಿಕೊಂಡು ಅಭ್ಯಾಸ ಮಾಡಬೇಕಾಗುತ್ತದೆ. ಪ್ರಶ್ನೆಪತ್ರಿಕೆಗಳ ಮಾದರಿಯಲ್ಲಿಯೂ ಸುಧಾರಣೆ ಅವಶ್ಯ. ಉರು ಹೊಡೆದು ಬರೆಯಬಹುದಾದಂತಹ ಪ್ರಶ್ನೆಗಳಿಗೆ ಬದಲಾಗಿ, ಪರಿಕಲ್ಪನಾ ತಿಳಿವಳಿಕೆಯನ್ನು ಅಳೆಯುವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಉದಾಹರಣೆಗೆ, 'ನ್ಯೂಟನ್ ಚಲನೆಯ ನಿಯಮಗಳನ್ನು ಬರೆಯಿರಿ' ಎಂಬ ನೇರ ಪ್ರಶ್ನೆಗೆ ಬದಲು, ಈ ನಿಯಮಗಳನ್ನು ಆಧರಿಸಿದ ಸಮಸ್ಯೆಗಳನ್ನು ಬಿಡಿಸಲು ಕೇಳಬೇಕು. ನ್ಯೂಟನ್ ಚಲನೆಯ ನಿಯಮಗಳ ಹಿಂದೆ ಇರುವ ತತ್ವಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದರೆ ಮಾತ್ರ ಸಮಸ್ಯೆಗಳನ್ನು ಬಿಡಿಸಲು ಸಾಧ್ಯವಾಗುತ್ತದೆ.

ಸೂಕ್ತ ಸಿದ್ಧತೆ ಮಾಡಿಕೊಂಡು, ನೂತನ ಪರೀಕ್ಷಾ ಪದ್ಧತಿಯನ್ನು ಅನುಷ್ಠಾನಗೊಳಿಸಿದರೆ ಯಶಸ್ಸು ಕಾಣಬಹುದು. ತಕ್ಷಣವೇ ಜಾರಿ ಮಾಡಿದರೆ, ಶಿಕ್ಷಣದ ಗುಣಮಟ್ಟ ಕಡಿಮೆಯಾಗಿ ನಕಾರಾತ್ಮಕ ಪರಿಣಾಮಗಳು ಹೆಚ್ಚಾಗುತ್ತವೆ. ಮತ್ತೊಂದು ವಿಷಯವೆಂದರೆ, ತೆರೆದ ಪುಸ್ತಕದ ವಿಧಾನದಲ್ಲಿಯೂ ಕಲಿಕೆಯಲ್ಲಿ ಆಸಕ್ತಿಯಿಲ್ಲದಿರುವ ವಿದ್ಯಾರ್ಥಿಗಳು ಅನುತ್ತೀರ್ಣರಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ, ಉತ್ತಮ ಪರಿಣಾಮಗಳನ್ನು ಕಾಣಬೇಕೆಂದಾದರೆ ಆತುರದ ನಿರ್ಧಾರ ಸಲ್ಲದು.

ಲೇಖಕ: ನಿವೃತ್ತ ನಿರ್ದೇಶಕ ಹಾಗೂ ಪ್ರಾಂಶುಪಾಲ ಸಿಂಧಿ ಕಾಲೇಜು, ಬೆಂಗಳೂರು

---

## ವಾಚಕರ ವಾಣಿ

### ತತ್ವಪದ ಅಧ್ಯಯನ: ಪ್ರಾಧಿಕಾರ ರಚನೆಯಾಗಲಿ

ಸುದೀರ್ಘ ಇತಿಹಾಸವುಳ್ಳ ಕನ್ನಡ ಸಾಹಿತ್ಯದಲ್ಲಿ ವಚನ ಮತ್ತು ಕೀರ್ತನೆಗಳ ನಂತರ ಅತ್ಯಂತ ವಿಸ್ತಾರವಾದ ಮೊತ್ತವೆಂದರೆ ತತ್ವಪದಗಳದ್ದು. ನಾಥ, ಆರೂಢ, ಅವಧೂತ, ಶರಣ, ಶಾಕ್ತ, ಸೂಫಿ, ಸಿದ್ಧ, ಅಚಲ, ಆಜೀವಿಕ ಹೀಗೆ ಭಾರತದಲ್ಲಿ ಅನುಸಂಧಾನಗೊಳ್ಳುತ್ತಿರುವ ಎಲ್ಲ ತಾತ್ವಿಕ ಧಾರೆಗಳಿಂದ ಬಂದವರು ತತ್ವಪದಗಳನ್ನು ಬರೆದು, ಕನ್ನಡ ಬದುಕು ಮತ್ತು ಸಾಹಿತ್ಯ ಎರಡನ್ನೂ ಸಮೃದ್ಧಗೊಳಿಸಿದ್ದಾರೆ. ಇಂಥ ತತ್ವಪದಕಾರರು ಮತ್ತು ತತ್ವಪದಗಳನ್ನು ಕನ್ನಡ ಸಾಹಿತ್ಯ ಲೋಕ ಗಮನಿಸಿಯೇ ಇರಲಿಲ್ಲ. ಹಲವು ಪ್ರಯಾಸ, ಪ್ರಯತ್ನಗಳ ಮೂಲಕ ಪ್ರಥಮ ಬಾರಿಗೆ 2017ರಲ್ಲಿ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ತತ್ವಪದಗಳನ್ನು ಸಂಗ್ರಹಿಸಿ, ಸಂಪಾದಿಸಿ ಪ್ರಕಟ ಮಾಡಲಾಗಿದೆ. ಸುಮಾರು 51 ಸಂಪುಟಗಳಲ್ಲಿ ಸಾವಿರಾರು ಪದಗಳು ಅಡಕಗೊಂಡಿವೆ.

ಇದು ತತ್ವಪದಗಳ ಆರಂಭದ ಬಿಂದು. ಅವುಗಳ ಅಧ್ಯಯನ, ಅನುಸಂಧಾನ ಇನ್ನು ಮುಂದೆ ಶುರುವಾಗಬೇಕಿದೆ. ಗುರುಮಾರ್ಗಿ ಸಾಧಕರಲ್ಲಿ ಹಾಡಿಗೆ, ತತ್ವಾನುಸಂಧಾನಕ್ಕೆ, ವಾಗ್ವಾದಗಳಿಗೆ ವಿಸ್ತರಿಸಿಕೊಂಡಿರುವ ಈ ಬಹು ಆಯಾಮಿ ಚಲನೆಗಳ ಕುರಿತು ಅಧ್ಯಯನ, ಅನ್ಯಜ್ಞಾನ ಶಿಸ್ತುಗಳೊಂದಿಗೆ ತೌಲನಿಕತೆ ಹೀಗೆ ಏನೆಲ್ಲ ಕೆಲಸಗಳು ಆಗಬೇಕಿವೆ. ಇದು ಯಾವುದೇ ವ್ಯಕ್ತಿ ಅಥವಾ ಖಾಸಗಿ ಸಂಘ ಸಂಸ್ಥೆಗಳಿಂದ ಆಗುವಂಥದ್ದಲ್ಲ. ಆದ್ದರಿಂದ ನಮ್ಮ ಸರ್ಕಾರ ಇದಕ್ಕಾಗಿಯೇ ಪ್ರಾಧಿಕಾರವೊಂದನ್ನು ಸ್ಥಾಪಿಸಬೇಕೆಂಬುದು ಬಹು ದಿನಗಳ ಒತ್ತಾಯವಾಗಿದೆ. ಈಗಾಗಲೇ ಈ ಕುರಿತು ವಿದ್ವಾಂಸರು ಹತ್ತಾರು ಪತ್ರ ವ್ಯವಹಾರಗಳನ್ನು ಮಾಡಿದ್ದಾರೆ. ಆದರೂ ಸರ್ಕಾರ ಗಮನಹರಿಸದಿರುವುದು ಖೇದದ ಸಂಗತಿ. ಇನ್ನಾದರೂ ಅದು ತಕ್ಷಣ ಈ ಕೆಲಸ ಮಾಡಲು ಮುಂದಾಗಬೇಕು.

**ಮೀನಾಕ್ಷಿ ಬಾಳಿ**, ಕಲಬುರಗಿ

### ಮುಚ್ಚಿಹೋದ ಸಂಗತಿಗಳು ಎಷ್ಟೋ...

'ನಿಮ್ಮನ್ನು ಬಿಟ್ಟುಕೊಳ್ಳದ ದೇವಾಲಯಕ್ಕೆ ಹೋಗಿ ಗುಲಾಮರಾಗುವುದಕ್ಕಿಂತ, ಗ್ರಂಥಾಲಯಗಳಿಗೆ ಹೋಗಿ ವಿದ್ವಾಂಸರಾಗಿ' ಎಂಬ ಅಂಬೇಡ್ಕರ್ ಅವರ ಮಾತು ಈಗಲೂ ಪ್ರಸ್ತುತ. ಹೌದು, ಒಬ್ಬ ದಲಿತ ವ್ಯಕ್ತಿ ದೇವಾಲಯದ ಒಳಗೆ ಪ್ರವೇಶ ಮಾಡಿದ ಕಾರಣಕ್ಕೆ ಆ ವ್ಯಕ್ತಿಗೆ ಥಳಿಸಿ ದಂಡ ಕಟ್ಟಿಸಿದ್ದನ್ನು, ದಲಿತರು ಪ್ರವೇಶಿಸಿದರು ಎಂಬ ಕಾರಣಕ್ಕೆ ಹೊಸ ದೇವಾಲಯವನ್ನೇ ನಿರ್ಮಿಸಲು ಮುಂದಾಗಿರುವುದನ್ನು ನೋಡುತ್ತಿದ್ದೇವೆ. ಕಣ್ಣಿಗೆ ಕಂಡದ್ದು ಇಷ್ಟು ಮಾತ್ರ, ಕಾಣದೇ ಮುಚ್ಚಿಹೋದ ಸಂಗತಿಗಳು ಇನ್ನೆಷ್ಟೋ. ಸಂವಿಧಾನ ಜಾರಿಗೆ ಬಂದು ಏಳು ದಶಕಗಳು ಉರುಳಿದರೂ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಇನ್ನೂ ಜೀವಂತವಾಗಿರುವುದು ಖಂಡನೀಯ.

**ಮಹದೇವಸ್ವಾಮಿ ಕೆ.ಎಸ್.**, ಮೈಸೂರು

### ಯುವನಿಧಿ: ರಂಗಶಿಕ್ಷಣ ಪರಿಗಣಿಸಿ

ನಿರುದ್ಯೋಗಿ ಯುವಜನರಿಗಾಗಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಯುವನಿಧಿ ಯೋಜನೆಯ ಫಲಾನುಭವಿಗಳು ಪದವಿ, ಡಿಪ್ಲೊಮಾ ಉತ್ತೀರ್ಣರಾದ ವಿದ್ಯಾರ್ಥಿಗಳು ಎಂದು ಘೋಷಿಸಲಾಗಿದೆ. ಡಿಪ್ಲೊಮಾ ಎಂದು ಸೂಚಿಸುವಾಗ ತಾಂತ್ರಿಕ ಶಿಕ್ಷಣ ಪಡೆದವರು ಎಂದು ಮೇಲ್ನೋಟಕ್ಕೆ ಗೋಚರವಾಗುತ್ತದೆ. ಆದರೆ ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ ರಂಗಶಿಕ್ಷಣದಲ್ಲಿ ಡಿಪ್ಲೊಮಾ ಪಡೆದ ನೂರಾರು ವಿದ್ಯಾರ್ಥಿಗಳು ಇದ್ದಾರೆ. ರಾಜ್ಯದ ಹಲವಾರು ರಂಗಶಿಕ್ಷಣ ಕೇಂದ್ರಗಳಿಂದ ತರಬೇತಿ ಪಡೆದು ಬಂದ ಇವರಿಗೆ ಯಾವುದೇ ಸೇವಾ ಭದ್ರತೆಯಾಗಲೀ ಸರ್ಕಾರಿ ಕೆಲಸದ ಗ್ಯಾರಂಟಿಯಾಗಲೀ ಇಲ್ಲ. ಅಲ್ಲದೆ ಈ ವಿದ್ಯಾರ್ಥಿಗಳಲ್ಲಿ ರಂಗಭೂಮಿಯನ್ನೇ ನಂಬಿ ಬದುಕುವ ಹಂಬಲ ಇಟ್ಟುಕೊಂಡವರು ಬಹಳಷ್ಟು ಮಂದಿ ಇದ್ದಾರೆ.

ಶಿಕ್ಷಣ ಇಲಾಖೆಯಲ್ಲಿ ರಂಗಶಿಕ್ಷಕರನ್ನು ನೇಮಿಸಿಕೊಂಡು ಈಗಾಗಲೇ 15 ವರ್ಷಗಳು ಕಳೆದುಹೋಗಿವೆ. ರಂಗಶಿಕ್ಷಕರ ನೇಮಕ ಮತ್ತೆ ಎಂದು ಆಗುವುದೋ ಎನ್ನುವುದರ ಬಗ್ಗೆ ಸೂಚನೆ ಕೂಡ ಇಲ್ಲ. ಹಾಗಾಗಿ, ರಂಗಭೂಮಿಯಲ್ಲಿ ಡಿಪ್ಲೊಮಾ ಪಡೆದ ವಿದ್ಯಾರ್ಥಿಗಳನ್ನೂ ಯುವನಿಧಿ ಯೋಜನೆಗೆ ಪರಿಗಣಿಸುವ ಮೂಲಕ ಅವರ ಜೀವನೋಪಾಯಕ್ಕೆ ಸರ್ಕಾರ ಒತ್ತಾಸೆಯಾಗಿ ನಿಲ್ಲಲಿ.

**ಶಶಿಧರ ಭಾರಿಘಾಟ್**, ಬೆಂಗಳೂರು

### ರಾಮಮಂದಿರ: ಕಾಂಗ್ರೆಸ್ ಸ್ಪಂದಿಸಲಿ

ಅಯೋಧ್ಯೆಯಲ್ಲಿ ಇದೇ 22ರಂದು ನಡೆಯುವ ರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಶ್ರೀ ರಾಮಜನ್ಮಭೂಮಿ ಟ್ರಸ್ಟ್ ನೀಡಿದ ಆಹ್ವಾನವನ್ನು ಕಾಂಗ್ರೆಸ್ ಪಕ್ಷ ತಿರಸ್ಕರಿಸಿರುವುದು ಸರಿಯಲ್ಲ. ವಾಸ್ತವದಲ್ಲಿ, ಬಹುಕಾಲ ನನೆಗುದಿಗೆ ಬಿದ್ದಿದ್ದ ರಾಮಮಂದಿರದ ಬೀಗವನ್ನು 1986ರಲ್ಲಿ ತೆರೆದಿದ್ದೇ ಅಂದಿನ ಪ್ರಧಾನಿ, ಕಾಂಗ್ರೆಸ್‌ನ ರಾಜೀವ್ ಗಾಂಧಿ ಅವರು ಎಂಬುದು ಕಾಲಗರ್ಭದಲ್ಲಿ ಹುದುಗಿಹೋಗಿರುವ ಸತ್ಯ. ಆ ದಿನಗಳಲ್ಲಿ ಬಿಜೆಪಿಯು ರಾಮ ಮಂದಿರದ ಬಗ್ಗೆ ಅಂತಹ ಆಸಕ್ತಿಯನ್ನೇ ಹೊಂದಿರಲಿಲ್ಲ. ಇದಾದ ಕೆಲ ವರ್ಷಗಳ ಮೇಲೆ ಆ ಪಕ್ಷದ ನೇತಾರ ಎಲ್.ಕೆ.ಅಡ್ವಾಣಿ ಅವರು ದೇಶದ ಬಹುಭಾಗಗಳಲ್ಲಿ ದೀರ್ಘವಾದ ರಥಯಾತ್ರೆಯನ್ನು ನಡೆಸಿದ್ದೇನೋ ನಿಜ. ಆದರೆ, ಈ ಯಾತ್ರೆಯನ್ನು ಮುನ್ನಡೆಸುವಂತೆ ಇದಕ್ಕಿಂತ ಮೊದಲು ಅಟಲ್ ಬಿಹಾರಿ ವಾಜಪೇಯಿ ಅವರನ್ನು ಕೋರಲಾಗಿತ್ತು. ಆಗ ಅವರು, 'ಒಂದು ದೇವಸ್ಥಾನಕ್ಕಾಗಿ ಹೋರಾಡುವುದು ರಾಷ್ಟ್ರೀಯ ರಾಜಕೀಯ ಪಕ್ಷವೊಂದರ ಕೆಲಸವಲ್ಲ' ಎಂದಿದ್ದರು. ಬದಲಾದ ವಿದ್ಯಮಾನಗಳಲ್ಲಿ, ರಾಮಮಂದಿರದ ರಾಜಕೀಯ ಲಾಭವನ್ನು ಪಡೆದುಕೊಳ್ಳಲು ಕಾಂಗ್ರೆಸ್ ಕೈಚೆಲ್ಲಿತು. ಆದರೆ ಸಿಕ್ಕಿದ ಅವಕಾಶವನ್ನು ಬಿಜೆಪಿ ಬಾಚಿಕೊಂಡಿತು. ಸಮಕಾಲೀನ ರಾಜಕೀಯ ಚರಿತ್ರೆ ತಿಳಿದಿರುವ ಎಲ್ಲರಿಗೂ ಇದು ಗೊತ್ತಿದೆ.

ಶ್ರೀರಾಮ ಯಾವೊಂದು ಪಕ್ಷದ ಸ್ವತ್ತೂ ಅಲ್ಲ. ಶ್ರೀರಾಮ, ನಮ್ಮ ಸಮಾಜವು ಸಾವಿರಾರು ವರ್ಷಗಳಿಂದ ನಂಬಿಕೊಂಡು ಬಂದಿರುವ ಏಕಪತ್ನೀವ್ರತ, ಪಿತೃವಾಕ್ಯ ಪರಿಪಾಲನೆ, ಪ್ರಜಾಕಲ್ಯಾಣ, ಧರ್ಮಸಂರಕ್ಷಣೆ, ಲೋಕಹಿತ, ಪರೋಪಕಾರದಂತಹವುಗಳ ಮೂಲಪುರುಷ. ಭಾರತೀಯರೆಲ್ಲರೂ ಈ ಮರ್ಯಾದಾ ಪುರುಷೋತ್ತಮನನ್ನು ಇವುಗಳ ಬೆಳಕಿನಲ್ಲೇ ನೋಡುತ್ತ ಬಂದಿದ್ದಾರೆ. ಚುನಾವಣೆ ಬಂದಾಗ ಮಾತ್ರ 'ನಾವೂ ಹಿಂದೂಗಳೇ, ನಾವೂ ರಾಮನ ಭಕ್ತರೇ' ಎನ್ನುವ ಬದಲು, ಈಗ ಕಾಂಗ್ರೆಸ್ ಪಕ್ಷವು ಭಾರತೀಯರ ಈ ನಂಬಿಕೆಯನ್ನು ಗೌರವಿಸಿ, ಅದಕ್ಕೆ ಸ್ಪಂದಿಸಬೇಕು. ಇಲ್ಲದೇಹೋದರೆ, ತನ್ನನ್ನು ಹಣಿಯಲು ಅದೇ ಎದುರಾಳಿಗಳ ಕೈಗೆ ಇನ್ನೊಂದು ಅಸ್ತ್ರವನ್ನು ಅದು ಕೊಟ್ಟಂತಾಗುತ್ತದೆ. ಜೊತೆಗೆ ಜನರ ಅನಾದರಕ್ಕೆ ತುತ್ತಾಗುವ ಅಪಾಯವನ್ನು ಮೈಮೇಲೆ ಎಳೆದುಕೊಳ್ಳಬಹುದಷ್ಟೆ. ಹೀಗಾಗಿ, ಅದು ತನ್ನ ಸಂಕುಚಿತ ಲೆಕ್ಕಾಚಾರ ಮತ್ತು ವೋಟ್ ಬ್ಯಾಂಕ್ ಆಸೆಯನ್ನು ಮೀರಿ ವರ್ತಿಸಲಿ.

**ಬಿ.ಎಸ್.ಜಯಪ್ರಕಾಶ ನಾರಾಯಣ**, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಗಣರಾಜ್ಯೋತ್ಸವ ಮೆರವಣಿಗೆ ಸ್ತಬ್ಧಚಿತ್ರಗಳ ಆಯ್ಕೆಯ ಸುತ್ತ

ಪ್ರಜಾವಾಣಿ ವಾರ್ತೆ

**ಗಣರಾಜ್ಯೋತ್ಸವದಂದು** ವಿವಿಧ ರಾಜ್ಯಗಳ ಸ್ತಬ್ಧಚಿತ್ರ ಪ್ರದರ್ಶನವು ನಡೆಯುತ್ತದೆ. ಸಾವಿರಾರು ಜನರ ಎದುರು ರಾಜ್ಯವೊಂದು ಸ್ತಬ್ಧಚಿತ್ರದ ಮೂಲಕ ತನ್ನ ಸಂಸ್ಕೃತಿ, ಇತಿಹಾಸ, ಕಲೆಗಳನ್ನು ಪರಿಚಯಿಸುತ್ತದೆ. ರಾಜ್ಯವೊಂದಕ್ಕೆ ಇದೊಂದು ಅಸ್ಮಿತೆಯೂ ಹೌದು. ಮೆರವಣಿಗೆಯಲ್ಲಿ ಭಾಗವಹಿಸುವುದು ರಾಜ್ಯವೊಂದಕ್ಕೆ ಗೌರವವೂ ಹೌದು.

ಆದರೆ, ಈಗ ಕೆಲವು ವರ್ಷಗಳಿಂದ ಕೆಲವು ರಾಜ್ಯಗಳಿಗೆ ಮೆರವಣಿಗೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಸಿಕ್ಕಿಲ್ಲ. 'ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಿಗೇ ಅವಕಾಶ ನಿರಾಕರಿಸಲಾಗುತ್ತಿದೆ. ಅವಕಾಶ ನೀಡುವುದರಲ್ಲಿಯೂ ರಾಜಕೀಯ ಮಾಡಲಾಗುತ್ತಿದೆ' ಎನ್ನುವುದು ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳ ಗಂಭೀರ ಆರೋಪ. 2024ರಲ್ಲಿಯೂ ಗಣರಾಜ್ಯೋತ್ಸವ ಮೆರವಣಿಗೆ ಅವಕಾಶ ನೀಡುವ ಸಂಬಂಧ ವಿವಾದ ಭುಗಿಲೆದ್ದಿದೆ.

ಬಿಜೆಪಿತೇಯರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯ ಸರ್ಕಾರಗಳ ಆರೋಪಗಳನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ನಿರಾಕರಿಸುತ್ತಲೇ ಬಂದಿದೆ. ಮೆರವಣಿಗೆಯಲ್ಲಿ ಯಾವ ರಾಜ್ಯದ ಸ್ತಬ್ಧಚಿತ್ರ ಭಾಗವಹಿಸಬೇಕು ಅಥವಾ ಭಾಗವಹಿಸಬಾರದು ಎಂಬುದನ್ನು ಸರ್ಕಾರದ ಯಾವುದೇ ಇಲಾಖೆ ಅಥವಾ ಸಚಿವಾಲಯವು ನಿರ್ಧರಿಸುವುದಿಲ್ಲ. ಬದಲಿಗೆ, ತಜ್ಞರ ಸಮಿತಿಯೊಂದು ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತದೆ ಎನ್ನುತ್ತದೆ ಕೇಂದ್ರ ಸರ್ಕಾರ.

2023ರ ಡಿಸೆಂಬರ್ ಅಂತ್ಯದ ಹೊತ್ತಿಗೆ ವಿವಾದವು ಆರಂಭಗೊಂಡಿತು. ಒಂದಾದ ಮೇಲೊಂದು ರಾಜ್ಯದ ಸ್ತಬ್ಧಚಿತ್ರಗಳಿಗೆ ಅವಕಾಶ ನಿರಾಕರಿಸಿರುವುದು ಸಾರ್ವಜನಿಕವಾಗುತ್ತಾ ಬಂತು. ದೆಹಲಿ, ಪಂಜಾಬ್, ಪಶ್ಚಿಮ ಬಂಗಾಳದ ಸ್ತಬ್ಧಚಿತ್ರಗಳಿಗೆ ಮೆರವಣಿಗೆಯಲ್ಲಿ ಭಾಗವಹಿಸಲು ಅವಕಾಶವನ್ನು ನಿರಾಕರಿಸಲಾಗಿದೆ. ಈಗ ಈ ಪಟ್ಟಿಗೆ ಕರ್ನಾಟಕವು ಸೇರಿದೆ. ಈ ರಾಜ್ಯಗಳಲ್ಲೇ ವಿವಾದ ಸೃಷ್ಟಿಯಾಗಿದೆ.

ತಜ್ಞರ ಸಮಿತಿ ಮೇಲ್ವಿಚಾರಣೆಯಲ್ಲಿ ಹಲವು ಹಂತಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ಪ್ರತೀ ಹಂತದಲ್ಲೂ ಕೆಲವು ರಾಜ್ಯಗಳ ಸ್ತಬ್ಧಚಿತ್ರವು ಪ್ರಕ್ರಿಯೆಯಿಂದ ಹೊರಗುಳಿಯುತ್ತದೆ. ಹೀಗೆ ಯಾವ ರಾಜ್ಯದ ಸ್ತಬ್ಧಚಿತ್ರವು ಆಯ್ಕೆ ಪ್ರಕ್ರಿಯೆಯಿಂದ ಹೊರಗುಳಿಯಿತು ಎಂದು ಕೇಂದ್ರ ಸರ್ಕಾರವು ಸಂಬಂಧಿಸಿದ ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಬೇಕಿಲ್ಲ ಎನ್ನುವುದು ನಿಯಮ. ಇದೇ ಪ್ರಥಮ ಬಾರಿಗೆ, ಆಯ್ಕೆ ಪ್ರಕ್ರಿಯೆಯಿಂದ ಹೊರಬಿದ್ದ ಅಥವಾ ಆಯ್ಕೆಯಾಗದೆ ಉಳಿದ ರಾಜ್ಯಗಳ ಸ್ತಬ್ಧಚಿತ್ರಗಳನ್ನು ಕೆಂಪು ಕೋಟೆಯ ಭಾರತ ಪರ್ವದಲ್ಲಿ ಜನವರಿ 23–31ರವರೆಗೆ ಪ್ರದರ್ಶನಕ್ಕೆ ಇಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರವು ತಿಳಿಸಿದೆ. ಈ ಪ್ರದರ್ಶನದಲ್ಲಿ ಭಾಗವಹಿಸುವಂತೆ ಆಯ್ಕೆ ಪ್ರಕ್ರಿಯೆಯಿಂದ ಹೊರಬಿದ್ದ ರಾಜ್ಯದ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಮಾಹಿತಿ ನೀಡಿದೆ.

ಈ ಕಾರಣಕ್ಕಾಗಿ ಪಂಜಾಬ್, ಪಶ್ಚಿಮ ಬಂಗಾಳ, ದೆಹಲಿಗೆ ತಮ್ಮ ಸ್ತಬ್ಧಚಿತ್ರವು ಆಯ್ಕೆ ಪ್ರಕ್ರಿಯೆಯಿಂದ ಹೊರಗುಳಿದ ಮಾಹಿತಿ ಸಿಕ್ಕಿದೆ. ನಂತರದಲ್ಲಿ, ಈ ಬಗ್ಗೆ ಪಂಜಾಬ್, ದೆಹಲಿ ಸರ್ಕಾರವು ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದವು. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಕ್ಸ್'ನಲ್ಲಿ ರಾಜ್ಯದ ಸ್ತಬ್ಧಚಿತ್ರವು ಆಯ್ಕೆ ಪ್ರಕ್ರಿಯೆಯಿಂದ ಹೊರಬಿದ್ದಿದೆ ಎಂದು ಮಾಹಿತಿ ಹಂಚಿಕೊಂಡಿದ್ದರು.




2020ರ ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಕರ್ನಾಟಕದ ಸ್ತಬ್ಧಚಿತ್ರ

## ಕೇಂದ್ರ ಹೇಳುವುದೇನು?

ಕೇಂದ್ರಾಡಳಿತ ಪ್ರದೇಶಗಳು ಹಾಗೂ 30 ರಾಜ್ಯಗಳು ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ ಭಾಗವಹಿಸುವುದಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸಿವೆ. 'ಈ ಪೈಕಿ ಕೇಂದ್ರಾಡಳಿತ ಪ್ರದೇಶಗಳು ಹಾಗೂ 16 ರಾಜ್ಯಗಳ ಸ್ತಬ್ಧಚಿತ್ರಗಳು ಮಾತ್ರವೇ ಮೆರವಣಿಗೆಯಲ್ಲಿ ಭಾಗವಹಿಸಲು ಆಯ್ಕೆಯಾಗಿವೆ' ಎಂದು ಕೇಂದ್ರ ರಕ್ಷಣಾ ಸಚಿವಾಲಯ ಹೇಳಿಕೆಯೊಂದರಲ್ಲಿ ತಿಳಿಸಿದೆ.

ಪ್ರತೀ ಬಾರಿಯು ಸ್ತಬ್ಧಚಿತ್ರದ ಮೆರವಣಿಗೆ ಥೀಮ್ ಅನ್ನು ಆಯ್ಕೆ ಮಾಡಲಾಗುತ್ತದೆ. 'ಪ್ರಜಾಪ್ರಭುತ್ವದ ತಾಯಿ' ಈ ಬಾರಿಯ ಥೀಮ್. ಪಂಜಾಬ್ ಹಾಗೂ ಪಶ್ಚಿಮ ಬಂಗಾಳದ ಸ್ತಬ್ಧಚಿತ್ರಗಳು ಥೀಮ್‌ಗೆ ಅನುಗುಣವಾಗಿಲ್ಲ ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ. ದೆಹಲಿಯ ಸ್ತಬ್ಧಚಿತ್ರಕ್ಕೆ ಯಾಕಾಗಿ ಅವಕಾಶ ನಿರಾಕರಿಸಲಾಗಿದೆ ಎಂಬುದು ತಿಳಿದುಬಂದಿಲ್ಲ.

'ಎಲ್ಲ ರಾಜ್ಯಗಳಿಗೂ ಸಮಾನ ಅವಕಾಶ ನೀಡಬೇಕು. ಒಂದು ನಿಯಮಾನುಸಾರವಾಗಿ ಎಲ್ಲರಿಗೂ ಮೆರವಣಿಗೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕಾಗುತ್ತದೆ. ಅದಕ್ಕಾಗಿ 'ಮೂರು ವರ್ಷ ಯೋಜನೆ' ಎಂಬ ಕಾರ್ಯಕ್ರಮವನ್ನು ಜಾರಿಗೆ ತರುವ ಬಗ್ಗೆ ಸರ್ಕಾರವು ಚಿಂತನೆ ನಡೆಸಿದೆ. ಈ ಕುರಿತು ಸದ್ಯದಲ್ಲಿಯೇ ಮಾಹಿತಿಯನ್ನು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಜೊತೆಯೂ ಹಂಚಿಕೊಳ್ಳಲಾಗುವುದು' ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಆಧಾರ: ಗಣರಾಜ್ಯೋತ್ಸವ ಸ್ತಬ್ಧಚಿತ್ರ ಮಾರ್ಗಸೂಚಿ, ಪಿಟಿಐ

## ಕಲಾವಿದರೆಷ್ಟು?

ಸ್ತಬ್ಧಚಿತ್ರಗಳನ್ನು ಹೊತ್ತ ವಾಹನದ ಮೇಲೆ ಇರುವ ಕಲಾವಿದರ ಸಂಖ್ಯೆಗೆ ಈ ಮೊದಲು 10ರ ಮಿತಿ ಇತ್ತು. ಆದರೆ, ವಾಹನದ ಜೊತೆಗೆ ನಡಿಗೆಯಲ್ಲಿ ಇರಬಹುದಾದ ಕಲಾವಿದರ ಸಂಖ್ಯೆಗೆ 25ರ ಮಿತಿ ಇತ್ತು. ಅಂದರೆ ಒಟ್ಟು ಕಲಾವಿದರ ಸಂಖ್ಯೆ 35ರವರೆಗೆ ಇರಲು ಅವಕಾಶವಿತ್ತು. ಸ್ತಬ್ಧಚಿತ್ರದೊಂದಿಗೆ ಜಾನಪದ ನೃತ್ಯವನ್ನು ಪ್ರದರ್ಶಿಸುವಂತಿದ್ದರೆ ಮಾತ್ರ, ವಾಹನದ ಜೊತೆಗೆ ನಡಿಗೆಯಲ್ಲಿ ಕಲಾವಿದರು ಇರಲು ಅವಕಾಶವಿತ್ತು. ಈ ಬಾರಿಯ ಸ್ತಬ್ಧಚಿತ್ರ ನಿಯಮಗಳಲ್ಲಿ ಈ ನಿಯಮಗಳಿಗೆ ತುಸು ಬದಲಾವಣೆ ತರಲಾಗಿದೆ.

ಸ್ತಬ್ಧಚಿತ್ರಗಳನ್ನು ಹೊತ್ತ ವಾಹನದ ಮೇಲೆ ಗರಿಷ್ಠ 12 ಕಲಾವಿದರು ಇರಬಹುದು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ. ಇನ್ನು ಸ್ತಬ್ಧಚಿತ್ರದೊಂದಿಗೆ ಜಾನಪದ ನೃತ್ಯವನ್ನು ಪ್ರದರ್ಶಿಸುವಂತಿದ್ದರೆ ಕಲಾವಿದರನ್ನು ಬಳಸಿಕೊಳ್ಳಬಹುದು ಎಂದು ಹೇಳಲಾಗಿದೆ. ಆದರೆ ಎಷ್ಟು ಕಲಾವಿದರನ್ನು ಹಾಗೆ ಬಳಸಿಕೊಳ್ಳಬಹುದು ಎಂಬುದನ್ನು ಸ್ಪಷ್ಟವಾಗಿ ವಿವರಿಸಿಲ್ಲ. ಒಟ್ಟು ಕಲಾವಿದರ ಸಂಖ್ಯೆ 12 ಇರಬೇಕೇ ಅಥವಾ ಹೆಚ್ಚುವರಿಯಾಗಿ 25 ಕಲಾವಿದರನ್ನು ಬಳಸಿಕೊಳ್ಳಬಹುದೇ ಎಂಬುದನ್ನು ಸುತ್ತೋಲೆ ಸ್ಪಷ್ಟವಾಗಿ ವಿವರಿಸುವುದಿಲ್ಲ.

**ಎಲ್‌ಇಡಿ, 4ಕೆ ಪರದೆ:** ಈ ಬಾರಿ ಸ್ತಬ್ಧಚಿತ್ರಗಳಲ್ಲಿ ಎಲ್‌ಇಡಿ ಬೆಳಕಿನ ವ್ಯವಸ್ಥೆ, ರೊಬೊಟಿಕ್ಸ್ ಉಪಕರಣಗಳು ಮತ್ತು 4ಕೆ ಪರದೆಗಳನ್ನು ಬಳಸಬೇಕು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ. ಜತೆಗೆ ಸ್ತಬ್ಧಚಿತ್ರಗಳಲ್ಲಿ ನೆರಳನ್ನು ತೋರಿಸಲು ಎಲ್‌ಇಡಿ ದೀಪಗಳನ್ನು ಬಳಸಬೇಕು ಎಂದೂ ಹೇಳಲಾಗಿದೆ.

## 8–10 ತಿಂಗಳ ಮುನ್ನವೇ ಆಯ್ಕೆ ಪ್ರಕ್ರಿಯೆ ಆರಂಭ

ಸ್ತಬ್ಧಚಿತ್ರಗಳ ಆಯ್ಕೆ ಪ್ರಕ್ರಿಯೆಯು 8–10 ತಿಂಗಳ ಮುನ್ನವೇ ಆರಂಭವಾಗುತ್ತದೆ. ಈ ಸಂಬಂಧ ರಕ್ಷಣಾ ಸಚಿವಾಲಯವು ಮೊದಲಿಗೆ ಸುತ್ತೋಲೆ ಹೊರಡಿಸುತ್ತದೆ. ಸುತ್ತೋಲೆಯು ಆ ವರ್ಷದ ಸ್ತಬ್ಧಚಿತ್ರಗಳ ವಿಷಯ, ತಾಂತ್ರಿಕ ಅವಕಾಶಗಳು ಮತ್ತು ಆಯ್ಕೆ ಪ್ರಕ್ರಿಯೆಯ ವಿವರಗಳನ್ನು ಒಳಗೊಂಡಿರುತ್ತದೆ. ಇದಕ್ಕಾಗಿ ಸಚಿವಾಲಯವು ತಜ್ಞರ ಸಮಿತಿಯೊಂದನ್ನು ರಚಿಸಿರುತ್ತದೆ.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ತಾವು ರಚಿಸಲಿರುವ ಸ್ತಬ್ಧಚಿತ್ರಗಳ ವಿವರಗಳನ್ನು ಒಳಗೊಂಡ ಪ್ರಸ್ತಾವಗಳನ್ನು ಸಮಿತಿಗೆ ಕಳುಹಿಸಬೇಕು. ಸಮಿತಿಯು ಒಟ್ಟು 6–7 ಹಂತಗಳಲ್ಲಿ ಸ್ತಬ್ಧಚಿತ್ರಗಳ ಪ್ರಸ್ತಾವಗಳನ್ನು ಪರಿಶೀಲಿಸುತ್ತದೆ. ಲಿಖಿತ ಹಂತ, ಚಿತ್ರದ ಹಂತ, ಮಾದರಿ ಹಂತ, ನೈಜ ಮಾದರಿ ಹಂತ... ಹೀಗೆ ಬೇರೆ–ಬೇರೆ ಸ್ವರೂಪದಲ್ಲಿ ಸ್ತಬ್ಧಚಿತ್ರಗಳನ್ನು ಪರಿಶೀಲಿಸಲಾಗುತ್ತದೆ. ಯಾವುದೇ ಹಂತದಲ್ಲೂ ತಜ್ಞರ ಸಮಿತಿಯು ಪ್ರಸ್ತಾವಗಳನ್ನು ತಿರಸ್ಕರಿಸಬಹುದು ಅಥವಾ ಬದಲಾವಣೆಗಳನ್ನು ಸೂಚಿಸಬಹುದು. ಅಂತಿಮ ಪಟ್ಟಿಯಲ್ಲಿ ಉಳಿದ ಸ್ತಬ್ಧಚಿತ್ರಗಳಿಗಷ್ಟೇ, ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ.

### ತಿರಸ್ಕಾರಕ್ಕೆ ಕಾರಣಗಳು...

- ಸ್ತಬ್ಧಚಿತ್ರಗಳ ಸೌಂದರ್ಯಮಟ್ಟ ಮತ್ತು ಅದು ಆಕರ್ಷಕವಾಗಿಲ್ಲದೇ ಇದ್ದರೆ
- **ಸ್ತಬ್ಧಚಿತ್ರಗಳ ವಿಷಯ:** ರಕ್ಷಣಾ ಸಚಿವಾಲಯವು ನಿಗದಿ ಮಾಡಿದ ವಿಷಯಕ್ಕೆ ಪೂರಕವಾಗಿಲ್ಲದೇ ಇದ್ದರೆ ಮತ್ತು ರಾಜ್ಯಗಳು ಸಲ್ಲಿಸಿದ್ದ ಪ್ರಸ್ತಾವದಲ್ಲಿದ್ದ ವಿವರಕ್ಕೆ ಪೂರಕವಾಗಿ ಇಲ್ಲದೇ ಇದ್ದರೆ
- ಸ್ತಬ್ಧಚಿತ್ರದೊಂದಿಗೆ ಬಳಸಿದ ಸಂಗೀತವು ಹೊಂದಿಕೆಯಾಗದೇ ಇದ್ದರೆ
- ಸ್ತಬ್ಧಚಿತ್ರದೊಂದಿಗೆ ಬಳಸಿಕೊಳ್ಳಲಾದ ಕಲಾವಿದರು ಅದೇ ರಾಜ್ಯದವರು ಆಗಿಲ್ಲದೇ ಇದ್ದರೆ
- ಅಳತೆ ಮತ್ತು ತಾಂತ್ರಿಕ ಮಿತಿಗೆ ಅನುಗುಣವಾಗಿ ಇಲ್ಲದೇ ಇದ್ದರೆ
- ವಿಶೇಷ ಸೂಚನೆಗಳನ್ನು ಪಾಲಿಸದೇ ಇದ್ದರೆ (ಈ ಬಾರಿ ಎಲ್‌ಇಡಿ ದೀಪಗಳು, 4ಕೆ ಪರದೆಗಳು ಮತ್ತು ರೊಬೊಟಿಕ್ಸ್ ಉಪಕರಣಗಳನ್ನು ಬಳಸಬೇಕು ಎಂದು ವಿಶೇಷ ಸೂಚನೆ ನೀಡಲಾಗಿತ್ತು)
- ಇವು ಮಾತ್ರವಲ್ಲದೆ ಬೇರೆ ಅಂಶಗಳೂ ಆಯ್ಕೆಯ ವೇಳೆ ಅನ್ವಯವಾಗುತ್ತದೆ ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ. ಆದರೆ ಆ ಅಂಶಗಳು ಯಾವುವು ಎಂಬುದನ್ನು ವಿವರಿಸಿಲ್ಲ

## ಮೆರವಣಿಗೆಯಲ್ಲಿ ಹೋಗುವ ಸ್ತಬ್ಧಚಿತ್ರಗಳೆಷ್ಟು?

ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಎಷ್ಟು ಸ್ತಬ್ಧಚಿತ್ರಗಳು ಇರಬೇಕು ಎಂಬುದಕ್ಕೆ ಸಾಂಖ್ಯಿಕ ಮಿತಿ ಇಲ್ಲ. ಕನಿಷ್ಠ ಇಷ್ಟೇ ಸ್ತಬ್ಧಚಿತ್ರಗಳಿರಬೇಕು ಅಥವಾ ಗರಿಷ್ಠ ಇಷ್ಟೇ ಸ್ತಬ್ಧಚಿತ್ರಗಳಿರಬೇಕು ಎಂಬುದನ್ನು ಎಲ್ಲಿಯೂ ವಿವರಿಸಿಲ್ಲ. ಅಲ್ಲದೆ, ಈಚಿನ ವರ್ಷಗಳಲ್ಲಿ ಪ್ರತಿ ಮೆರವಣಿಗೆಯಲ್ಲೂ ಭಾಗವಹಿಸಿದ ಸ್ತಬ್ಧಚಿತ್ರಗಳ ಸಂಖ್ಯೆಯಲ್ಲಿ ಏಕರೂಪತೆ ಇಲ್ಲ. ಬದಲಿಗೆ ಪ್ರತಿವರ್ಷ ಅವುಗಳ ಸಂಖ್ಯೆ ಬದಲಾಗಿದೆ.

2016ರ ಮೆರವಣಿಗೆಯಲ್ಲಿ ವಿವಿಧ ರಾಜ್ಯಗಳ 17 ಮತ್ತು ಕೇಂದ್ರದ ವಿವಿಧ ಸಚಿವಾಲಯಗಳ 6 ಸೇರಿ ಒಟ್ಟು 23 ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. 2018ರಲ್ಲಿ 21, 2020ರಲ್ಲಿ 22 ಮತ್ತು 2023ರಲ್ಲಿ 23 ಸ್ತಬ್ಧಚಿತ್ರಗಳನ್ನು ಮೆರವಣಿಗೆಯಲ್ಲಿ ಪ್ರದರ್ಶಿಸಲಾಗಿತ್ತು.

ಪ್ರತಿವರ್ಷ ಕೇಂದ್ರ ಸರ್ಕಾರದ ಆರು ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಇದ್ದೇ ಇರುತ್ತವೆ. ರಾಜ್ಯಗಳ ಸ್ತಬ್ಧಚಿತ್ರಗಳ ಸಂಖ್ಯೆ ಹೆಚ್ಚು–ಕಡಿಮೆ ಆಗುತ್ತದೆಯೇ ಹೊರತು, ಕೇಂದ್ರ ಸರ್ಕಾರದ್ದು ಕಡಿಮೆಯಾಗುವುದಿಲ್ಲ. ಬದಲಿಗೆ ಕೆಲವು ವರ್ಷಗಳಲ್ಲಿ ಏರಿಕೆಯಾಗಿದೆ. 2018ರಲ್ಲಿ ರಕ್ಷಣಾ ಸಚಿವಾಲಯವು ಕೇಂದ್ರ ಸರ್ಕಾರದ ವಿವಿಧ ಇಲಾಖೆ ಮತ್ತು ಸಂಸ್ಥೆಗಳ ಒಟ್ಟು ಒಂಬತ್ತು ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡಿತ್ತು. ಆ ವರ್ಷ 12 ರಾಜ್ಯಗಳಿಗಷ್ಟೇ ಪ್ರದರ್ಶನದ ಅವಕಾಶ ದೊರೆತಿತ್ತು.

ಕೇಂದ್ರ ಸರ್ಕಾರವು ತನಗೆ ಬೇಕಾದಷ್ಟು, ತನ್ನದೇ ಸ್ತಬ್ಧಚಿತ್ರಗಳನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಿಕೊಳ್ಳುತ್ತದೆ. ಆದರೆ ರಾಜ್ಯಗಳಿಗೆ ಅಂತಹ ಅವಕಾಶವಿಲ್ಲ. ಎಲ್ಲಾ ರಾಜ್ಯಗಳ ಸ್ತಬ್ಧಚಿತ್ರಗಳನ್ನು ಮೆರವಣಿಗೆಗೆ ಆಯ್ಕೆ ಮಾಡಲು ಇರುವ ಅಡ್ಡಿ ಏನು ಎಂದು ಪಂಜಾಬ್ ಎಎಪಿ ಘಟಕ ಪ್ರಶ್ನಿಸಿತ್ತು.

## 'ಕ್ಲಿಕ್'ನಲ್ಲಿ ರವಿ ಬಸ್ರೂರ್ ಪುತ್ರ




**ಸಂಗೀತ ನಿರ್ದೇಶಕ** ರವಿ ಬಸ್ರೂರ್ ಪುತ್ರ ಮಾಸ್ಟರ್ ಪವನ್ 'ಕ್ಲಿಕ್' ಸಿನಿಮಾದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಿಂದೆ ಅವರು 'ಗಿರ್ಮಿಟ್' ಚಿತ್ರದಲ್ಲಿ ಸಣ್ಣದೊಂದು ಪಾತ್ರ ನಿರ್ವಹಿಸಿದ್ದರು.

ಐಟಿ ಉದ್ಯೋಗಿಯಾಗಿರುವ ಶಶಿಕಿರಣ್ ತಮ್ಮದೇ ಶರಣ್ಯ ಫಿಲ್ಮ್ಸ್ ನಡಿ ಕ್ಲಿಕ್ ಸಿನಿಮಾ ನಿರ್ಮಿಸಿ, ನಿರ್ದೇಶಿಸಿದ್ದಾರೆ. 'ನಮ್ಮಲ್ಲಿ ಹೆಚ್ಚಿನ ಪೋಷಕರು ಮಕ್ಕಳು ಡಾಕ್ಟರ್-ಎಂಜಿನಿಯರ್ ಆಗಬೇಕು ಎಂದು ಬಯಸುತ್ತಾರೆ. ಆದರೆ ಈ ಎರಡು ವಲಯದ ಹೊರತಾಗಿ ನಮ್ಮ ಮುಂದೆ ತುಂಬಾ ಆಯ್ಕೆಗಳಿವೆ. ಮಕ್ಕಳ ಇಚ್ಛೆಗೆ ತಕ್ಕಂತೆ ಓದಲು, ಆಯ್ಕೆ ಮಾಡಲು ಬಿಡಬೇಕು ಎಂಬ ಸಂದೇಶ ಸಿನಿಮಾದಲ್ಲಿದೆ' ಎಂದರು ನಿರ್ದೇಶಕ ಶಶಿಕಿರಣ್.


ಯುವ ನಟ ಕಾರ್ತಿಕ್, ಚಂದ್ರಕಲಾ ಮೋಹನ್, ರಚನಾ ದಶರಥ್, ಸಂಜು ಬಸಯ್ಯ, ಸಿಲ್ಲಿಲಲ್ಲಿ ಆನಂದ್, ಸುಮನಾ ಶಶಿ ಸೇರಿದಂತೆ ಹಲವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಬೆಂಗಳೂರು, ಬಿಡದಿ ರಾಮನಗರ, ಕುಂದಾಪುರ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಆಕಾಶ್ ಪರ್ವ-ವಿಶ್ವಾಸ್ ಕೌಶಿಕ್ ಸಂಗೀತ ನಿರ್ದೇಶನ, ಜೀವನ್ ಗೌಡ ಛಾಯಾಚಿತ್ರಗ್ರಹಣ, ವಿನಯ್ ಕುಮಾರ್ ಸಂಕಲನ ಚಿತ್ರಕ್ಕಿದೆ.

## ಸಿಕ್ಸ್‌ಪ್ಯಾಕ್‌ನಲ್ಲಿ ಬಂದ ರಾಜವರ್ಧನ್

'**ಪ್ರಣಯಂ**', 'ಹಿರಣ್ಯ' ಹಾಗೂ 'ಗಜರಾಮ' ಹೀಗೆ ಮೂರು ಚಿತ್ರಗಳ ಬಿಡುಗಡೆಗೆ ಎದುರು ನೋಡುತ್ತಿರುವ ನಟ ರಾಜವರ್ಧನ್ ಮತ್ತೊಂದು ಪ್ರಾಜೆಕ್ಟ್ ಒಪ್ಪಿಕೊಂಡಿದ್ದಾರೆ.

'ಗೊಂಬೆಗಳ ಲವ್' ಸಿನಿಮಾ ನಿರ್ದೇಶಿಸಿದ್ದ ಸಂತೋಷ್, ಇದೀಗ 'ಮ್ಯಾಸಿವ್ ಸ್ಟಾರ್'ಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿದ್ದಾರೆ. ಈ ಸಿನಿಮಾಗಾಗಿ ಭರ್ಜರಿಯಾಗಿ ದೇಹ ದಂಡಿಸಿರುವ ನಟ ಡಿಂಗ್ರಿ ನಾಗರಾಜ್ ಪುತ್ರ ರಾಜವರ್ಧನ್ ಸಿಕ್ಸ್‌ಪ್ಯಾಕ್ ಮಾಡಿಕೊಂಡಿದ್ದಾರೆ.

ರಾಜವರ್ಧನ್ 'ಬಿಚ್ಚುಗತ್ತಿ' ಸಿನಿಮಾ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ್ದರು. ಐತಿಹಾಸಿಕ ಕಥೆಯಲ್ಲಿ ಪಾತ್ರದ ಸಲುವಾಗಿ ತೂಕ ಹೆಚ್ಚಿಸಿಕೊಂಡಿದ್ದರು. ನಂತರ 'ಪ್ರಣಯಂ', 'ಹಿರಣ್ಯ' ಮತ್ತು 'ಗಜರಾಮ' ಚಿತ್ರಗಳಲ್ಲಿ ರಾಜವರ್ಧನ್ ನಾಯಕನಾಗಿ ಬಣ್ಣಹಚ್ಚಿದ್ದಾರೆ. ಇವುಗಳೆಲ್ಲವೂ ಬಿಡುಗಡೆಗೆ ಸಿದ್ಧವಿವೆ. ಈಗ ರಾಜ್ ಆ್ಯಕ್ಷನ್ ಜಾನರ್‌ನ ಹೊಸ ಚಿತ್ರಕ್ಕೆ ಹಸಿರು ನಿಶಾನೆ ನೀಡಿದ್ದು, ಚಿತ್ರಕ್ಕಾಗಿ ದೈಹಿಕವಾಗಿ ಸಜ್ಜಾಗಿದ್ದಾರೆ. ಹಲವು ಸ್ಟಾರ್‌ಗಳಿಗೆ ಟ್ರೈನಿಂಗ್ ನೀಡಿರುವ ಶ್ರೀನಿವಾಸ್ ಗೌಡ ಅವರ ಮಾರ್ಗದರ್ಶನದಲ್ಲಿ ರಾಜವರ್ಧನ್ ಹೊಸ ಸಿನಿಮಾಗೆ ತಯಾರಾಗಿದ್ದಾರೆ. ಕೇವಲ ಎಂಟು ತಿಂಗಳಲ್ಲಿ ಹೊಸ ಲುಕ್‌ನಲ್ಲಿ ರಾಜವರ್ಧನ್ ಕಾಣಿಸಿಕೊಂಡಿದ್ದಾರೆ.



ರಾಜವರ್ಧನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಪ್ರಮುಖ ಘೋಷಣೆ! ಕ್ವಾಂಟಮ್‌ಟ್ರೇಡ್ ಕ್ರಿಪ್ಟೊ ವ್ಯಾಪಾರ ಕಂಪೆನಿಯೊಂದಿಗೆ ಸಹಭಾಗಿತ್ವ ಏರ್ಪಟ್ಟಿದೆ' ಎಂದು ಭಾರತದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿಕೆ ನೀಡುತ್ತಿರುವ ವಿಡಿಯೊವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಉದ್ಯಮಿ ಇಲಾನ್ ಮಸ್ಕ್ ಅವರು ತಮ್ಮ ಹೊಸದಾದ 'ಕ್ವಾಂಟಮ್‌ಟ್ರೇಡ್' ಎನ್ನುವ ಕಂಪೆನಿಯನ್ನು ತೆರೆದಿದ್ದೇನೆ ಎಂದು ಫಾಕ್ಸ್ ನ್ಯೂಸ್ ಪತ್ರಿಕೆಗೆ ಸಂದರ್ಶ ನೀಡಿದ್ದಾರೆ' ಎಂದೂ ವಿಡಿಯೊದೊಂದಿಗೆ ಪೋಸ್ಟ್ ಹರಿದಾಡುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ರಿವರ್ಸ್ ಇಮೇಜ್ ಬಳಸಿ, ಸಚಿವೆ ನಿರ್ಮಲಾ ಅವರ ವಿಡಿಯೊವನ್ನು ಹುಡುಕಲಾಯಿತು. ಈ ವೇಳೆ 2023ರ ಡಿಸೆಂಬರ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯ ವಿಡಿಯೊ ದೊರಕಿತು. ಈ ವಿಡಿಯೊವನ್ನು ಪಿಐಬಿ ಹಂಚಿಕೊಂಡಿದ್ದು, 'ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಮಿಳುನಾಡಿನ ಪ್ರವಾಹ ಪರಿಸ್ಥಿತಿಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ ಪತ್ರಿಕಾಗೋಷ್ಠಿ ನಡೆಸುತ್ತಿದ್ದಾರೆ' ಎಂಬ ಕ್ಯಾಪ್ಷನ್ ನೀಡಿದೆ. ಜೊತೆಗೆ, ನಿರ್ಮಲಾ ಅವರು ಆ ಗೋಷ್ಠಿಯಲ್ಲಿ ಹೆಚ್ಚಿನ ಭಾಗ ತಮಿಳಿನಲ್ಲಿಯೇ ಮಾತನಾಡಿದ್ದಾರೆ. ಫಾಕ್ಸ್ ನ್ಯೂಸ್ ಪತ್ರಿಕೆಯ ವೆಬ್‌ಸೈಟ್‌ನಲ್ಲಿ ಈ ಸಂಬಂಧ, ಇಲಾನ್ ಮಸ್ಕ್ ಅವರದ್ದು ಎನ್ನಲಾದ ಸಂದರ್ಶನದ ಯಾವುದೇ ವಿಡಿಯೊ ಅಥವಾ ಬರಹ ದೊರಕಲಿಲ್ಲ. ಆದ್ದರಿಂದ, ನಿರ್ಮಲಾ ಅವರದ್ದು ಎನ್ನಲಾದ ವಿಡಿಯೊವು ಡೀಪ್‌ಫೇಕ್ ವಿಡಿಯೊ ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

## ಗುಂಡಣ್ಣ




## ನುಡಿ ಬೆಳಗು

### ತಾಳಿದವನು ಬಾಳಿಯಾನು





ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

**ಇತ್ತೀಚೆಗಷ್ಟೇ** ಟೋಕಿಯೋ ವಿಮಾನ ನಿಲ್ದಾಣದಲ್ಲಿ ಒಂದು ಪ್ರಯಾಣಿಕ ವಿಮಾನವೂ ಕರಾವಳಿ ಕಾವಲು ಪಡೆಯ ಮತ್ತೊಂದು ಪುಟ್ಟ ವಿಮಾನವೂ ಡಿಕ್ಕಿಯಾಗಿ ಬೆಂಕಿ ಹೊತ್ತಿಕೊಂಡ ಘಟನೆಯನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ದೂರದಿಂದ ನೋಡುವವರಿಗೆ ಭಾರಿ ಪ್ರಮಾಣದ ಸಾವು ನೋವು ಆಗಿದೆ ಎಂದುಕೊಳ್ಳುವಷ್ಟು ಭೀಕರ ದೃಶ್ಯಗಳವು. ದುರದೃಷ್ಟವಶಾತ್ ಪುಟ್ಟ ವಿಮಾನದಲ್ಲಿದ್ದ ಆರು ಸಿಬ್ಬಂದಿಯ ಪೈಕಿ ಐವರು ಮೃತಪಟ್ಟರು. ಆದರೆ ಒಟ್ಟು 379 ಜನರಿದ್ದ ಪ್ರಯಾಣಿಕ ವಿಮಾನದಿಂದ ಸಿಬ್ಬಂದಿಗಳ ಸಮೇತ ಎಲ್ಲರೂ ಹದಿನೆಂಟು ನಿಮಿಷದಲ್ಲಿ ಹೊರಬಂದರು.

ಸುರಕ್ಷತೆಯ ನಿಯಮಗಳನ್ನು ಅಚ್ಚುಕಟ್ಟಾಗಿ ಪಾಲಿಸುವುದರಿಂದ ಹೇಗೆ ದೊಡ್ಡ ಅನಾಹುತವನ್ನು ತಪ್ಪಿಸಬಹುದು ಎಂಬುದಕ್ಕೆ ಇದೊಂದು ಅದ್ಭುತ ಉದಾಹರಣೆ. ಆದರೆ ಜಗತ್ತೇ ನಿಬ್ಬೆರಗಾಗಿದ್ದು ವಿಮಾನದ ಒಳಗಿನ ದೃಶ್ಯವನ್ನು ನೋಡಿ. ಜಪಾನಿನ ಜನರು ತೋರಿಸಿದ ಸಂಯಮಕ್ಕೆ ಅಚ್ಚರಿಗೊಳಗಾಗದವರೇ ಇಲ್ಲ. ತಮ್ಮದೇ ವಿಮಾನಕ್ಕೆ ಬೆಂಕಿ ಬಿದ್ದದ್ದು ಕಿಟಕಿಗಳಿಂದ ಕಾಣುತ್ತಿದ್ದರೂ ಯಾರೂ ಕಿರುಚಾಡಲಿಲ್ಲ, ಒಬ್ಬರನ್ನೊಬ್ಬರು ಮೆಟ್ಟಿ, ಮತ್ತೊಬ್ಬರನ್ನು ನೂಕಿ ಯಾರೂ ನಿರ್ಗಮನ ದ್ವಾರದೆಡೆಗೆ ಧಾವಿಸಿ ಅಲ್ಲಿ ಗುಂಪುಗೂಡಲಿಲ್ಲ. ತಮ್ಮತಮ್ಮ ಆಸನದಲ್ಲಿ ಕುಳಿತೇ ಇದ್ದರು. ಸಿಬ್ಬಂದಿಯ ಸಲಹೆಯನ್ನು ಪಾಲಿಸುತ್ತ ಉದ್ವೇಗಗೊಳ್ಳದೇ ಶಾಂತಚಿತ್ತರಾಗಿ ತುರ್ತು ನಿರ್ಗಮನಕ್ಕಾಗಿ ಇದ್ದ ಜಾರುದಾರಿಯ ಮೂಲಕ ಎಲ್ಲರೂ ಶಿಸ್ತಿನಿಂದ ಹೊರಬಂದಿದ್ದು ಜಪಾನೀಯರ ಮಾಗಿದ ಮನಃಸ್ಥಿತಿಗೊಂದು ನಿದರ್ಶನದಂತಿತ್ತು. ಈ ಜಾರುದಾರಿಯ ಮೂಲಕ ಹೊರಬರಬೇಕಾದರೆ ಯಾರೂ ತಮ್ಮ ಪುಟ್ಟ ಬ್ಯಾಗುಗಳನ್ನೂ ತರುವಂತಿಲ್ಲ. ಅದಕ್ಕೆ ಯಾರೊಬ್ಬರೂ ಗೊಣಗಲಿಲ್ಲ. ಹಾಗಾಗಿ ಸಮಯ ವ್ಯರ್ಥವಾಗದೇ ಪ್ರತಿಯೊಬ್ಬರೂ ಹೊರಬರುವಂತಾಯಿತು.

ಆ ಪ್ರಯಾಣಿಕರ ಜಾಗದಲ್ಲಿ ನಾವೇ ಇದ್ದರೆ ಏನು ಮಾಡುತ್ತಿದ್ದೆವು ಎಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಂಡರೆ ಜಪಾನೀಯರ ಆ ವರ್ತನೆ ಎಷ್ಟು ಅಪರೂಪದ್ದು ಎಂಬುದು ಅರಿವಾಗುತ್ತದೆ. ಜನರನ್ನು ರಕ್ಷಿಸಿದ ಸಿಬ್ಬಂದಿ ಇರಲಿ, ಸುರಕ್ಷಿತವಾಗಿ ಹೊರಬಂದ ಜನರಿರಲಿ ಅವರೆಲ್ಲರೂ ತೋರಿಸಿದ ಪ್ರಬುದ್ಧತೆ, ನಿಯಮ ಪಾಲನೆ ನಮ್ಮೆಲ್ಲರಿಗೂ ಬಹುದೊಡ್ಡ ಪಾಠ. ಬದುಕಿನಲ್ಲಿ ಆಘಾತಗಳು, ಆಕಸ್ಮಿಕಗಳು ಅನಿರೀಕ್ಷಿತವಾಗಿ ನಡೆದೇ ನಡೆಯುತ್ತವೆ. ಆದರೆ ಅವುಗಳಿಗೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎನ್ನುವುದು ಮುಖ್ಯ. ಎಂತಹ ಸಂದರ್ಭದಲ್ಲೂ ತಾಳ್ಮೆ ಕಳೆದುಕೊಳ್ಳದ, ಉದ್ವೇಗಗೊಳ್ಳದ ಮನಃಸ್ಥಿತಿಯನ್ನು ಬೆಳೆಸಿಕೊಳ್ಳುವುದರಿಂದ ಅದೆಷ್ಟೋ ಅನಾಹುತಗಳನ್ನು ತಡೆಯಬಹುದು. ತಾಳಿದವನು ಬಾಳಿಯಾನು, ತಣ್ಣೀರನ್ನಾದರೂ ತಣಿಸಿ ಕುಡಿಯಬೇಕು ಎಂಬ ಗಾದೆಗಳು ಆ ವಿಮಾನ ಪ್ರಯಾಣಿಕರ ಬದುಕಿನಲ್ಲಿ ಮಾತ್ರವಲ್ಲ ನಮ್ಮೆಲ್ಲರ ಜೀವನದಲ್ಲೂ ಅರ್ಥಪೂರ್ಣವೇ.

ಎಂಥ ಅಸಹನೀಯ ಸಂದರ್ಭವೇ ಬರಲಿ, ಅದೆಂಥ ಕಡುಕಷ್ಟವೇ ಬರಲಿ ದುಡುಕುವ ಮುನ್ನ ಕ್ಷಣಕಾಲ ಯೋಚಿಸಿ ಪ್ರತಿಕ್ರಿಯಿಸಿದರೆ, ನಿರ್ಧಾರ ಕೈಗೊಂಡರೆ ಎಷ್ಟೋ ಸಮಸ್ಯೆಗಳಿಗೆ ಸರಳ ಪರಿಹಾರ ಸಾಧ್ಯ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 11, 2024

**ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಮಾರ್ಗಶಿರ ಕೃಷ್ಣ ಅಮಾವಾಸ್ಯೆ ಗಂ. 17-27 ನಕ್ಷತ್ರ: ಪೂರ್ವಾಷಾಢ ಗಂ. 17-39 ಯೋಗ: ವ್ಯಾಘಾತ ಗಂ. 17-49 ಕರಣ: ಚತುಷ್ಪಾದ ಗಂ. 06-53, ಧನು ಮಾಸದ 26 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 4. ರಾಹುಕಾಲ : ಮಧ್ಯಾಹ್ನ 01-30 – 03-00
**ಸೂರ್ಯೋದಯ :** 07-00 **ಸೂರ್ಯಾಸ್ತ :** 06-16
**ಮುಸ್ಲಿಂ ದಿನಾಂಕ :** 28 ಜುಮಾದುಸ್ಸಾನಿ
**ದಿನ ವಿಶೇಷ :** ವಕುಲ ಅಮಾವಾಸ್ಯೆ, ಅದೃಷ್ಟ ಸಂಖ್ಯೆ : 7, 1

**ಮೇಷ:** ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ನಿಮಗೆ ಮಸಿ ಬಳಿಯುವ ಪ್ರಯತ್ನ ಸಂಬಂಧಿಕರಿಂದಲೇ ನಡೆಯಲಿದೆ. ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವಾಗಲಿದೆ. ಸಾಮಾಜಿಕವಾಗಿ ಅನುಯಾಯಿಗಳು ಹೆಚ್ಚುವರು.

**ವೃಷಭ:** ಸಹಚರರಲ್ಲಿನ ವಾದ ವಿವಾದಗಳಲ್ಲಿ ಸೋಲನ್ನು ಎದುರು ನೋಡಿದರೂ ಅದರಿಂದಾಗಿ ತಪ್ಪು ತಿಳಿವಳಿಕೆಗಳು ದೂರಾಗಲಿವೆ. ಲೆಕ್ಕ ಪರಿಶೋಧಕರಿಗೆ ಮತ್ತು ನ್ಯಾಯವಾದಿಗಳಿಗೆ ತೃಪ್ತಿಕರವಾದ ದಿನಗಳು.

**ಮಿಥುನ:** ಹಾಸ್ಯ ಪ್ರಜ್ಞೆ ಹೆಚ್ಚುವುದು. ಆದರೆ ನಿಮ್ಮ ಹಾಸ್ಯದಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ಸುಗಂಧ ವಸ್ತುಗಳ ತಯಾರಕರಿಗೆ ಮತ್ತು ಮಾರಾಟಗಾರರಿಗೆ ಹೆಚ್ಚಿನ ಆದಾಯ ದೊರಕುವುದು.

**ಕರ್ಕಾಟಕ:** ಉದ್ಯೋಗದ ಹುಡುಕಾಟ ನಡೆಸುವವರಿಗೆ ಅಪರಿಚಿತ ವ್ಯಕ್ತಿಯಿಂದ ಸಹಾಯ ಆಗುವುದು. ಉದರಬಾಧೆಯನ್ನು ಉಪಶಮನ ಮಾಡಿಕೊಳ್ಳುವುದಕ್ಕಾಗಿ ಹಸಿ ತರಕಾರಿಯನ್ನು ಸೇವಿಸಿ.

**ಸಿಂಹ:** ಹೊಸ ಬದುಕನ್ನು ಆರಂಭಿಸಲು ಬೇಕಾದ ಅವಕಾಶದ ಬಾಗಿಲು ತೆರೆಯುವುದು. ಸದುಪಯೋಗಪಡಿಸಿಕೊಳ್ಳುವ ಕಾರ್ಯ ಮಾತ್ರ ಸಂಪೂರ್ಣವಾಗಿ ನಿಮಗೆ ಬಿಟ್ಟ ವಿಚಾರವಾಗಿದೆ.

**ಕನ್ಯಾ:** ಹೊಸ ಮನೆಯ ಅಥವಾ ನಿವೇಶನದ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ಆರ್ಥಿಕ ತಾಪತ್ರಯಗಳು ಯಾರಲ್ಲಿಯೂ ಹೇಳಿಕೊಳ್ಳಲು ಆಗದು. ಅಕ್ಕಪಕ್ಕದವರ ವದಂತಿಗಳಿಗೆ ಕಿವಿಗೊಡದಿರಿ.

**ತುಲಾ:** ಪ್ರೀತಿಪಾತ್ರರಿಗೆ ನೋವಾದ ಕಾರಣದಿಂದ ಮನಸ್ಸು ಎಲ್ಲಾ ಕೆಲಸಗಳಿಂದ ವಿಮುಖವಾಗುವ ಸಾಧ್ಯತೆ ಇರುವುದು. ಹೂವು ಹಣ್ಣುಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭವಿದೆ.

**ವೃಶ್ಚಿಕ:** ದಂಪತಿ ಮಧ್ಯೆ ಅನವಶ್ಯಕವಾದ ವಾದ ವಿವಾದವು ಸಂಬಂಧವನ್ನು ಹಾಳುಮಾಡಬಹುದು. ಕಟ್ಟಡ ನಿರ್ಮಾಣದ ಸಾಮಗ್ರಿಗಳಿಂದ ಲಾಭವಿದೆ. ಹಲವಾರು ಆಸಕ್ತಿದಾಯಕ ವಿಚಾರಗಳು ಕಿವಿಗೆ ಬೀಳಲಿದೆ.

**ಧನು:** ತಾಯಿಯ ಅಥವಾ ಸೋದರ ಮಾವನ ಆರೋಗ್ಯದ ವ್ಯತ್ಯಾಸದಿಂದ ದಿನಚರಿಯಲ್ಲಿ ಬದಲಾವಣೆ ಉಂಟಾಗುತ್ತದೆ. ವೃತ್ತಿರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯುವುದು. ಮಹಿಳೆಯರಿಗೆ ಅಧಿಕಾರ ಲಭ್ಯವಾಗಲಿದೆ.

**ಮಕರ:** ಗೃಹ ನಿರ್ಮಾಣದಂಥ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ಸ್ವಲ್ಪ ಮಟ್ಟನ ತೊಂದರೆ ಸೃಷ್ಟಿ ಮಾಡುವುದು. ಪ್ರೀತಿ-ಪ್ರೇಮದ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆಗಳಿದೆ. ಎಚ್ಚರಿಕೆಯಿಂದ ಕಾರ್ಯಗಳನ್ನು ನಿರ್ವಹಿಸಿ.


**ಕುಂಭ:** ಕೆಲಸ ನಿಧಾನವಾಗಿ ನಡೆದರೂ ಸಹಚರರು ಸಮರ್ಪಕವಾಗಿ ಪೂರೈಸಿ ಕೊಡುವರು. ದುರಭ್ಯಾಸಗಳು ಹೊಂದಿದ ಸ್ನೇಹಿತರಿಂದ ಆಪತ್ತಿಗೆ ಸಿಲುಕುವಂತಾಗಿ ಅಶಾಂತಿ ಹೊಂದುವಿರಿ. ಪ್ರಾಮಾಣಿಕತೆ ಇರಲಿ.

**ಮೀನ:** ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ತೇಜೋವಧೆಯನ್ನು ಮಾಡಿದ ವ್ಯಕ್ತಿಗಳ ಎದುರು ಇಂದು ಅವರಿಗಿಂತ ಉತ್ತಮ ಸ್ಥಿತಿಯಲ್ಲಿರುವ ನೀವು ನಿಮ್ಮ ವಿನಯವನ್ನು ಮರೆಯದಿರಿ. ಒತ್ತಡಗಳಿಂದ ಹೊರಬರುವಿರಿ.

## ಪದಬಂಧ 5557 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಸೈರಣೆಯಿಲ್ಲದಿರುವುದು (4)
3.ಗರಳದಿಂದ ಕೂಡಿದ ಸಮಾಚಾರ! (3)
5.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
7.ಯಾರೂ ಇಲ್ಲದ ಸ್ಥಳ (3)
8.ಹೆಸರನ್ನಿಡುವ ಶಾಸ್ತ್ರ (5)
11.ಒಳ್ಳೆಯ ಸ್ವಭಾವ (3)
12.ಪುಷ್ಪಗಳನ್ನು ಜೋಡಿಸಿಡುವ ಕರಂಡಕ (3)
15.ಗುಲಾಬಿ ಹೂ ತಂದಿರುವ ಆಳು (3)
16. ತಮ್ಮ ಈ ರೀತಿ ತೋರಿದ ಭೇದಭಾವ (4)

**ಮೇಲಿಂದ ಕೆಳಕ್ಕೆ**
1.ಅತ್ಯಂತ ಕೀಳಾದವನು (3)
2.ನೆನಪಲ್ಲೇ ಇರುವ ಕಾರಣ (2)
3.ವಿಧಿಯನ್ನು ಬರೆಯುವಾತ (3)
4.ಮೊದಲಿದ್ದ ಹಾಗೆ! (4)
6.ಒಡೆಯ ಇಲ್ಲಿ ತಿರುಗಿದ್ದಾನಲ್ಲಾ? (3)
7.ಎಲ್ಲರನ್ನು ಒಂದುಗೂಡಿಸುವುದು (5)
9. ಪುಷ್ಪದ ಶರವಿಲ್ಲಿ ಉಲ್ಟಾ ಆಗಿದೆ (3)
10.ತುಸುವೇ ಬಿರಿದ ಮಂದಹಾಸ (4)
11.ಕೊನೆಗೆ ಮಗ ತಿರುಗಿದರೆ ಇದು ಸಲೀಸು! (3)
13.ಯಮನಿದ್ದಾಗಿನ ಸೂತ್ರ! (3)
14.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)



### 5556ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಶುಷ್ಕಪಾಂಡಿತ್ಯ 3.ಕಲಭ 5.ವಾಮನ 8.ಜನ 9.ತೈಲಶೋಧನಾಗಾರ 12.ಪಾತಿ 13.ಲತ್ತಪ 15.ತಿಕ್ಕಲು 16.ಶ್ರವಣೇಂದ್ರಿಯ

**ಮೇಲಿಂದ ಕೆಳಕ್ಕೆ:**
1.ಶುಭವಾರ್ತೆ 2.ಡಿಕ್ರಿ 4.ಭವನ 6.ನಕುಲ 7.ಅಪಧಮನಿ 8.ಜಠರ 9.ತೈನಾತಿ 10.ಗಾವಿಲ 11.ಅಪಜಯ 12.ಪಾವತಿ 14.ರವ

## ಸುಡೊಕು 5942


| | | | | | | | | |
|---|---|---|---|---|---|---|---|---|
| | 6 | | | | 8 | | | |
| 1 | | 3 | | | | 8 | 9 | 4 |
| | | 7 | 5 | | 9 | | | 3 |
| | 9 | | | 7 | | | 5 | |
| | | 5 | 9 | | 3 | 4 | 7 | |
| 7 | | | | 1 | | | | 9 |
| | 7 | | 8 | | 1 | | 4 | |
| 4 | | 9 | | | | 5 | | 7 |
| | 3 | | 4 | | 7 | | 1 | 2 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5941 ಸುಡೊಕು

| | | | | | | | | |
|---|---|---|---|---|---|---|---|---|
| 5 | 2 | 6 | 9 | 4 | 1 | 8 | 3 | 7 |
| 4 | 7 | 8 | 3 | 2 | 6 | 5 | 9 | 1 |
| 3 | 9 | 1 | 5 | 7 | 8 | 6 | 2 | 4 |
| 9 | 5 | 4 | 7 | 1 | 2 | 3 | 6 | 8 |
| 1 | 6 | 7 | 8 | 9 | 3 | 4 | 5 | 2 |
| 2 | 8 | 3 | 6 | 5 | 4 | 1 | 7 | 9 |
| 7 | 3 | 9 | 4 | 8 | 5 | 2 | 1 | 6 |
| 8 | 1 | 5 | 2 | 6 | 9 | 7 | 4 | 3 |
| 6 | 4 | 2 | 1 | 3 | 7 | 9 | 8 | 5 |

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 21,544 |
| ಇಂದಿನ ಅಂತ್ಯ | 21,618 |
| ▲ | 73 |
| ದಿನದ ಗರಿಷ್ಠ | 21,641 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹565 |
| 12 ಮೊಟ್ಟೆಗೆ | ₹75 |
| ಮೈಸೂರು | |
| 100 ಮೊಟ್ಟೆಗೆ | ₹565 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1590 (1590) |
| ಸೋಯಾ (ರಿಫೈನ್ಡ್) | ₹895 (885) |
| ಸೂರ್ಯಕಾಂತಿ (ರಿಫೈನ್ಡ್) | ₹925 (910) |
| ಪಾಮೋಲಿನ್ | ₹835 (830) |

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹256-480 |
| ದ್ವಿತಳಿ (ಬಿ.ವಿ) | ₹267-581 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹152.50 |
| ಆರ್‌ಎಸ್‌ಎಸ್-5 | ₹148 |
| ಗುಡ್ ಲಾಟ್ | ₹131 |

**ವಿನಿಮಯ ದರ**

| | |
|---|---|
| $ ಡಾಲರ್ | 83.03 |
| £ ಪೌಂಡ್ | 105.58 |
| € ಯೂರೊ | 90.86 |
| ¥ ಯೆನ್ (100ಕ್ಕೆ) | 58 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹7500-10000 |
| ಬೆಂಗಳೂರು | ₹8500-11000 |
| ತಿಪಟೂರು | ₹8200-9810 |

# ಭಾರತ್ ಕಡಲೆ ಬೇಳೆಗೆ ಬೇಡಿಕೆ ವೃದ್ಧಿ

ನವದೆಹಲಿ (ಪಿಟಿಐ): ದೇಶೀಯ ಮಾರುಕಟ್ಟೆಯಲ್ಲಿ ಭಾರತ್ ಬ್ರ್ಯಾಂಡ್ ಹೆಸರಿನಲ್ಲಿ ಚಿಲ್ಲರೆ ದರದಡಿ ಮಾರಾಟ ಮಾಡುತ್ತಿರುವ ಕಡಲೆ ಬೇಳೆಗೆ ಉತ್ತಮ ಬೇಡಿಕೆಯಿದೆ ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ.

ಪ್ರತಿ ತಿಂಗಳು ದೇಶದಲ್ಲಿ 1.8 ಲಕ್ಷ ಟನ್‌ನಷ್ಟು (ಎಲ್ಲಾ ಬ್ರ್ಯಾಂಡ್‌ಗಳು ಸೇರಿ) ಕಡಲೆ ಬೇಳೆ ಬಳಕೆಯಾಗುತ್ತಿದೆ. ಇದರಲ್ಲಿ ಕಾಲು ಭಾಗದಷ್ಟು ಸರಕು ಭಾರತ್ ಬ್ರ್ಯಾಂಡ್‌ನದ್ದಾಗಿದೆ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ರೋಹಿತ್‌ಕುಮಾರ್‌ಸಿಂಗ್ ತಿಳಿಸಿದ್ದಾರೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಕಡಲೆ ಬೇಳೆ ಮಾರಾಟ ಆರಂಭಿಸಲಾಗಿತ್ತು. ಗ್ರಾಹಕರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಸದ್ಯ ಭಾರತ್ ಬ್ರ್ಯಾಂಡ್‌ನ ಒಂದು ಕೆ.ಜಿ ಕಡಲೆ ಬೇಳೆಗೆ ₹60 ದರ ಇದೆ. ಮುಕ್ತ ಮಾರುಕಟ್ಟೆಯಲ್ಲಿ ಕೆ.ಜಿಗೆ ₹80 ದರ ಇದೆ ಎಂದು ತಿಳಿಸಿದ್ದಾರೆ.

ಅಕ್ಟೋಬರ್‌ನಿಂದ ಇಲ್ಲಿಯವರೆಗೆ 2.28 ಲಕ್ಷ ಟನ್‌ನಷ್ಟು ಕಡಲೆ ಬೇಳೆ ಮಾರಾಟವಾಗಿದೆ. ತಿಂಗಳವಾರು ಸರಾಸರಿ ₹45 ಸಾವಿರ ಟನ್‌ನಷ್ಟಿದೆ ಎಂದು ತಿಳಿಸಿದ್ದಾರೆ.

**ಮಾರಾಟ ಎಲ್ಲಿ?**

ನಾಫೆಡ್, ಎನ್‌ಸಿಸಿಎಫ್, ಕೇಂದ್ರೀಯ ಭಂಡಾರ ಹಾಗೂ ಐದು ರಾಜ್ಯಗಳ ಸಹಕಾರ ಸಂಘಗಳ ಮೂಲಕ ಕೇಂದ್ರ ಸರ್ಕಾರವು ಕಡಲೆ ಬೇಳೆ ಮಾರಾಟ ಮಾಡುತ್ತಿದೆ.

ಆರಂಭದಲ್ಲಿ 100 ಮಾರಾಟ ಕೇಂದ್ರಗಳಲ್ಲಿ ಮಾರಾಟ ಆರಂಭಿಸಲಾಗಿತ್ತು. ಸದ್ಯ ಇವುಗಳ ಸಂಖ್ಯೆ 13 ಸಾವಿರಕ್ಕೆ ಮುಟ್ಟಿದೆ. 21 ರಾಜ್ಯಗಳ 130 ನಗರಗಳಲ್ಲಿ ಸಂಚಾರಿ ವ್ಯವಸ್ಥೆ ಹಾಗೂ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಮಾರಾಟ ನಡೆಯುತ್ತಿದೆ ಎಂದು ರೋಹಿತ್ ಕುಮಾರ್ ಸಿಂಗ್ ಅವರು ತಿಳಿಸಿದ್ದಾರೆ.

ಸದ್ಯ ಸರ್ಕಾರದ ದಾಸ್ತಾನಿನಲ್ಲಿ 15 ಲಕ್ಷ ಟನ್ ಕಡಲೆ ಕಾಳು ಸಂಗ್ರಹವಿದೆ. ಇಲ್ಲಿ ಕಡಲೆ ಕಾಳು ಖರೀದಿಸುವ ಮಾರಾಟ ಏಜೆನ್ಸಿಗಳು ಬಳಿಕ ಗಿರಣಿಗಳಲ್ಲಿ ಬೇಳೆಯಾಗಿಸಿ ಮಾರಾಟ ಮಾಡುತ್ತವೆ ಎಂದು ಹೇಳಿದ್ದಾರೆ.

2027–28ನೇ ಹಣಕಾಸು ವರ್ಷಕ್ಕೆ 5 ಟ್ರಿಲಿಯನ್ ಡಾಲರ್ ಗುರಿ ಸಾಧನೆಗೆ ನಿರ್ಧಾರ

# ಆರ್ಥಿಕತೆ ಬಲಿಷ್ಠಕ್ಕೆ ಪಣ: ನಿರ್ಮಲಾ

ಪ್ರಜಾವಾಣಿ ವಾರ್ತೆ


ನಿರ್ಮಲಾ

ನವದೆಹಲಿ: 'ದೇಶದ ಜಿಡಿಪಿ ಗಾತ್ರವು 2027–28ನೇ ಹಣಕಾಸು ವರ್ಷಕ್ಕೆ ₹415 ಲಕ್ಷ ಕೋಟಿಗೆ (5 ಟ್ರಿಲಿಯನ್ ಡಾಲರ್) ತಲುಪಲಿದ್ದು, ಭಾರತವು ಜಗತ್ತಿನ ಚೀನಾ, ಅಮೆರಿಕ ಬಳಿಕ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಗುಜರಾತ್‌ನ ಗಾಂಧಿನಗರದಲ್ಲಿ ಬುಧವಾರ ಆರಂಭವಾದ ವೈಬ್ರಂಟ್ ಗುಜರಾತ್ ಜಾಗತಿಕ ಸಮಾವೇಶದಲ್ಲಿ ಅವರು ಮಾತನಾಡಿದರು.

'2047ಕ್ಕೆ ಭಾರತವು ಸ್ವಾತಂತ್ರ್ಯ ಗಳಿಸಿ ನೂರು ವರ್ಷಗಳು ತುಂಬಲಿವೆ. ಆ ವೇಳೆಗೆ ದೇಶದ ಆರ್ಥಿಕತೆಯ ಗಾತ್ರವು ₹2,490 ಲಕ್ಷ ಕೋಟಿಗೆ (30 ಟ್ರಿಲಿಯನ್ ಡಾಲರ್) ತಲುಪುವ ನಿರೀಕ್ಷೆಯಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ವಸಾಹತುಶಾಹಿ ಮನಸ್ಥಿತಿಯನ್ನು ತೊಡೆದು ಹಾಕುವುದೇ ವಿಕಸಿತ ಭಾರತದ ಗುರಿಯಾಗಿದೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರ ಸರ್ಕಾರವು ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದೆ' ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 2024–25ನೇ ಹಣಕಾಸು ವರ್ಷಕ್ಕೆ ಭಾರತದ ಜಿಡಿಪಿ ಗಾತ್ರವನ್ನು 5 ಟ್ರಿಲಿಯನ್ ಡಾಲರ್‌ಗೆ ಹೆಚ್ಚಿಸಲು 2018ರಲ್ಲಿಯೇ ಗುರಿ ನಿಗದಿಪಡಿಸಿತ್ತು. 2023–24ನೇ ಸಾಲಿನಲ್ಲಿ ದೇಶದ ಜಿಡಿಪಿ ಗಾತ್ರವು ₹296.58 ಲಕ್ಷ ಕೋಟಿಗೆ ತಲುಪಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂದಾಜಿಸಿದೆ. ಸದ್ಯ ಭಾರತವು ಜಾಗತಿಕಮಟ್ಟದಲ್ಲಿ ಅಮೆರಿಕ, ಚೀನಾ, ಜಪಾನ್ ಮತ್ತು ಜರ್ಮನಿ ಬಳಿಕ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ.

**ಸೆಮಿಕಂಡಕ್ಟರ್ ತಯಾರಿಕಾ ಘಟಕ ಸ್ಥಾಪನೆ**

'ಗುಜರಾತ್‌ನ ಧೋಲೆರಾದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಘಟಕ ಸ್ಥಾಪಿಸಲಾಗುವುದು' ಎಂದು ಟಾಟಾ ಸಮೂಹದ ಮುಖ್ಯಸ್ಥ ಎನ್. ಚಂದ್ರಶೇಖರನ್ ಘೋಷಿಸಿದ್ದಾರೆ.

ಸಮಾವೇಶದಲ್ಲಿ ಮಾತನಾಡಿದ ಅವರು, 'ಬೃಹತ್ ತಯಾರಿಕಾ ಘಟಕ ಸ್ಥಾಪನೆಗೆ ಟಾಟಾ ಸಮೂಹ ಬದ್ಧವಾಗಿದೆ. ಒಪ್ಪಂದ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಪ್ರಸಕ್ತ ವರ್ಷದಲ್ಲಿಯೇ ಕಾರ್ಯಾರಂಭ ಮಾಡಲಾಗುವುದು' ಎಂದರು.

ಅಲ್ಲದೆ, ಗುಜರಾತ್‌ನ ಸಾನಂದ ನಗರದಲ್ಲಿ ಎರಡು ತಿಂಗಳೊಳಗೆ 20 ಗಿಗಾ ವಾಟ್ ಸಾಮರ್ಥ್ಯದ ಲೀಥಿಯಂ ಅಯಾನ್ ಬ್ಯಾಟರಿ ತಯಾರಿಕಾ ಘಟಕವನ್ನೂ ಆರಂಭಿಸಲಾಗುವುದು. ಇದು ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ಉದ್ಯಮದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

**'ವೈಬ್ರಂಟ್ ಗುಜರಾತ್'ಗೆ ಮಸ್ಕ್ ಗೈರು**

ಗಾಂಧಿನಗರ (ಪಿಟಿಐ): ವೈಬ್ರಂಟ್ ಗುಜರಾತ್ ಜಾಗತಿಕ ಸಮಾವೇಶಕ್ಕೆ ಉದ್ಯಮಿ ಇಲಾನ್ ಮಸ್ಕ್ ಗೈರುಹಾಜರಾಗಿದ್ದಾರೆ.

ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಭಾರತದಲ್ಲಿ ಕಾರು ತಯಾರಿಕೆ ತನ್ನ ಪ್ರಥಮ ಘಟಕವನ್ನು ಗುಜರಾತ್‌ನಲ್ಲಿ ಸ್ಥಾಪಿಸಲು ನಿರ್ಧರಿಸಿದೆ. ಸಮಾವೇಶದಲ್ಲಿ ಪಾಲ್ಗೊಳ್ಳುವ ಮಸ್ಕ್ ಅವರೇ ಈ ಬಗ್ಗೆ ಅಧಿಕೃತವಾಗಿ ಘೋಷಿಸಲಿದ್ದಾರೆ ಎಂದು ಹೇಳಲಾಗಿತ್ತು. 'ಶುಕ್ರವಾರದ ವರೆಗೆ ನಡೆಯುವ ಸಮಾವೇಶದಲ್ಲಿ ಮಸ್ಕ್ ಭಾಗಿಯಾಗುತ್ತಿಲ್ಲ. ಆದರೆ, ಟೆಸ್ಲಾ ಕಂಪನಿಯು ಹೂಡಿಕೆಗೆ ಮುಂದಾದರೆ ಸರ್ಕಾರ ಸ್ವಾಗತಿಸಲಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಗುಜರಾತ್‌ನ ಕೈಗಾರಿಕಾ ಅಭಿವೃದ್ಧಿ ನಿಗಮದ ನಿರ್ದೇಶಕ ರಾಹುಲ್ ಗುಪ್ತ, 'ಜಾಗತಿಕ, ರಾಜ್ಯದ ಎಲೆಕ್ಟ್ರಿಕ್ ವಾಹನಗಳ ತಯಾರಿಕೆಯ ಕೇಂದ್ರವನ್ನಾಗಿಸಲಾಗಿದೆ. ಟೆಸ್ಲಾ ತನ್ನ ಘಟಕ ಸ್ಥಾಪಿಸಲು ಮುಂದಾದರೆ ಸೂಕ್ತ ಸ್ಥಳಾವಕಾಶ ಮತ್ತು ಮೂಲ ಸೌಕರ್ಯ ಕಲ್ಪಿಸಲು ಸರ್ಕಾರ ಬದ್ಧವಿದೆ' ಎಂದರು.

# 3 ಚೀನಿ ಉತ್ಪನ್ನಗಳಿಗೆ ಹೆಚ್ಚುವರಿ ತೆರಿಗೆ

ನವದೆಹಲಿ (ಪಿಟಿಐ): ನೆರೆಯ ಚೀನಾದಿಂದ ಭಾರತಕ್ಕೆ ಅಗ್ಗದ ದರದಲ್ಲಿ ಆಮದು ಮಾಡಿಕೊಳ್ಳುತ್ತಿದ್ದ ಮೂರು ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರವು, ಐದು ವರ್ಷಗಳ ಅವಧಿಗೆ ಹೆಚ್ಚುವರಿ ತೆರಿಗೆ ವಿಧಿಸಿದೆ.

ವ್ಹೀಲ್ ಲೋಡರ್, ಜಿಪ್ಸಂ ಟೈಲ್ಸ್ ಮತ್ತು ಇಂಡಸ್ಟ್ರಿಯಲ್ ಲೇಸರ್ ಉಪಕರಣಗಳ ಮೇಲೆ ಈ ತೆರಿಗೆ ವಿಧಿಸಲಾಗಿದೆ. ಚೀನಾದಿಂದ ರಫ್ತು ಆಗುತ್ತಿದ್ದ ಈ ಉತ್ಪನ್ನಗಳು ಸ್ಥಳೀಯ ಮಾರುಕಟ್ಟೆ ಮತ್ತು ಉತ್ಪಾದಕರ ಮೇಲೆ ದುಷ್ಪರಿಣಾಮ ಬೀರುತ್ತಿದ್ದವು ಎಂದು ಕೇಂದ್ರ ಹೇಳಿದೆ.

ಕೇಂದ್ರ ವಾಣಿಜ್ಯ ಸಚಿವಾಲಯದ ತನಿಖಾ ವಿಭಾಗವಾಗಿರುವ ವಾಣಿಜ್ಯ ಪರಿಹಾರಗಳ ಮಹಾನಿರ್ದೇಶನಾಲಯವು (ಡಿಜಿಟಿಆರ್) ನಡೆಸಿದ ತನಿಖೆಯಿಂದ ಈ ಸಂಗತಿ ಬೆಳಕಿಗೆ ಬಂದಿತ್ತು.

ಈ ಉತ್ಪನ್ನಗಳನ್ನು ಅವುಗಳ ಸಹಜ ಬೆಲೆಗಿಂತ ಕಡಿಮೆ ಬೆಲೆಗೆ ದೇಶಕ್ಕೆ ರಫ್ತು ಮಾಡಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಮಹಾನಿರ್ದೇಶನಾಲಯವು ನೀಡಿದ ಶಿಫಾರಸುಗಳಿಗೆ ಅನುಗುಣವಾಗಿ ಈ ಕ್ರಮವಹಿಸಲಾಗಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ಹೊರಡಿಸಿದ ಅಧಿಸೂಚನೆಗಳಲ್ಲಿ ಹೇಳಲಾಗಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 1000-1100 |
| ನಡುಗೋಲು | 1250-1300 |
| ರಾಶಿ | 1350-1400 |
| ರಾಶಿ ಉತ್ತಮ | 1450-1500 |
| ಹೆರಕಿದ್ದು | 2000-2100 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1800-1850 |
| ಹಸಿರು ಅತಿ ಉತ್ತಮ | 2200-2300 |
| ಕಾಳು ಮೆಣಸು | 580 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 18000-27500 |
| ಹೊಸತು | 27500-37000 |
| ಹಳತು | 42000-44500 |
| **ಕಾರ್ಕಳ** | |
| ಹೊಸತು | 25000-37000 |
| ಹಳತು | 30000-44500 |
| **ಕುಮಟ** | |
| ಚಿಪ್ಪು | 26509-33169 |
| ಕೋಕ | 21019-31099 |
| ಫ್ಯಾಕ್ಟರಿ | 11599-23129 |
| ಹಳೆಚಾಲಿ | 38109-40099 |
| ಹೊಸಚಾಲಿ | 33099-36015 |
| **ಸಾಗರ** | |
| ಸಿಪ್ಪೆಗೋಟು | 20500-20500 |
| **ಶಿವಮೊಗ್ಗ** | |
| ಬೆಟ್ಟೆ | 26069-54699 |
| ಗೊರಬಲು | 17000-40269 |
| ರಾಶಿ | 43599-49599 |
| ಸರಕು | 50009-81000 |
| **ಶಿರಸಿ** | |
| ಬೆಟ್ಟೆ | 38189-46189 |
| ಬಿಳಿಗೋಟು | 26399-35909 |
| ಚಾಲಿ | 38536-40861 |
| ಕೆಂಪುಗೋಟು | 30899-34999 |
| ರಾಶಿ | 43119-48699 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | - | 13900 | - | 181.40 |
| ಎಸಿ | - | 7500 | - | |
| ಆರ್‌ಪಿ | - | 11500 | - | ಲಂಡನ್ |
| ಆರ್‌ಸಿ | - | 7000 | - | 2932 ಡಾಲರ್ಸ್ |

## ಮುಂಬೈ ಧಾರಣೆ

**ಶೇಂಗಾ**

10-01-2024

| | |
|---|---|
| ಜಾವಾ 70/80(ಹೊಸ) | 12000-12100 |
| ಜಾವಾ 80/90(ಹೊಸ) | 11300-11400 |
| ದಪ್ಪ ಮಧ್ಯಪ್ರದೇಶ(ಹೊಸ) | 9900-10000 |
| ದಪ್ಪ ಗುಜರಾತ್(ಹೊಸ) | 10700-10800 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1600 (1600) |
| ಒಂದು ವಾರದ ಡೆಲಿವರಿ | 1595 (1595) |
| ಸೋಯಾ ಕಚ್ಚಾ | 860 (845) |
| ಪಾಮ್ ವಾರದ ಡೆಲಿವರಿ | 837 (828) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 845 (835) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
62,000 (62,100)
ಬೆಳ್ಳಿ ಕೆ.ಜಿ 71,400 (71,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

# ರಿಲಯನ್ಸ್, ಅದಾನಿ ಸಮೂಹಕ್ಕೆ ಲಾಭ

ನವದೆಹಲಿ (ಪಿಟಿಐ): ಷೇರುಪೇಟೆ ವಹಿವಾಟಿನಲ್ಲಿ ಬುಧವಾರ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಅದಾನಿ ಸಮೂಹವು ಗಳಿಕೆ ಕಂಡಿದೆ.

ರಿಲಯನ್ಸ್ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹46,810 ಕೋಟಿ ಸೇರ್ಪಡೆಯಾಯಿತು. ಕಂಪನಿಯ ಒಟ್ಟು ಮೌಲ್ಯ ₹17.92 ಲಕ್ಷ ಕೋಟಿಗೆ ಮುಟ್ಟಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್‌ನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಮೌಲ್ಯ ಶೇ 2.69ರಷ್ಟು ಏರಿಕೆಯಾಗಿದೆ. ಪ್ರತಿ ಷೇರು ₹2,649 ದಾಖಲಿಸಿದೆ.

**8 ಕಂಪನಿಗಳಿಗೆ ಲಾಭ:** ಅದಾನಿ ಸಮೂಹದ 10 ಕಂಪನಿಗಳ ಪೈಕಿ 8 ಕಂಪನಿಗಳ ಷೇರಿನ ಮೌಲ್ಯ ಏರಿಕೆ ಕಂಡಿದೆ.

ಎನ್‌ಡಿಟಿವಿ (ಶೇ 3.38), ಅದಾನಿ ಎಂಟರ್‌ಪ್ರೈಸಸ್ (ಶೇ 2.79), ಅದಾನಿ ಗ್ರೀನ್ ಎನರ್ಜಿ (ಶೇ 2.35), ಅದಾನಿ ಪೋರ್ಟ್ಸ್ (ಶೇ 1.47) ಅದಾನಿ ಎನರ್ಜಿ ಸಲ್ಯೂಷನ್ಸ್ (ಶೇ 0.62), ಅದಾನಿ ಪವರ್ (ಶೇ 0.49) ಅದಾನಿ ಟೋಟಲ್ ಗ್ಯಾಸ್ (ಶೇ 0.25) ಮತ್ತು ಅಂಬುಜಾ ಸಿಮೆಂಟ್ಸ್ (ಶೇ 0.15) ಷೇರು ಗಳಿಕೆ ಕಂಡಿವೆ. ಅದಾನಿ ವಿಲ್ಮಾರ್ (ಶೇ 0.68) ಮತ್ತು ಎಸಿಸಿ (ಶೇ 0.02) ಇಳಿಕೆ ದಾಖಲಿಸಿವೆ.

ಬಿಎಸ್‌ಇ ಸೆನ್ಸೆಕ್ಸ್ 271 ಅಂಶ ಏರಿಕೆಯಾಗಿ 71,657ಕ್ಕೆ ವಹಿವಾಟನ್ನು ಮುಕ್ತಾಯಗೊಳಿಸಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 73 ಅಂಶ ಹೆಚ್ಚಳವಾಗಿ 21,618ಕ್ಕೆ ಅಂತ್ಯಗೊಂಡಿತು.

# ಟಿ.ವಿ ಸ್ಟುಡಿಯೊ ಮೇಲೆ ದಾಳಿ

ಕ್ವಿಟೊ (ಎಪಿ): ಟಿ.ವಿ ನೇರ ಪ್ರಸಾರದ ಸಂದರ್ಭದಲ್ಲಿಯೇ ಸ್ಟುಡಿಯೊಳಗೆ ನುಗ್ಗಿ, ಸಿಬ್ಬಂದಿ ಬೆದರಿಸಿದ್ದ ಪ್ರಕಣಕ್ಕೆ ಸಂಬಂಧಿಸಿದಂತೆ ಎಲ್ಲಾ ಶಸ್ತ್ರಧಾರಿಗಳನ್ನು ಬಂಧಿಸಲಾಗಿದೆ ಎಂದು ಈಕ್ವೆಡಾರ್ ರಾಷ್ಟ್ರೀಯ ಪೊಲೀಸ್ ಮುಖ್ಯಸ್ಥ ಸೀಸರ್ ಜಪಟಾ ತಿಳಿಸಿದ್ದಾರೆ.


ಬಂದೂಕುಗಳು ಮತ್ತು ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗಿದೆ. ದಾಳಿಯನ್ನು ಭಯೋತ್ಪಾದಕ ಕೃತ್ಯ ಎಂದು ಪರಿಗಣಿಸಲಾಗಿದೆ ಎಂದು ಹೇಳಿದರು. ಆದರೆ ಎಷ್ಟು ಜನರನ್ನು ಬಂಧಿಸಲಾಗಿದೆ ಎಂದು ಅವರು ತಿಳಿಸಿಲ್ಲ.

# ರಷ್ಯಾ ಎದುರಿಸಲು ನೆರವಿಗಾಗಿ ಬಾಲ್ಟಿಕ್‌ಗೆ ಝೆಲೆನ್‌ಸ್ಕಿ ಭೇಟಿ

ಕೀವ್ (ಎಪಿ): ರಷ್ಯಾ ವಿರುದ್ಧ ಮತ್ತಷ್ಟು ಹೆಚ್ಚಿನ ಬೆಂಬಲ ಕ್ರೋಡೀಕರಿಸಲು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಬುಧವಾರ ಬಾಲ್ಟಿಕ್ ದೇಶಗಳಿಗೆ ಭೇಟಿ ಕೈಗೊಂಡರು.

22 ತಿಂಗಳುಗಳಿಂದ ನಡೆಯುತ್ತಿರುವ ಈ ಯುದ್ಧದಲ್ಲಿ ರಷ್ಯಾ ಇತ್ತೀಚೆಗೆ ಉಕ್ರೇನ್ ಮೇಲೆ ಕ್ಷಿಪಣಿ ದಾಳಿ ತೀವ್ರಗೊಳಿಸಿರುವ ಬೆನಲ್ಲೇ ಝೆಲೆನ್‌ಸ್ಕಿ ಅವರು ಎಸ್ಟೋನಿಯಾ ಮತ್ತು ಲಾಟ್ವಿಯಾಕ್ಕೆ ಭೇಟಿ ನೀಡುವ ಮೊದಲು ಲಿಥುವೇನಿಯಾಗೆ ಬುಧವಾರ ಭೇಟಿ ನೀಡಿದರು.

'ನಾವು ವ್ಲಾಡಿಮಿರ್ ಪುಟಿನ್‌ನನ್ನು ಮುಗಿಸದೇ ರಷ್ಯಾ ಯುದ್ಧ ನಿಲ್ಲಿಸುವುದಿಲ್ಲ. ಉಕ್ರೇನ್ ಜತೆಗೆ ನೆರೆಹೊರೆಯವರ ಮೇಲೂ ದಾಳಿ ಮಾಡುವುದು ನಿಲ್ಲುವುದಿಲ್ಲ. ಉಕ್ರೇನ್ ನಂತರ, ಪುಟಿನ್ ಮುಂದಿನ ದಾಳಿಯ ಗುರಿ ಲಿಥುವೇನಿಯಾ, ಲಾತ್ವಿಯಾ, ಎಸ್ಟೋನಿಯಾ, ಮಾಲ್ಡೊವಾ ಆಗಿರಲಿದೆ' ಎಂದು ಝೆಲೆನ್‌ಸ್ಕಿ ಲಿಥುವೇನಿಯಾದ ರಾಜಧಾನಿ ವಿಲ್ನಿಯಸ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.


ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರಿಗೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಅಧಿಕೃತವಾಗಿ ಸ್ವಾಗತ ಕೋರಿದರು –ಪಿಟಿಐ ಚಿತ್ರ

# ಚೀನಾ–ಮಾಲ್ದೀವ್ಸ್ ನಡುವೆ 20 ಒಪ್ಪಂದಗಳಿಗೆ ಸಹಿ

ಬೀಜಿಂಗ್ (ಪಿಟಿಐ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರನ್ನು ಬುಧವಾರ ಭೇಟಿಯಾಗಿ ಮಾತುಕತೆ ನಡೆಸಿದರು. ಉಭಯ ದೇಶಗಳ ನಡುವಣ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ನಾಯಕರಿಬ್ಬರೂ 20 ಒಪ್ಪಂದಗಳಿಗೆ ಸಹಿ ಹಾಕಿದರು.

'ಮಾಲ್ದೀವ್ಸ್ ಸರ್ಕಾರ ಮತ್ತು ಚೀನಾ ಸರ್ಕಾರದ ನಡುವೆ ಮಹತ್ವದ 20 ಒಪ್ಪಂದಗಳಿಗೆ ಬುಧವಾರ ಮಧ್ಯಾಹ್ನ ಅಂಕಿತ ಹಾಕಲಾಯಿತು. ಉಭಯ ದೇಶಗಳ ಅಧ್ಯಕ್ಷರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು' ಎಂದು ಮಾಲ್ದೀವ್ಸ್ ಅಧ್ಯಕ್ಷರ ಕಚೇರಿ 'ಎಕ್ಸ್'ನಲ್ಲಿ ತಿಳಿಸಿದೆ.

ಭಾರತ ಮತ್ತು ಮಾಲ್ದೀವ್ಸ್ ನಡುವೆ ಬಿಕ್ಕಟ್ಟು ಉಂಟಾಗಿರುವ ನಡುವೆಯೇ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಚೀನಾ ಭೇಟಿ ನೀಡಿದ್ದಾರೆ. ಚೀನಾ ಅಧ್ಯಕ್ಷ ಮತ್ತು ಅವರ ಪತ್ನಿಯಿಂದ ಮುಯಿಜು ದಂಪತಿಗೆ ಬೀಜಿಂಗ್‌ನ 'ಗ್ರೇಟ್ ಹಾಲ್ ಆಫ್ ದಿ ಪೀಪಲ್'ಗೆ ಭವ್ಯ ಸ್ವಾಗತ ದೊರಕಿತು. ಅವರಿಗೆ ಗೌರವ ನಮನ ಸಲ್ಲಿಸಿ, ಕೆಂಪುಹಾಸಿನ ಸ್ವಾಗತ ಕೋರಲಾಯಿತು.





# ಕಾಂಗ್ರೆಸ್‌ನ 'ನ್ಯಾಯ ಯಾತ್ರೆ' ಷರತ್ತುಬದ್ಧ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನವರಿ 14 ರಂದು 'ಭಾರತ್ ಜೋಡೊ ನ್ಯಾಯ ಯಾತ್ರೆ'ಗೆ ಇಂಫಾಲ್‌ನಿಂದ ಚಾಲನೆ ನೀಡಲು ಮಣಿಪುರ ಸರ್ಕಾರ ಷರತ್ತುಬದ್ಧ ಅನುಮತಿ ನೀಡಿದೆ. ಆದರೆ, ಈ ಕಾರ್ಯಕ್ರಮದಲ್ಲಿ ಸೀಮಿತ ಸಂಖ್ಯೆಯ ಜನರು ಭಾಗವಹಿಸಬೇಕು. ಸಾರ್ವಜನಿಕ ಸಭೆ ಹಾಗೂ ರ‍್ಯಾಲಿ ನಡೆಸಲು ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಇಂಫಾಲ್‌ನ ಅರಮನೆ ಮೈದಾನದಿಂದ ಯಾತ್ರೆಗೆ ಚಾಲನೆ ನೀಡಲು ಅನುಮತಿ ನೀಡಬೇಕು ಎಂದು ಕಾಂಗ್ರೆಸ್ ಪಕ್ಷವು ಮಣಿಪುರ ಸರ್ಕಾರಕ್ಕೆ ಕಳೆದ ವಾರ ಮನವಿ ಮಾಡಿತ್ತು.

ಬುಧವಾರ ಬೆಳಿಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಹಾಗೂ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಅರಮನೆ ಮೈದಾನದಿಂದ ಆರಂಭಿಸಲು ಮಣಿಪುರದ ಬಿಜೆಪಿ ಸರ್ಕಾರ ಅನುಮತಿ ನಿರಾಕರಿಸಿದೆ' ಎಂದು ದೂರಿದರು.

'ಮಣಿಪುರದಿಂದಲೇ ಯಾತ್ರೆ ಆರಂಭವಾಗಲಿದೆ. ಮತ್ತೊಂದು ಸ್ಥಳದಲ್ಲಿ ಯಾತ್ರೆ ಆರಂಭಿಸಲು ಅನುಮತಿ ಕೋರಲಾಗಿದೆ. ಎಷ್ಟೇ ಅಡೆತಡೆಗಳು ಸೃಷ್ಟಿಯಾದರೂ ಇದೇ 14ರಂದು ಯಾತ್ರೆಗೆ ಚಾಲನೆ ಸಿಗಲಿದೆ' ಎಂದು ಹೇಳಿದರು.

ಇಂಫಾಲ್ ಪೂರ್ವ ಜಿಲ್ಲಾ ಮ್ಯಾಜಿಸ್ಟ್ರೇಟ್ ಕಚೇರಿ ಬುಧವಾರ ಸಂಜೆ ಹೊರಡಿಸಿದ ಆದೇಶದಲ್ಲಿ, 'ಯಾವುದೇ ಅಹಿತಕರ ಘಟನೆ ನಡೆಯದಂತೆ, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ತಡೆಯಲು ಸೀಮಿತ ಸಂಖ್ಯೆಯ ಜನರು ಭಾಗವಹಿಸಲು ಅನುಮತಿ ನೀಡಲಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವವರ ವಿವರಗಳನ್ನು ಜಿಲ್ಲಾಡಳಿತಕ್ಕೆ ಮುಂಚಿತವಾಗಿ ನೀಡಬೇಕು. ಆಗ ಎಲ್ಲ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ' ಎಂದು ತಿಳಿಸಲಾಗಿದೆ.

'ಯಾತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಭಾರಿ ಸಂಖ್ಯೆಯ ಜನರು ಸೇರುವ ಸಾಧ್ಯತೆ ಇದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರದಿ ಸಲ್ಲಿಸಿದ್ದಾರೆ. ಅಧಿಕ ಸಂಖ್ಯೆಯ ಜನರು ಸೇರಿದರೆ ಕಾನೂನು ಮತ್ತು ಸುವ್ಯವಸ್ಥೆ ಮೇಲೆ ಪರಿಣಾಮ ಬೀರಬಹುದು. ಅಲ್ಲದೆ, ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಸೆಕ್ಷನ್ 144 ಜಾರಿಯಲ್ಲಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇಂಫಾಲ್‌ನಿಂದ ಮುಂಬೈವರೆಗೆ ಈ ಯಾತ್ರೆ ಕೈಗೊಳ್ಳಲಿದ್ದಾರೆ. ಈ ಯಾತ್ರೆಯು ಅರುಣಾಚಲ ಪ್ರದೇಶ ಸೇರಿದಂತೆ 15 ರಾಜ್ಯಗಳಲ್ಲಿ ಸಂಚರಿಸಲಿದೆ.

# ಅಯೋಧ್ಯೆ: ಸ್ವಚ್ಛತಾ ಕಾರ್ಯಕ್ಕೆ 800 ಸಿಬ್ಬಂದಿ

ಅಯೋಧ್ಯೆ (ಪಿಟಿಐ): ಅಯೋಧ್ಯೆ ನಗರವನ್ನು ಸ್ವಚ್ಛವಾಗಿಡಲು ನಗರಾಡಳಿತವು 800 ಸ್ವಚ್ಛತಾ ಸಿಬ್ಬಂದಿ ನಿಯೋಜಿಸಲಿದೆ.

ಮಕರ ಸಂಕ್ರಾಂತಿ ಅಂಗವಾಗಿ ಭಾರಿ ಸಂಖ್ಯೆಯ ಭಕ್ತರು ಸರಯೂ ನದಿಯಲ್ಲಿ ತೀರ್ಥಸ್ನಾನ ಮಾಡುತ್ತಾರೆ. ಹಾಗೆಯೇ ಜ.22ರಂದು ನಡೆಯುವ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮದಲ್ಲೂ ಅಪಾರ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಹೀಗಾಗಿ ನಗರಾಡಳಿತವು ಸಿದ್ಧತೆಯಲ್ಲಿ ತೊಡಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. 800 ಸ್ವಚ್ಛತಾ ಸಿಬ್ಬಂದಿಯ ನಿಯೋಜನೆ ಮತ್ತು ಮೇಲ್ವಿಚಾರಣೆ ಮಾಡುವ ಏಜೆನ್ಸಿಯ ಆಯ್ಕೆ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಸಿಬ್ಬಂದಿ ರಸ್ತೆ, ಘಾಟ್‌ಗಳು, ಶೌಚಾಲಯ, ಕಚೇರಿ ಮತ್ತಿತರ ಸ್ಥಳಗಳನ್ನು ಸ್ವಚ್ಛ ಮಾಡಲಿದ್ದಾರೆ ಎಂದು ಹೇಳಿದರು.

**ಅಯೋಧ್ಯೆಗೆ ಉಡುಗೊರೆಗಳ ಮಹಾಪೂರ:** ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಅಂಗವಾಗಿ ದೇಶ ಮತ್ತು ವಿದೇಶಗಳಿಂದ 108 ಅಡಿ ಉದ್ದದ ಅಗರಬತ್ತಿ, 2,100 ಕೆ.ಜಿ ತೂಕದ ಗಂಟೆ, 1,100 ಕೆ.ಜಿ ತೂಕದ ದೈತ್ಯ ದೀಪ, ಚಿನ್ನದ ಪಾದುಕೆ, 10 ಅಡಿ ಎತ್ತರದ ಬೀಗ ಮತ್ತು ಕೀ ಮತ್ತು ಗಡಿಯಾರವನ್ನು ಉಡುಗೊರೆಯಾಗಿ ಕಳುಹಿಸಲಾಗಿದೆ.

ಸೀತಾ ಮಾತೆಯ ಜನ್ಮಸ್ಥಳ ನೇಪಾಳದ ಜನಕಪುರದಿಂದ 3000ಕ್ಕೂ ಹೆಚ್ಚು ಉಡುಗೊರೆಗಳು ಈಗಾಲೇ ಅಯೋಧ್ಯೆಯನ್ನು ತಲುಪಿವೆ. ಸುಮಾರು 30 ವಾಹನಗಳಲ್ಲಿ ಇವುಗಳನ್ನು ಅಯೋಧ್ಯೆಗೆ ತರಲಾಗಿದೆ. ಶ್ರೀಲಂಕಾದ ನಿಯೋಗ ಸಹ ಅಯೋಧ್ಯೆಗೆ ಭೇಟಿ ನೀಡಿ ಅಶೋಕ ವಾಟಿಕಾದಿಂದ ವಿಶೇಷ ಬಂಡೆಯನ್ನು ನೀಡಿದೆ.

**ಪರೀಕ್ಷೆ ಮುಂದೂಡಿಕೆ:** ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಜ.22ರಂದು ನಿಗದಿಯಾಗಿದ್ದ ಪರೀಕ್ಷೆಯನ್ನು ಲಖನೌ ವಿಶ್ವವಿದ್ಯಾಲಯ ಮುಂದೂಡಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

**ಅಯೋಧ್ಯೆ ವಿಮಾನ ನಿಲ್ದಾಣಕ್ಕೆ ಸಿಆರ್‌ಎಸ್‌ಪಿ ಭದ್ರತೆ:** ರಾಮಲಲ್ಲಾ ಮೂರ್ತಿಯ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ಕೆ ಕೆಲವೇ ದಿನಗಳು ಬಾಕಿ ಇದ್ದು, ಇಲ್ಲಿನ ವಿಮಾನ ನಿಲ್ದಾಣದ ಭದ್ರತೆಗೆ ಕೇಂದ್ರ ಸರ್ಕಾರವು 150ಕ್ಕೂ ಹೆಚ್ಚು ಸಿಆರ್‌ಎಸ್‌ಎಫ್ ಸಿಬ್ಬಂದಿಯನ್ನು ಮಂಜೂರು ಮಾಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

**ಕನೌಜ್‌ನಿಂದ ಸುಗಂಧ ದ್ರವ್ಯ**

ಸುಗಂಧ ದ್ರವ್ಯಕ್ಕೆ ಪ್ರಸಿದ್ಧಿಯಾಗಿರುವ ಕನೌಜ್ ನಗರದಿಂದ ತಯಾರಾದ ವಿಶೇಷ ಸುಗಂಧ ದ್ರವ್ಯವನ್ನು ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ಕಾಗಿ ಅಯೋಧ್ಯೆಗೆ ಕಳುಹಿಸಲಾಗುತ್ತದೆ.

ಈ ಸುಗಂಧ ದ್ರವ್ಯವನ್ನು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ಗೆ ನೀಡುವುದಾಗಿ ಸುಗಂಧ ದ್ರವ್ಯ ತಯಾರಕರ ಸಂಘದ ಅಧ್ಯಕ್ಷ ಪವನ್ ತ್ರಿವೇದಿ ತಿಳಿಸಿದ್ದಾರೆ.

ರಾಮಲಲ್ಲಾ ವಿಗ್ರಹ ಸ್ವಚ್ಛ ಮಾಡಲು ವಿಶೇಷ ರೋಸ್ ವಾಟರ್ ಸಹ ಸಿದ್ಧ ಮಾಡಲಾಗುತ್ತಿದೆ ಎಂದು ಹೇಳಿದರು.

ಪ್ರಗತಿಯಲ್ಲಿ ಸೀಟು ಹಂಚಿಕೆ ಮಾತುಕತೆ, ಕೆಲವೆಡೆ ಆರಂಭಿಕ ಹಂತದಲ್ಲಿ– ಜೈರಾಮ್ ರಮೇಶ್

# ‘ಮೈತ್ರಿಕೂಟ ನಾಯಕರ ಜತೆ ಖರ್ಗೆ ಸಂಪರ್ಕ’

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ‘ಇಂಡಿಯಾ’ ಮೈತ್ರಿಕೂಟದ ಎಲ್ಲಾ ಸಹವರ್ತಿ ಪಕ್ಷಗಳ ನಾಯಕರ ಜೊತೆಯೂ ಸಂಪರ್ಕದಲ್ಲಿದ್ದಾರೆ ಎಂದು ಪಕ್ಷವು ಬುಧವಾರ ಹೇಳಿದೆ. ಮೈತ್ರಿಕೂಟದ ಕೆಲ ಪಕ್ಷಗಳ ಜೊತೆಗೆ ಸೀಟುಹಂಚಿಕೆ ಕುರಿತು ಮಾತುಕತೆ ಆರಂಭಿಸಿದ ಬಳಿಕ ಕಾಂಗ್ರೆಸ್ ಹೀಗೆ ಹೇಳಿದೆ.

ಮೈತ್ರಿಕೂಟಕ್ಕೆ ಒಬ್ಬ ಸಂಚಾಲಕನ ಅಗತ್ಯವಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಜೊತೆಗೆ, ಆ ಹುದ್ದೆಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಹೆಸರೂ ಚಾಲ್ತಿಯಲ್ಲಿದೆ. ಈ ನಡುವೆಯೇ ಕಾಂಗ್ರೆಸ್ ಈ ಹೇಳಿಕೆ ನೀಡಿದೆ. ಮೈತ್ರಿಕೂಟಕ್ಕಾಗಿಯೇ ಒಂದು ಕಚೇರಿ ಮತ್ತು ವಕ್ತಾರರು ಇರಬೇಕು ಎಂಬ ಒತ್ತಾಯವೂ ಇದೆ.

‘ಮೈತ್ರಿಕೂಟದಲ್ಲಿ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಖರ್ಗೆ ಅವರು ಎಲ್ಲಾ ಪಕ್ಷಗಳ ನಾಯಕರ ಜೊತೆ ಸಂಪರ್ಕದಲ್ಲಿದ್ದಾರೆ. ಕೆಲ ಪಕ್ಷಗಳ ಜೊತೆ ಸೀಟುಹಂಚಿಕೆ ಕುರಿತ ಮಾತುಕತೆಯು ಸಾಕಷ್ಟು ಪ್ರಗತಿ ಸಾಧಿಸಿದೆ. ಇನ್ನು ಕೆಲ ಪಕ್ಷಗಳ ಜೊತೆ ಆರಂಭಿಕ ಹಂತದಲ್ಲಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹೇಳಿದ್ದಾರೆ.

## ನಾಳೆ ಎಎಪಿ- ಕಾಂಗ್ರೆಸ್ ಚರ್ಚೆ ಸಾಧ್ಯತೆ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗಾಗಿ ಎಎಪಿ ಮತ್ತು ತಮ್ಮ ಪಕ್ಷದ ನಡುವಿನ ಸೀಟು ಹಂಚಿಕೆ ವಿಷಯವು ಇದೇ 12ರಂದು ನಡೆಯಲಿರುವ ಸಭೆಯಲ್ಲಿ ಚರ್ಚೆಗೆ ಬರುವ ಸಾಧ್ಯತೆ ಇದೆ ಎಂದು ದೆಹಲಿ ಕಾಂಗ್ರೆಸ್ ಅಧ್ಯಕ್ಷ ಅರವಿಂದ್ ಸಿಂಗ್ ಲವ್ಲಿ ಹೇಳಿದರು.

ಜನವರಿ 8ರಂದು ನಡೆದ ಮೊದಲ ಸಭೆಯಲ್ಲಿ ಸೀಟು ಹಂಚಿಕೆ ಬಗ್ಗೆ ಯಾವುದೇ ಚರ್ಚೆ ನಡೆಯಲಿಲ್ಲ. ದೆಹಲಿ ಕಾಂಗ್ರೆಸ್ ಮತ್ತು ಎಪಿಪಿ ಅಂದು ಮೊದಲ ಬಾರಿಗೆ ಮಾತುಕತೆಗೆಂದು ಸಭೆ ನಡೆಸಿದವು ಎಂದರು.

‘ಕಾಂಗ್ರೆಸ್‌ಗೆ ಎಎಪಿ ಮೂರು ಸ್ಥಾನಗಳನ್ನು ಬಿಟ್ಟುಕೊಡಲು ಮುಂದಾಗಿದೆ ಎಂಬ ಮಾಧ್ಯಮಗಳ ವರದಿ ಸರಿಯಲ್ಲ. ಅಂದಿನ ಸಭೆಯಲ್ಲಿ ಚುನಾವಣೆ ಎದುರಿಸುವ ವಿವಿಧ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲಾಯಿತು. ಮುಂದಿನ ಸಭೆಯಲ್ಲಿ ಸೀಟು ಹಂಚಿಕೆ ವಿಷಯ ಚರ್ಚೆ ಆಗಬಹುದು’ ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ದೆಹಲಿ, ಪಂಜಾಬ್, ಹರಿಯಾಣ, ಗೋವಾ ಮತ್ತು ಗುಜರಾತ್ ಈ ಐದು ರಾಜ್ಯಗಳಲ್ಲಿ ಎಎಪಿಯು ಕಾಂಗ್ರೆಸ್ ಜತೆಗೂಡಿ ಸ್ಪರ್ಧಿಸಲಿದೆ. ಈ ದಿಸೆಯಲ್ಲಿ ಈವರೆಗೆ ನಡೆದ ಚರ್ಚೆಗಳು ಸಕಾರಾತ್ಮಕವಾಗಿವೆ ಎಂದು ಪಕ್ಷದ ದೆಹಲಿ ಸಂಚಾಲಕ ಗೋಪಾಲ್ ರಾಯ್ ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಜೊತೆ, ಬಿಹಾರದಲ್ಲಿ ಜೆಡಿಯು ಜೊತೆ ಮಾತುಕತೆಯು ಇನ್ನೆರಡು ದಿನಗಳಲ್ಲಿ ಆರಂಭವಾಗುವ ನಿರೀಕ್ಷೆ ಇದೆ.

‘ಸೀಟು ಹಂಚಿಕೆ ಕುರಿತು ನಾಯಕರ ಮಧ್ಯೆ ಸ್ಪಷ್ಟತೆ ಇದೆ. ಎಲ್ಲಾ ಮಿತ್ರ ಪಕ್ಷಗಳಿಗೂ ಸೀಟು ಹೊಂದಾಣಿಕೆ ಮಾಡಿಕೊಡುವ ನಿಟ್ಟಿನಲ್ಲಿ ಕಾಂಗ್ರೆಸ್ ಬದ್ಧವಾಗಿದೆ’ ಎಂದು ಅವರು ಹೇಳಿದರು.

**‘ಸೀಟು ಹಂಚಿಕೆ ಪ್ರಕ್ರಿಯೆಗೆ ವೇಗ’ (ಶ್ರೀನಗರ ವರದಿ):** ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಬಿಹಾರ, ತಮಿಳುನಾಡು ಮತ್ತು ಪಂಜಾಬ್ ರಾಜ್ಯಗಳಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಉತ್ತಮ ಫಲಿತಾಂಶದ ಭರವಸೆ ಹೊಂದಬಹುದು. ಹೀಗಾಗಿ ಈ ರಾಜ್ಯಗಳಲ್ಲಿ ಸೀಟುಹಂಚಿಕೆ ಪ್ರಕ್ರಿಯೆಗೆ ವೇಗ ನೀಡಬೇಕು ಎಂದು ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್ ಕೇಂದ್ರಾಡಳಿತ ಪ್ರದೇಶಗಳ ಲೋಕಸಭೆ ಚುನಾವಣೆಗೆ ಸೀಟುಹಂಚಿಕೆ ಮಾತುಕತೆಗಳು ಇನ್ನೂ ಆರಂಭವಾಗಿಲ್ಲ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ನಾವು ಕೂಡಾ ‘ಇಂಡಿಯಾ’ ಮೈತ್ರಿಕೂಟದ ಭಾಗ. ಆರು ಕ್ಷೇತ್ರಗಳಿಗಾಗಿ ನಾವು ಮಾತುಕತೆ ನಡೆಸಬೇಕಿದೆ. ಸೀಟುಹಂಚಿಕೆ ಕುರಿತು ನಿರ್ಧಾರ ತೆಗೆದುಕೊಳ್ಳಲು 15 ನಿಮಿಷ ಸಾಕು’ ಎಂದು ಅವರು ಹೇಳಿದ್ದಾರೆ.

## ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಿ: ಖರ್ಗೆ

ನವದೆಹಲಿ: ಸುಳ್ಳು ಸಂಕಥನಗಳನ್ನು ಸೋಲಿಸಲು ಕಾಂಗ್ರೆಸ್ಸಿನ ಮುಂಚೂಣಿ ಸಂಘಟನೆಗಳು ಜನರ ಜೊತೆ ನಿರಂತರವಾಗಿ ಸಂಪರ್ಕದಲ್ಲಿ ಇರಬೇಕು ಎಂದು ಕರೆ ನೀಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರದ ‘10 ವರ್ಷಗಳ ವೈಫಲ್ಯ’ಗಳ ಬಗ್ಗೆ ಜನರಿಗೆ ತಿಳಿಸಬೇಕು ಎಂದು ಸೂಚಿಸಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ

ಸಾಮಾಜಿಕ ಜಾಲತಾಣಗಳು ರಾಜಕಾರಣದ ಮೇಲೆ ಪ್ರಭಾವ ಬೀರುತ್ತಿರುವ ಸಂದರ್ಭದಲ್ಲಿ ತಮ್ಮ ಯುವ ಸಹೋದ್ಯೋಗಿಗಳು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕು, ಸತ್ಯವನ್ನು ಆಧರಿಸಿ ಸಭ್ಯತೆಯಿಂದ ಪ್ರತಿಕ್ರಿಯೆಗಳನ್ನು ನೀಡಬೇಕು ಎಂದು ಖರ್ಗೆ ಕಿವಿಮಾತು ಹೇಳಿದ್ದಾರೆ.

ಲೋಕಸಭಾ ಚುನಾವಣೆಗೆ ತಯಾರಿ ಹಾಗೂ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ ಭಾರತ್ ಜೋಡೊ ನ್ಯಾಯ ಯಾತ್ರೆಯ ಸಿದ್ಧತೆಗೆ ಸಂಬಂಧಿಸಿದಂತೆ ಖರ್ಗೆ ಅವರು ಪಕ್ಷದ ವಿವಿಧ ಸಂಘಟನೆಗಳ ಮುಖಂಡರನ್ನು, ವಿವಿಧ ವಿಭಾಗಗಳ ಮುಖ್ಯಸ್ಥರನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ರಾಜಕೀಯ ವಾತಾವರಣವು ಭಿನ್ನವಾಗಿದೆ, ‘ಇಂಡಿಯಾ’ ಮೈತ್ರಿಕೂಟದಲ್ಲಿನ ಒಗ್ಗಟ್ಟಿನ ಕಾರಣದಿಂದಾಗಿ ಎನ್‌ಡಿಎ ಮೈತ್ರಿಕೂಟದಲ್ಲಿ ತಳಮಳ ಉಂಟಾಗಿದೆ ಎಂದು ಖರ್ಗೆ ಹೇಳಿದ್ದಾರೆ. ‘ಕಳೆದ ಕೆಲವು ತಿಂಗಳುಗಳಲ್ಲಿ ನಾವು ಶ್ರಮವಹಿಸಿ ಕೆಲಸ ಮಾಡಿದ್ದೇವೆ. ಪರಿಸ್ಥಿತಿ ಪೂರಕವಾಗಿ ಇಲ್ಲದಿದ್ದಾಗಲೂ ವಿಧಾನಸಭಾ ಚುನಾವಣೆಗಳಲ್ಲಿ ನಾವು ಬಿಜೆಪಿ ಪಡೆದಿದ್ದಕ್ಕಿಂತ ಹೆಚ್ಚು ಮತಗಳನ್ನು ಪಡೆದಿದ್ದೇವೆ. ಆದರೆ ನಿರೀಕ್ಷೆಯಷ್ಟು ಸ್ಥಾನಗಳು ನಮಗೆ ಬಂದಿಲ್ಲ...’ ಎಂದು ಹೇಳಿದ್ದಾರೆ.

> ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತನ್ನು ಶುಭ ಕೋರಲು ಮತ್ತು ಚಪ್ಪಾಳೆ ತಟ್ಟಲು ಇರುವ ವೇದಿಕೆಯನ್ನಾಗಿ ಪರಿವರ್ತಿಸಿದ್ದಾರೆ. ಪ್ರಮುಖ ಸಂಗತಿಗಳನ್ನು ಹೇಳಲು ಉಳಿದಿರುವ ಒಂದೇ ಮಾರ್ಗ ಜನರ ಮುಂದೆ ಹೋಗುವುದು
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ ಭಾರತ್ ಜೋಡೊ ನ್ಯಾಯ ಯಾತ್ರೆಯನ್ನು ಸಾರ್ವಜನಿಕರಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಲು ಬಳಸಿಕೊಳ್ಳಬೇಕು ಎಂದು ಕರೆ ನೀಡಿದ್ದಾರೆ.

ಮೋದಿ ನೇತೃತ್ವದ ಸರ್ಕಾರದ 10 ವರ್ಷಗಳ ವೈಫಲ್ಯಗಳು ಜನರಿಗೆ ಗೊತ್ತಾಗಬೇಕು. ಅವುಗಳನ್ನು ಜನರ ಮುಂದೆ ಇರಿಸಬೇಕು. ಶ್ರೀಮಂತರು ಹಾಗೂ ಬಡವರ ನಡುವಿನ ಅಂತರ ಹೆಚ್ಚಾಗುತ್ತಿರುವುದು, 45 ವರ್ಷಗಳ ಅತಿಹೆಚ್ಚಿನ ನಿರುದ್ಯೋಗ ಪ್ರಮಾಣಕ್ಕೆ ಸಂಬಂಧಿಸಿದ ಪ್ರಶ್ನೆಗಳು ತೆರೆಮರೆಯಲ್ಲೇ ಉಳಿದುಬಿಡಬಾರದು ಎಂದಿದ್ದಾರೆ.

# ‘ಕಾಂಗ್ರೆಸ್ ಹಿಂದೂ ವಿರೋಧಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಹಿಂದೂ ವಿರೋಧಿ ಎಂದು ಬಿಜೆಪಿ ಹೇಳಿದೆ. ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಆಹ್ವಾನವನ್ನು ಕಾಂಗ್ರೆಸ್ ತಿರಸ್ಕರಿಸಿದ್ದನ್ನು ಪಕ್ಷ ಟೀಕಿಸಿದೆ.

ಕೇಂದ್ರ ಸಚಿವರುಗಳಾದ ಅನುರಾಗ್ ಠಾಕೂರ್, ಸ್ಮೃತಿ ಇರಾನಿ, ಹರ್ದೀಪ್‌ಸಿಂಗ್ ಪುರಿ ಕಾಂಗ್ರೆಸ್‌ನ ನಿರ್ಧಾರವನ್ನು ಖಂಡಿಸಿದ್ದಾರೆ.

‘ಕಾರ್ಯಕ್ರಮವನ್ನು ಕಾಂಗ್ರೆಸ್ ಬಹಿಷ್ಕರಿಸಿರುವುದು ಜನರು ಆ ಪಕ್ಷವನ್ನು ಬಹಿಷ್ಕರಿಸುವಂತೆ ಮಾಡಲಿದೆ’ ಎಂದು ವಾರ್ತಾ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ.

’ಆ ಪಕ್ಷ ಯಾವಾಗಲೂ ಸನಾತನ ಧರ್ಮದ ವಿರುದ್ಧ ನಿಂತಿದೆ. ರಾಮಸೇತುವನ್ನು ವಿರೋಧಿಸಿದೆ ಮತ್ತು ಹಿಂದೂಗಳು ಮೂಲಭೂತವಾದಿಗಳು ಎಂದು ಆರೋಪಿಸಿದೆ– ಈ ಬೆಳವಣಿಗೆ ಹೊಸತೇನಲ್ಲ. ಇಂದು ಕಾಂಗ್ರೆಸ್ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಬಹಿಷ್ಕರಿಸಿದೆ’ ಎಂದು ಅವರು ವರದಿಗಾರರಿಗೆ ತಿಳಿಸಿದ್ದಾರೆ.

ದೆಹಲಿ ವಿಶ್ವ ಹಿಂದೂ ಪರಿಷತ್‌ನ ದೆಹಲಿ ಘಟಕದ ಅಧ್ಯಕ್ಷ ಕಪಿಲ್ ಖನ್ನಾ ಅವರು, ರಾಜಕೀಯವನ್ನು ಕಾಂಗ್ರೆಸ್ ಒಂದು ದಿನದ ಮಟ್ಟಿಗೆ ಬದಿಗಿಡಬೇಕು. ‘ನಾವು ಎಲ್ಲ ಪ್ರಮುಖ ವ್ಯಕ್ತಿಗಳನ್ನು ಆಹ್ವಾನಿಸಿದ್ದೇವೆ ಮತ್ತು ಕಾರ್ಯಕ್ರಮದ ವಿವರ ನೀಡಿದ್ದೇವೆ. ಕೆಲವರು ಒಪ್ಪಿದ್ದಾರೆ. ಕೆಲವರು ಆಹ್ವಾನವನ್ನು ತಿರಸ್ಕರಿಸಿದ್ದಾರೆ. ಕಾಂಗ್ರೆಸ್ ತನ್ನ ರಾಜಕೀಯವನ್ನು ಈ ತಿಂಗಳ 21ರವರೆಗೆ ಮಾಡಲಿ. ಮತ್ತೆ 23ರಿಂದ ಅದನ್ನು ಪುನರಾರಂಭಿಸಲಿ. 22ನೇ ತಾರೀಖಿನ ದಿನವನ್ನು ರಾಮನಿಗೆ ಮೀಸಲಾಗಿಡಲಿ’ ಎಂದು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

> ರಾಮನನ್ನು ಕಾಲ್ಪನಿಕ ವ್ಯಕ್ತಿ ಎಂದು ಬಣ್ಣಿಸಿದ್ದು, ಬಾಬರಿ ಮಸೀದಿಯನ್ನು ಪುನರ್‌ನಿರ್ಮಾಣ ಮಾಡುವ ಬಗ್ಗೆ ಹೇಳಿದ್ದು, ಪ್ರಕರಣದಲ್ಲಿ ರಾಮಲಲ್ಲಾ ವಿರುದ್ಧ ವಕೀಲರನ್ನು ನೇಮಿಸಿದ್ದು ಇದೇ ಕಾಂಗ್ರೆಸ್. ಮುಂಬರುವ ದಿನಗಳಲ್ಲಿ ದೇಶದ ಜನರು ಆ ಪಕ್ಷವನ್ನು ಬಹಿಷ್ಕರಿಸುವುದು ಖಚಿತ
> **ಅನುರಾಗ್ ಠಾಕೂರ್**
> ಕೇಂದ್ರ ವಾರ್ತಾ ಸಚಿವ

ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳಿಗೆ ಆಹ್ವಾನ ಹೋಗಿದೆ. ಕಾಂಗ್ರೆಸ್‌ನ ಮೂವರಿಗೆ ಆಹ್ವಾನ ನೀಡಲಾಗಿತ್ತು ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ರಾಮನನ್ನು ವಿರೋಧಿಸುತ್ತದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಪ್ರತಿಕ್ರಿಯೆ ನೀಡಿದ್ದಾರೆ.

‘ಕಾಂಗ್ರೆಸ್‌ನ ರಾಮ– ವಿರೋಧಿ ಮುಖವು ದೇಶದ ಮುಂದಿದೆ. ಪಕ್ಷವು ರಾಮನು ಕಾಲ್ಪನಿಕ ವ್ಯಕ್ತಿ ಎಂದು ಕೋರ್ಟ್‌ನಲ್ಲಿ ಪ್ರಮಾಣಪತ್ರ ಸಲ್ಲಿಸಿತ್ತು. ಈಗ ರಾಮಮಂದಿರದ ಪ್ರಾಣ ಪ್ರತಿಷ್ಠಾಪನೆಯ ಆಹ್ವಾನವನ್ನು ತಿರಸ್ಕರಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಎಲ್ಲಾ ಭಕ್ತರಿಗೆ ಇದು ಶ್ರದ್ಧಾಭಕ್ತಿಯ ದಿನ. ಇದನ್ನು ಅವರು ತಿರಸ್ಕರಿಸಿದ್ದಾರೆ’ ಎಂದು ಹೇಳಿದ್ದಾರೆ.

# ಮಹಾರಾಷ್ಟ್ರದಲ್ಲಿ ಎನ್‌ಡಿಎ ಮುನ್ನಡೆಸಲಿರುವ ಶಿಂದೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಎನ್‌ಡಿಎ ಭಾಗವಾಗಿರುವ ಬಿಜೆಪಿ, ಶಿವಸೇನಾ, ಎನ್‌ಸಿಪಿ (ಅಜಿತ್ ಬಣ) ಒಳಗೊಂಡ ಮಹಾಯುತಿ ಮೈತ್ರಿಕೂಟವನ್ನು ಮುಂಬರಲಿರುವ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಮುನ್ನಡೆಸಲಿದ್ದಾರೆ.


ಏಕನಾಥ ಶಿಂದೆ

ಇದೇವೇಳೆ, ಶಿವಸೇನಾ (ಯುಟಿಬಿ) ಅಧ್ಯಕ್ಷ ಉದ್ಧವ್ ಠಾಕ್ರೆ ಅವರು ತಮ್ಮ ಪಕ್ಷದ ನಾಯಕರನ್ನು ಮುಂಬರಲಿರುವ ಚುನಾವಣೆಗಳಿಗಾಗಿ ಸಜ್ಜುಗೊಳಿಸಬೇಕಿದೆ. ಜೊತೆಗೆ ಪಕ್ಷವನ್ನು ಮರುಸಂಘಟಿಸುವ ಮತ್ತು ಕಾನೂನು ಹೋರಾಟ ಮಾಡುವ ಹೊಣೆಗಾರಿಕೆಯೂ ಅವರ ಮೇಲಿದೆ.

ಉದ್ಧವ್ ಠಾಕ್ರೆ ಅವರ ಬಣವು ತಮ್ಮ ಪಕ್ಷಕ್ಕೆ ಹೊಸ ಹೆಸರು (ಶಿವಸೇನಾ ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಪಡೆಯಲು ಮತ್ತು ಅದನ್ನು ಚುನಾವಣಾ ಆಯೋಗದಲ್ಲಿ ನೋಂದಾಯಿಸಿ, ತನ್ನ ಆಯ್ಕೆಯ ‘ಉರಿಯುತ್ತಿರುವ ದೀವಟಿಗೆ’ ಚಿಹ್ನೆಯನ್ನು ಪಡೆಯಲು ಈಗ ಶ್ರಮವಹಿಸಬೇಕು.

ಶಿಂದೆ ನೇತೃತ್ವದ ಬಣವೇ ನಿಜವಾದ ಶಿವಸೇನಾ ಎಂದು ಮಹಾರಾಷ್ಟ್ರ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ನೀಡಿರುವ ಆದೇಶದ ಕುರಿತು ಪ್ರತಿಕ್ರಿಯಿಸಿರುವ ಶಿಂದೆ, ‘ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲಕ್ಕೆ ಮಹತ್ವವಿದೆ. ಈ ಆದೇಶವು ಸ್ವಜನ ಪಕ್ಷಪಾತದ ವಿರುದ್ಧದ ಗೆಲುವು’ ಎಂದಿದ್ದಾರೆ.

**ಠಾಕ್ರೆ ಕಿಡಿ:** ನಾರ್ವೇಕರ್ ಅವರ ತೀರ್ಮಾನವನ್ನು ‘ಪ್ರಜಾಪ್ರಭುತ್ವದ ಕಗ್ಗೊಲೆ’ ಮತ್ತು ‘ಸಂಚು’ ಎಂದು ಉದ್ಧವ್ ಕರೆದಿದ್ದಾರೆ.

’ಚುನಾವಣೆಗೆ ಮೊದಲು ಈ ವಿಷಯವನ್ನು ಇತ್ಯರ್ಥಪಡಿಸುವಂತೆ ನಾವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡುತ್ತೇವೆ. ಶಿವಸೇನಾ ಕೊನೆಗೊಳ್ಳುವುದಿಲ್ಲ, ಜನರು ಅವರ (ಶಿಂಧೆ) ಶಿವಸೇನಾವನ್ನು ಒಪ್ಪಿಕೊಳ್ಳುವುದಿಲ್ಲ. ಈ ಆದೇಶವು ಪೂರ್ವ ನಿರ್ಧರಿತವಾದದ್ದು. ಈಚೆಗೆ ಸ್ಪೀಕರ್ ಅವರು ಮುಖ್ಯಮಂತ್ರಿ ಅವರನ್ನು ಭೇಟಿಯಾದಾಗಲೇ ಇದು ಸ್ಪಷ್ಟವಾಗಿತ್ತು’ ಎಂದು ಉದ್ಧವ್ ಪ್ರತಿಕ್ರಿಯಿಸಿದ್ದಾರೆ.

ಉದ್ಧವ್ ಅವರ ಮಗ ಆದಿತ್ಯ ಠಾಕ್ರೆ ಅವರು, ‘ಈ ಆದೇಶ ನಾಚಿಕೆಗೇಡಿತನದ್ದು. ಇದು ಪ್ರಜಾಪ್ರಭುತ್ವವನ್ನು ಕೊಲೆಗೈದಿದೆ. ದೇಶದ್ರೋಹಿಗಳ ಆಡಳಿತವು ಡಾ. ಅಂಬೇಡ್ಕರ್ ಅವರು ರೂಪಿಸಿದ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂಬುದು ಸ್ಪಷ್ಟವಾಗಿದೆ. ಪ್ರಜಾಪ್ರಭುತ್ವವನ್ನು ಹತ್ತಿಕ್ಕಿ ಸಂವಿಧಾನವನ್ನು ಪುನರ್ ರಚಿಸಲು ಅವರು ಬಯಸಿದ್ದಾರೆ. ಪ್ರಜಾಪ್ರಭುತ್ವವನ್ನು ಪುನರ್‌ಸ್ಥಾಪಿಸಲು ಮತ್ತು ಸಂವಿಧಾನವನ್ನು ರಕ್ಷಿಸಲು ನಾವು ಹೋರಾಡುತ್ತೇವೆ’ ಎಂದಿದ್ದಾರೆ.

ಎನ್‌ಸಿಪಿಯ ಮುಖ್ಯಸ್ಥ ಶರದ್ ಪವಾರ್ ಅವರು, ‘ಇದು ನ್ಯಾಯಾಂಗದ ಆದೇಶವಲ್ಲ ಆದರೆ ರಾಜಕೀಯದ್ದು. ನಾವು ಇದನ್ನು ರಾಜ್ಯದ ಜನರ ಬಳಿ ಒಯ್ಯುತ್ತೇವೆ’ ಎಂದಿದ್ದರೆ, ‘ಇದು ಅಸಾಂವಿಧಾನಿಕ, ಪ್ರಜಾಪ್ರಭುತ್ವ ವಿರೋಧಿ, ಪಕ್ಷದ ನಿಯಮಗಳಿಗೆ ವಿರುದ್ಧವಾದದ್ದು’ ಎಂದು ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ ಬಣ್ಣಿಸಿದ್ದಾರೆ.

## ಶಿವಸೇನಾ ಬಣ ಜಗಳ: ಘಟನಾವಳಿ

**2022**

- **21 ಜೂನ್**: ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ವಿರುದ್ಧ ಬಂಡಾಯವೆದ್ದ ಏಕನಾಥ ಶಿಂದೆ, **10**ಕ್ಕೂ ಹೆಚ್ಚು ಶಾಸಕರ ಜೊತೆ ಗುಜರಾತ್‌ಗೆ ಪ್ರಯಾಣ
- **22 ಜೂನ್**: ಬಂಡಾಯ ಶಾಸಕರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಅವರ ಜೊತೆಗೂಡಿ ಗುಜರಾತ್‌ನಿಂದ ಅಸ್ಸಾಂನ ಗುವಾಹಟಿಗೆ ತೆರಳಿದ ಶಿಂದೆ. ಅಧಿಕೃತ ನಿವಾಸ ‘ವರ್ಷಾ’ ತೊರೆದು ಖಾಸಗಿ ನಿವಾಸ ‘ಮಾತೋಶ್ರೀ’ಗೆ ತೆರಳಿದ ಉದ್ಧವ್ ಠಾಕ್ರೆ
- **24 ಜೂನ್**: ಶಿವಸೇನಾದ **39** ಶಾಸಕರು, ಪಕ್ಷೇತರ ಮತ್ತು ಚಿಕ್ಕ ಪಕ್ಷಗಳ **10** ಶಾಸಕರ ಬೆಂಬಲ ಇರುವುದಾಗಿ ಘೋಷಿಸಿದ ಶಿಂದೆ
- **25 ಜೂನ್**: ಶಿವಸೇನಾ ಶಾಸಕಾಂಗ ಪಕ್ಷದ ನಾಯಕ ಅಜಯ್ ಚೌಧರಿ ಆಜ್ಞೆ ಪಾಲಿಸದ ಕಾರಣ **16** ಶಾಸಕರನ್ನು ಅನರ್ಹಗೊಳಿಸಿದ ಉಪಸ್ಪೀಕರ್ ನರಹರಿ ಝಿರ್ವಾಲ್. ನರಹರಿ ಅವರ ವಿರುದ್ಧ ಇಬ್ಬರು ಪಕ್ಷೇತರ ಶಾಸಕರಿಂದ ಅವಿಶ್ವಾಸ ಗೊತ್ತುವಳಿ ಮಂಡನೆ
- **26 ಜೂನ್**: ಅನರ್ಹತೆ ಪ್ರಕ್ರಿಯೆ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಏಕನಾಥ ಶಿಂದೆ
- **28 ಜೂನ್**: ಉದ್ಧವ್ ಠಾಕ್ರೆ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಿದ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್
- **29 ಜೂನ್**: ಜೂನ್ **30**ರ ಒಳಗೆ ವಿಶ್ವಾಸಮತ ಕೇಳಬೇಕು ಮತ್ತು ಪಕ್ಷದ ಸದಸ್ಯಬಲ ಸಾಬೀತುಪಡಿಸಬೇಕು ಎಂದು ಆದೇಶಿಸಿದ ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ
- ಮಹಾವಿಕಾಸ ಅಘಾಡಿ ಸರ್ಕಾರದ ಸದಸ್ಯಪಕ್ಷಗಳಾದ ಕಾಂಗ್ರೆಸ್, ಎನ್‌ಸಿಪಿ ಜೊತೆ ಸಮಾಲೋಚನೆ ನಡೆಸದೇ ಮುಖ್ಯಮಂತ್ರಿ ಸ್ಥಾನಕ್ಕೆ ಉದ್ಧವ್ ಠಾಕ್ರೆ ರಾಜೀನಾಮೆ
- **30 ಜೂನ್**: ರಾಜ್ಯಪಾಲ ಕೋಶಿಯಾರಿ ಅವರನ್ನು ಭೇಟಿಯಾಗಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದ ಏಕನಾಥ ಶಿಂದೆ ಮತ್ತು ದೇವೇಂದ್ರ ಫಡಣವೀಸ್. ಕ್ರಮವಾಗಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ
- **1 ಜುಲೈ**: ಶಿವಸೇನಾದ **40** ಶಾಸಕರು ಮತ್ತು ಪಕ್ಷೇತರ ಹಾಗೂ ಚಿಕ್ಕ ಪಕ್ಷಗಳ **10** ಶಾಸಕರ ಬೆಂಬಲದೊಂದಿಗೆ ಸದಸ್ಯಬಲ ಸಾಬೀತುಪಡಿಸಿದ ಶಿಂದೆ
- **3 ಜುಲೈ**: ವಿಧಾನಸಭೆ ಸ್ಪೀಕರ್ ಆಗಿ ಆಯ್ಕೆ ಆದ ರಾಹುಲ್ ನಾರ್ವೇಕರ್
- **4 ಜುಲೈ**: ಶಿಂದೆ–ಫಡಣವೀಸ್ ಸರ್ಕಾರದಿಂದ ಬಹುಮತ ಸಾಬೀತು. ಶಿವಸೇನಾ– ಬಿಜೆಪಿ ಸರ್ಕಾರದ ಪರವಾಗಿ **164** ಮತಗಳು ಮತ್ತು ವಿರುದ್ಧವಾಗಿ **99** ಮತಗಳ ಚಲಾವಣೆ
- **9 ಆಗಸ್ಟ್**: ಶಿಂದೆ ನೇತೃತ್ವದ ಸರ್ಕಾರದಿಂದ ಸಂಪುಟ ವಿಸ್ತರಣೆ. **18** ಶಾಸಕರು ಸಂಪುಟಕ್ಕೆ ಸೇರ್ಪಡೆ. ಒಟ್ಟು **20** ಸದಸ್ಯಬಲದ ಸಂಪುಟ ರಚನೆ

**2023**

- **17 ಫೆಬ್ರುವರಿ**: ಏಕನಾಥ ಶಿಂದೆ ಬಣವನ್ನೇ ನಿಜವಾದ ‘ಶಿವಸೇನಾ’ ಪಕ್ಷ ಎಂದು ಚುನಾವಣಾ ಆಯೋಗದಿಂದ ಅನುಮೋದನೆ, ಬಿಲ್ಲು ಮತ್ತು ಬಾಣದ ಗುರುತನ್ನು ಶಿಂದೆ ಬಣಕ್ಕೆ ನೀಡಿದ ಆಯೋಗ
- **11 ಮೇ**: ಬಹುಮತ ಸಾಬೀತುಪಡಿಸುವ ಮೊದಲೇ ಮುಖ್ಯಮಂತ್ರಿ ಸ್ಥಾನಕ್ಕೆ ಉದ್ಧವ್ ರಾಜೀನಾಮೆ ನೀಡಿರುವ ಕಾರಣ, ಅವರ ಮುಖ್ಯಮಂತ್ರಿ ಸ್ಥಾನ ಮರು ಸ್ಥಾಪಿಸಲು ಸಾಧ್ಯವಿಲ್ಲ ಎಂದ ಸುಪ್ರೀಂ ಕೋರ್ಟ್. ರಾಜ್ಯದ ಅಂದಿನ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರ ಕರ್ತವ್ಯಪಾಲನೆ ಕುರಿತು ‘ಸುಪ್ರೀಂ’ ಅಸಮಾಧಾನ
- **30 ಅಕ್ಟೋಬರ್**: ಶಿವಸೇನಾದ ಬಿರುಕಿನ ಕುರಿತು **2023**ರ ಡಿಸೆಂಬರ್ **31**ರ ಒಳಗೆ ಮತ್ತು ಎನ್‌ಸಿಪಿ ಬಿರುಕಿನ ಕುರಿತು **2024**ರ ಜನವರಿ **31**ರ ಒಳಗೆ ನಿರ್ಧಾರ ತೆಗೆದುಕೊಳ್ಳುವಂತೆ ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ಸುಪ್ರೀಂ ಕೋರ್ಟ್ ಸೂಚನೆ
- **15 ಡಿಸೆಂಬರ್**: ಶಿವಸೇನಾ ಬಿಕ್ಕಟ್ಟಿನ ಕುರಿತು ನಿರ್ಧರಿಸಲು ಜನವರಿ 1ರ ವರೆಗೆ ಕಾಲಾವಕಾಶ ಕೇಳಿದ ಸ್ಪೀಕರ್. ಅನುಮತಿ ನೀಡಿದ ಸುಪ್ರೀಂ ಕೋರ್ಟ್

**2024**

- **ಜ. 10**: ಶಿವಸೇನಾ ಶಾಸಕರ ಅನರ್ಹತೆ ಕುರಿತು ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಂದ ಆದೇಶ ಪ್ರಕಟ

## ಶಿಂದೆ ಶಿವಸೇನಾ ಮೇಲುಗೈ

ಒಂದನೇ ಪುಟದಿಂದ...

ಶಿಂದೆ ಅವರು ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಆಘಾಡಿ ಸರ್ಕಾರವನ್ನು ಉರುಳಿಸಿ, 2022ರ ಜೂನ್‌ನಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಬಿಜೆಪಿಯ ದೇವೇಂದ್ರ ಫಡಣವೀಸ್ ಅವರು ಶಿಂದೆ ನೇತೃತ್ವದ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾದರು.

ಆದೇಶವನ್ನು ಸುಮಾರು 105 ನಿಮಿಷಗಳಲ್ಲಿ ಓದಿ ಮುಗಿಸಿದ ನಾರ್ವೇಕರ್, ಪಕ್ಷದ ಸಂವಿಧಾನ, ನಾಯಕತ್ವದ ಸ್ವರೂಪ, ಎರಡೂ ಬಣಗಳು ಕೈಗೊಂಡ ನಿರ್ಧಾರಗಳು ಎಷ್ಟರಮಟ್ಟಿಗೆ ನ್ಯಾಯೋಚಿತವಾಗಿದ್ದವು ಎಂಬುದನ್ನು ಉಲ್ಲೇಖಿಸಿದರು.

ಶಿಂದೆ ಅವರು ಶಿವಸೇನಾ ಶಾಸಕಾಂಗ ಪಕ್ಷದ ನಾಯಕ ಎಂದು ಹೇಳಿರುವ ನಾರ್ವೇಕರ್, ‘ಉದ್ಧವ್ ಠಾಕ್ರೆ ಬಣದ ಸುನೀಲ್ ಪ್ರಭು ಅವರು 2022ರ ಜೂನ್ 21ರಿಂದ ಅನ್ವಯವಾಗುವಂತೆ ವಿಪ್ ಸ್ಥಾನ ಕಳೆದುಕೊಂಡಿದ್ದಾರೆ, ಶಿಂದೆ ಬಣದ ಭರತ್ ಗೋಗಾವಲೆ ಅವರು ವಿಪ್ ಆಗಿದ್ದಾರೆ’ ಎಂದು ಹೇಳಿದ್ದಾರೆ.

‘2022ರ ಜೂನ್ 21ರಂದು ಭಿನ್ನ ಬಣವೊಂದು ಹುಟ್ಟಿಕೊಂಡಾಗ, ಶಿಂದೆ ನೇತೃತ್ವದ ಬಣವೇ ನಿಜವಾದ ರಾಜಕೀಯ ಪಕ್ಷವಾಗಿತ್ತು... ಏಕನಾಥ ಶಿಂದೆ ಅವರು ಪಕ್ಷದ ನಾಯಕ ಆಗಿ ನೇಮಕ ಆಗಿದ್ದು ಕ್ರಮಬದ್ಧವಾಗಿಯೇ ಇದೆ’ ಎಂದು ನಾರ್ವೇಕರ್ ಹೇಳಿದ್ದಾರೆ.

1999ರಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಪಕ್ಷದ ಸಂವಿಧಾನವನ್ನು ಆಧರಿಸಿ ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ. 2018ರಲ್ಲಿ ತಿದ್ದುಪಡಿ ಮಾಡಲಾದ ಸಂವಿಧಾನವನ್ನು ಆಧರಿಸಿ ಅರ್ಜಿ ಇತ್ಯರ್ಥಪಡಿಸಬೇಕು ಎಂದು ಠಾಕ್ರೆ ಬಣ ಇರಿಸಿದ್ದ ಆಗ್ರಹವನ್ನು ಒಪ್ಪಿಕೊಳ್ಳಲು ಆಗದು. ಚುನಾವಣಾ ಆಯೋಗವು ನೀಡಿರುವ 1999ರ ಸಂವಿಧಾನವೇ ಪಕ್ಷದ ನಿಜವಾದ ಸಂವಿಧಾನ ಎಂದು ಸ್ಪೀಕರ್ ಹೇಳಿದ್ದಾರೆ.

1999ರ ಸಂವಿಧಾನವು ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ನಿರ್ಧಾರ ಕೈಗೊಳ್ಳುವ ವಿಚಾರದಲ್ಲಿ ಅತ್ಯುನ್ನತ ವ್ಯವಸ್ಥೆ ಎಂದು ಪರಿಗಣಿಸಿದೆ. ಪಕ್ಷದ ‘ಪ್ರಮುಖ’ ಸ್ಥಾನದಲ್ಲಿರುವವರಿಗೆ (ಪಕ್ಷದ ಅಧ್ಯಕ್ಷ) ಯಾವುದೇ ನಾಯಕನನ್ನು ವಜಾಗೊಳಿಸುವ ಅಧಿಕಾರ ಇಲ್ಲವೆಂದು ಸ್ಪೀಕರ್ ಹೇಳಿದ್ದಾರೆ.

### ‘ಇದು ಪಿತೂರಿ’

ಒಂದನೇ ಪುಟದಿಂದ...

‘ಈ ಆದೇಶವನ್ನು ದೆಹಲಿಯಿಂದ ರವಾನಿಸಲಾಗಿದೆ. ಇದನ್ನು ನಾವು ಒಪ್ಪುವುದಿಲ್ಲ. ಇದು ಕಾನೂನು ಮತ್ತು ಸಂವಿಧಾನಕ್ಕೆ ಅನುಗುಣವಾಗಿ ಇಲ್ಲ’ ಎಂದು ರಾವುತ್ ಹೇಳಿದ್ದಾರೆ.

ಇಟಲಿಯ ಸರ್ವಾಧಿಕಾರಿ ಬೆನಿಟೊ ಮುಸೊಲಿನಿಗೆ ಎದುರಾದಂತಹ ಅಂತ್ಯವೇ ಪಟಾಕಿ ಸಿಡಿಸುತ್ತಿರುವ ನಾಯಕರಿಗೂ ಆಗಲಿದೆ, ಜನ ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ರಾವುತ್ ಎಚ್ಚರಿಸಿದ್ದಾರೆ.

‘ಸಂಖ್ಯೆ ಮುಖ್ಯ’: ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂಖ್ಯೆಗಳು ಮುಖ್ಯವಾಗುತ್ತವೆ. ತಮ್ಮ ನೇತೃತ್ವದ ಶಿವಸೇನಾ ಪಕ್ಷಕ್ಕೆ ಹೆಚ್ಚಿನ ಸಂಖ್ಯಾಬಲ ಇದೆ ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.


**ತಾಲೀಮು** ನವದೆಹಲಿಯಲ್ಲಿ ಸಶಸ್ತ್ರ ಸೀಮಾ ಬಲದ (ಎಸ್‌ಎಸ್‌ಬಿ) ಮಹಿಳಾ ಸಿಬ್ಬಂದಿ ಗಣರಾಜ್ಯೋತ್ಸವದ ಪರೇಡ್‌ಗೆ ಬುಧವಾರ ತಾಲೀಮು ನಡೆಸಿದರು – ಪಿಟಿಐ ಚಿತ್ರ

## ಜ.14–25ರವರೆಗೆ ಮಹಾ ಯಜ್ಞ

ಅಯೋಧ್ಯೆ (ಪಿಟಿಐ): ಅಯೋಧ್ಯೆಯಲ್ಲಿ ಜನವರಿ 14 ರಿಂದ 25ರವರೆಗೆ ಮಹಾ ಯಜ್ಞ ನಡೆಯಲಿದೆ ಎಂದು ಕಾರ್ಯಕ್ರಮ ಆಯೋಜಕರು ಬುಧವಾರ ತಿಳಿಸಿದರು.

1008 ಶಿವಲಿಂಗಗಳನ್ನು ಸ್ಥಾಪಿಸಿ ‘ರಾಮ ನಾಮ ಮಹಾ ಯಜ್ಞ’ ನಡೆಸಲಾಗುತ್ತದೆ ಎಂದು ಹೇಳಿದರು.

ನೇಪಾಳಿ ಬಾಬಾ ಎಂದೇ ಪ್ರಸಿದ್ಧರಾಗಿರುವ ಆತ್ಮಾನಂದ ದಾಸ್ ಮಹಾತ್ಯಾಗಿ ಅವರು ಯಜ್ಞ ಆಯೋಜಿಸಿದ್ದಾರೆ.



## ಪ್ರಾಧ್ಯಾಪಕರ ಕೈ ಕತ್ತರಿಸಿದ ಪ್ರಕರಣ: ಆರೋಪಿ ಬಂಧನ

ತಿರುವನಂತಪುರ: ಕೇರಳದಲ್ಲಿ ಪ್ರಾಧ್ಯಾಪಕ ಪ್ರೊ.ಟಿ.ಜೆ.ಜೋಸೆಫ್ ಅವರ ಬಲ ಮುಂಗೈ ಕತ್ತರಿಸಿದ ಪ್ರಕರಣಕ್ಕೆ ಸಂಬಂಧಿಸಿ, 13 ವರ್ಷಗಳ ಬಳಿಕ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಬಂಧಿಸಿದೆ.

ಆರೋಪಿ ಸವಾದ್‌ನನ್ನು ಕಣ್ಣೂರಿನಿಂದ ಬಂಧಿಸಲಾಗಿದ್ದು, ಈತ ತನ್ನ ಗುರುತನ್ನು ಮರೆಮಾಚಿ ಮರಗೆಲಸ ಮಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ. ಈತ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ವಾಸಿಸುತ್ತಿದ್ದ ಎಂದೂ ವಿವರಿಸಿವೆ.

ಪ್ರಶ್ನೆ ಪತ್ರಿಕೆಯಲ್ಲಿ ಧರ್ಮನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ಇಡುಕ್ಕಿ ತೊಡುಪುಳದ ನ್ಯೂಮನ್ ಕಾಲೇಜಿನ ಮಲಯಾಳ ಪ್ರೊಫೆಸರ್ ಜೋಸೆಫ್ ಅವರ ಬಲದ ಕೈಯನ್ನು 2010ರಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಈಗ ನಿಷೇಧಿತ ಸಂಘಟನೆ) ಕಾರ್ಯಕರ್ತರು ಕತ್ತರಿಸಿದ್ದರು. ಸವಾದ್ ಕೇರಳ ತೊರೆದು ವಿದೇಶಕ್ಕೆ ಪರಾರಿಯಾಗಿರಬಹುದು ಎಂದು ಈ ಹಿಂದೆ ಶಂಕಿಸಲಾಗಿತ್ತು.

ಈ ಪ್ರಕರಣದ 19 ಅಪರಾಧಿಗಳಿಗೆ ನ್ಯಾಯಾಲಯ ಈ ಹಿಂದೆ ಶಿಕ್ಷೆ ವಿಧಿಸಿತ್ತು.


ವೈಬ್ರಂಟ್ ಗುಜರಾತ್ ಕಾರ್ಯಕ್ರಮದಲ್ಲಿ ಹೇಳಿಕೆ

# ವಿಶ್ವದ ಮಿತ್ರ ಭಾರತ: ಪ್ರಧಾನಿ

ಗಾಂಧಿನಗರ (ಪಿಟಿಐ): ಜಾಗತಿಕವಾಗಿ ಹಲವು ಅನಿಶ್ಚಿತತೆಗಳು ಇರುವಾಗ ಭಾರತವು ಭರವಸೆಯ ಹೊಸ ಆಶಾಕಿರಣವಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು. ವಿಶ್ವವು ಭಾರತವನ್ನು ಸ್ಥಿರತೆಯ ಮುಖ್ಯ ಸ್ತಂಭ ಎಂಬಂತೆ ಕಾಣುತ್ತಿದೆ ಎಂದರು.

ಜಾಗತಿಕ ವ್ಯವಸ್ಥೆಯು ತ್ವರಿತವಾಗಿ ಬದಲಾಗುತ್ತಿರುವ ಈ ಹೊತ್ತಿನಲ್ಲಿ ಭಾರತವು ವಿಶ್ವದ ಮಿತ್ರನಾಗಿ ಮುಂದಡಿ ಇರಿಸುತ್ತಿದೆ ಎಂದು ಅವರು ‘ವೈಬ್ರಂಟ್ ಗುಜರಾತ್ ಜಾಗತಿಕ ಸಮಾವೇಶ’ದಲ್ಲಿ ಹೇಳಿದರು.

‘ವಿಶ್ವವು ಇಂದು ಭಾರತವನ್ನು ಜನಕೇಂದ್ರಿತ ಅಭಿವೃದ್ಧಿಯಲ್ಲಿ ಹಾಗೂ ವಿಶ್ವದ ಒಳಿತಿನಲ್ಲಿ ನಂಬಿಕೆ ಇರಿಸಿರುವ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ದನಿಯಾಗಿರುವ, ಹೇಳಿದ್ದನ್ನು ಮಾಡಿ ತೋರಿಸುವ ಪ್ರಜಾತಂತ್ರ ವ್ಯವಸ್ಥೆ ಹೊಂದಿರುವ ನಂಬಿಕಸ್ಥ ಸ್ನೇಹಿತ ಎಂಬಂತೆ ಕಾಣುತ್ತಿದೆ’ ಎಂದು ಸಂತಸ ಹಂಚಿಕೊಂಡರು.


ವೈಬ್ರಂಟ್ ಗುಜರಾತ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜೆಕ್ ಗಣರಾಜ್ಯದ ಪ್ರಧಾನಿ ಪೆತ್ರ್ ಫಿಯಾಲ ಅವರಿಗೆ ಹಸ್ತಲಾಘವ ನೀಡಿದರು –ಪಿಟಿಐ ಚಿತ್ರ

ಮುಂದಿನ ಕೆಲವು ವರ್ಷಗಳಲ್ಲಿ ಭಾರತವು ವಿಶ್ವದ ಮೂರು ಮುಂಚೂಣಿ ಅರ್ಥವ್ಯವಸ್ಥೆಗಳ ಪೈಕಿ ಒಂದಾಗಿರಲಿದೆ ಎಂದು ಪ್ರಮುಖ ರೇಟಿಂಗ್ ಸಂಸ್ಥೆಗಳು ಹೇಳುತ್ತಿವೆ ಎಂದು ಹೇಳಿದ ಪ್ರಧಾನಿ, ದೇಶವು ಇದನ್ನು ಸಾಧಿಸಿ ತೋರಿಸಲಿದೆ ಎಂಬುದು ತಾವು ನೀಡುತ್ತಿರುವ ಗ್ಯಾರೆಂಟಿ ಎಂದರು.

**₹2 ಲಕ್ಷ ಕೋಟಿ ಹೂಡಿಕೆ:** ಮುಂದಿನ ಐದು ವರ್ಷಗಳಲ್ಲಿ ಗುಜರಾತ್‌ನಲ್ಲಿ ₹2 ಲಕ್ಷ ಕೋಟಿ ಹೂಡಿಕೆ ಮಾಡಲಾಗುವುದು ಎಂದು ಉದ್ಯಮಿ ಗೌತಮ್ ಅದಾನಿ ಹೇಳಿದರು. ಈ ಹೂಡಿಕೆಯಲ್ಲಿ ದೊಡ್ಡ ಮೊತ್ತವು ಪರಿಸರಸ್ನೇಹಿ ಇಂಧನ ಯೋಜನೆಗೆ ವಿನಿಯೋಗ ಆಗಲಿದೆ. ಈ ಮೊತ್ತದ ಹೂಡಿಕೆಯು ನೇರವಾಗಿ ಹಾಗೂ ಪರೋಕ್ಷವಾಗಿ 1 ಲಕ್ಷ ಉದ್ಯೋಗ ಸೃಷ್ಟಿಸಲಿದೆ ಎಂದು ಹೇಳಿದರು.

ಅದಾನಿ ಸಮೂಹವು ಗುಜರಾತ್‌ನ ಕಛ್ ಮರುಭೂಮಿಯ ರಣ್‌ನಲ್ಲಿ ವಿಶ್ವದ ಅತಿದೊಡ್ಡ ಪರಿಸರಸ್ನೇಹಿ ಇಂಧನ ಪಾರ್ಕ್ ನಿರ್ಮಿಸುತ್ತಿದೆ. 725 ಚದರ ಕಿ.ಮೀ. ಪ್ರದೇಶದಲ್ಲಿ ಹರಡಿಕೊಂಡಿರುವ ಇದು ಸೌರಶಕ್ತಿ ಬಳಸಿ 30 ಗಿಗಾವಾಟ್ ವಿದ್ಯುತ್ ಉತ್ಪಾದಿಸಲಿದೆ.

> 2014ರ ನಂತರ ದೇಶದ ಜಿಡಿಪಿ ಶೇಕಡ 185ರಷ್ಟು, ತಲಾ ಆದಾಯ ಶೇ 165ರಷ್ಟು ಏರಿದೆ. ಈ ಬೆಳವಣಿಗೆಗೆ ಸಾಟಿಯೇ ಇಲ್ಲ
> **ಗೌತಮ್ ಅದಾನಿ,** ಉದ್ಯಮಿ

ಮೋದಿ ಅವರನ್ನು ಪ್ರಶಂಸಿಸಿದ ಅದಾನಿ, ‘ಜಾಗತಿಕ ವೇದಿಕೆಗಳಲ್ಲಿ ಮಾತಿಗೆ ಅವಕಾಶ ಕೋರುತ್ತಿದ್ದ ದೇಶವನ್ನು ನೀವು (ಮೋದಿ) ಜಾಗತಿಕ ವೇದಿಕೆಗಳನ್ನು ಸೃಷ್ಟಿಸುತ್ತಿರುವ ದೇಶವನ್ನಾಗಿಸಿದ್ದೀರಿ’ ಎಂದರು.

‘ನಮ್ಮ ಪ್ರೀತಿಯ ನಾಯಕ ನರೇಂದ್ರ ಮೋದಿ ಅವರು ನಮ್ಮ ಕಾಲದ ಮಹಾನ್ ಜಾಗತಿಕ ನಾಯಕ ಆಗಿ ಹೊರಹೊಮ್ಮಿದ್ದಾರೆ. ಈ ದೇಶ ಕಂಡ ಅತ್ಯಂತ ಯಶಸ್ವಿ ಪ್ರಧಾನಿ ಅವರು’ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದರು.

### ಟಿ20 ಕ್ರಿಕೆಟ್: ಭಾರತ– ಅಫ್ಗಾನಿಸ್ತಾನ ಹಣಾಹಣಿ ಇಂದು • ರಶೀದ್ ಖಾನ್ ಅಲಭ್ಯ

# ರೋಹಿತ್ ಆಟದತ್ತ ಎಲ್ಲರ ನೋಟ

**ಮೊಹಾಲಿ (ಪಿಟಿಐ):** ರೋಹಿತ್ ಶರ್ಮಾ ಅವರು ಹದಿನಾಲ್ಕು ತಿಂಗಳುಗಳ ನಂತರ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ಕಣಕ್ಕೆ ಮರಳಲು ಮೊಹಾಲಿಯಲ್ಲಿ ವೇದಿಕೆ ಸಿದ್ಧವಾಗಿದೆ.

ಗುರುವಾರ ಇಲ್ಲಿ ನಡೆಯಲಿರುವ ಅಫ್ಗಾನಿಸ್ತಾನ ಎದುರಿನ ಮೊದಲ ಟಿ20 ಪಂದ್ಯದಲ್ಲಿ ರೋಹಿತ್ ನಾಯಕತ್ವದ ತಂಡ ಆಡಲಿದೆ.

ಈ ಸರಣಿಯ ಮೂಲಕ ರೋಹಿತ್ ಮತ್ತು ವಿರಾಟ್ ಕೊಹ್ಲಿ ಅವರಿಬ್ಬರೂ ಚುಟುಕು ಮಾದರಿಗೆ ಮರಳುತ್ತಿದ್ದಾರೆ. ಆದರೆ ಮೊದಲ ಪಂದ್ಯದಲ್ಲಿ ವಿರಾಟ್ ಆಡುತ್ತಿಲ್ಲ. ನಂತರದ ಎರಡು ಪಂದ್ಯಗಳಲ್ಲಿ ಆಡುವ ನಿರೀಕ್ಷೆ ಇದೆ. ರೋಹಿತ್ ಮತ್ತು ವಿರಾಟ್ ಅವರಿಬ್ಬರೂ ಎರಡು ವರ್ಷಗಳ ಹಿಂದೆ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಡಿದ್ದರು. ನಂತರ ಇಲ್ಲಿಯವರೆಗೂ ಅವರು ಟಿ20 ಸರಣಿಗಳಲ್ಲಿ ವಿಶ್ರಾಂತಿ ಪಡೆದಿದ್ದರು.

ರೋಹಿತ್ ಬಳಗದಲ್ಲಿ ಯುವ ಆಟಗಾರರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಐಪಿಎಲ್ ಮತ್ತು ಇತ್ತೀಚಿನ ಕೆಲವು ಅಂತರರಾಷ್ಟ್ರೀಯ ಸರಣಿಗಳಲ್ಲಿ ಮಿಂಚಿದ್ದ ರಿಂಕು ಸಿಂಗ್, ತಿಲಕ್ ವರ್ಮಾ, ಬೌಲರ್‌ಗಳಾದ ಆವೇಶ್ ಖಾನ್ ಮತ್ತು ಮುಕೇಶ್ ಕುಮಾರ್ ಅವರೂ ಈ ತಂಡದಲ್ಲಿದ್ದಾರೆ. ಅವರಿಗೂ ಆಯ್ಕೆಗಾರರ ಗಮನ ಸೆಳೆಯಲು ಇದು ಉತ್ತಮ ಅವಕಾಶವಾಗಿದೆ.

ಕೆ.ಎಲ್. ರಾಹುಲ್ ವಿಶ್ರಾಂತಿ ಪಡೆದಿರುವುದರಿಂದ ವಿಕೆಟ್‌ಕೀಪಿಂಗ್ ಹೊಣೆಯು ಯುವ ಆಟಗಾರ ಜಿತೇಶ್ ಶರ್ಮಾ ಅಥವಾ ಅನುಭವಿ ಸಂಜು ಸ್ಯಾಮ್ಸನ್ ಅವರ ಹೆಗಲಿಗೆ ಬೀಳಲಿದೆ. ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಆಯ್ಕೆಯಾಗಿಲ್ಲ. ಕುಲದೀಪ್ ಯಾದವ್, ರವಿ ಬಿಷ್ಣೋಯಿ, ವಾಷಿಂಗ್ಟನ್ ಸುಂದರ್ ಮತ್ತು ಅಕ್ಷರ್ ಪಟೇಲ್ ಅವರು ಸ್ಪಿನ್ ವಿಭಾಗದ ಹೊಣೆ ನಿಭಾಯಿಸುವರು.

ಮುಂದಿನ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಉತ್ತಮವಾಗಿ ಆಡುವವರನ್ನೂ ವಿಶ್ವಕಪ್ ತಂಡಕ್ಕೆ ಆಯ್ಕೆ ಮಾಡುವ ಸಾಧ್ಯತೆ ಇದೆ.

ಭಾರತ ತಂಡಕ್ಕ ಹೋಲಿಸಿದರೆ ಅನುಭವದ ಕೊರತೆ ಇರುವ ಅಫ್ಗಾನಿಸ್ತಾನ ತಂಡವನ್ನು ಯಾವುದೇ ಹಂತದಲ್ಲಿಯೂ ಹಗುರವಾಗಿ ಪರಿಗಣಿಸುವಂತಿಲ್ಲ. ಕಳೆದ ಟಿ20 ಮತ್ತು ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ ಅಫ್ಗಾನಿಸ್ತಾನ ತಂಡವು ಘಟಾನುಘಟಿ ತಂಡಗಳಿಗೆ ಸೋಲುಣಿಸಿತ್ತು. ಹಂತಹಂತವಾಗಿ ಬೆಳೆಯುತ್ತಿರುವ ತಂಡವು ಆತಿಥೇಯ ಭಾರತಕ್ಕೆ ಕಠಿಣ ಪೈಪೋಟಿಯೊಡ್ಡುವ ಛಲದಲ್ಲಿದೆ.

ಆದರೆ ಈ ತಂಡದ ಪ್ರಮುಖ ಸ್ಪಿನ್–ಆಲ್‌ರೌಂಡರ್ ರಶೀದ್ ಖಾನ್ ಅವರು ಗಾಯದಿಂದ ಚೇತರಿಸಿಕೊಂಡಿಲ್ಲ. ಆದರೆ ಕೀಪರ್–ಬ್ಯಾಟರ್ ರೆಹಮಾನುಲ್ಲಾ ಗುರ್ಬಾಜ್, ರೆಹಮತ್ ಶಾ, ಆಲ್‌ರೌಂಡರ್ ಮುಜೀಬ್ ಉರ್ ರೆಹಮಾನ್, ಅಜ್ಮತ್‌ವುಲ್ಲಾ ಒಮರ್‌ಝೈ, ನವೀನ್ ಉಲ್ ಹಕ್ ಮತ್ತು ನಾಯಕ ಇಬ್ರಾಹಿಂ ಝದ್ರಾನ್ ಅವರು ಉತ್ತಮವಾಗಿ ಆಡಬಲ್ಲರು.

**ಪಂದ್ಯ ಆರಂಭ: ರಾತ್ರಿ 7**
**ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನೆಮಾ**



ರೋಹಿತ್ ಶರ್ಮಾ –ಪಿಟಿಐ ಚಿತ್ರ



ಅಫ್ಗಾನಿಸ್ತಾನ ತಂಡದ ಇಬ್ರಾಹಿಂ ಝದ್ರಾನ್ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

### ಮೊದಲ ಪಂದ್ಯಕ್ಕೆ ವಿರಾಟ್ ಕೊಹ್ಲಿ ಇಲ್ಲ



ವಿರಾಟ್ ಕೊಹ್ಲಿ

'ರನ್ ಯಂತ್ರ' ವಿರಾಟ್ ಕೊಹ್ಲಿ ಅವರು ಅಫ್ಗಾನಿಸ್ತಾನ ಎದುರಿನ ಮೊದಲ ಪಂದ್ಯದಲ್ಲಿ ಆಡುತ್ತಿಲ್ಲ. 'ವೈಯಕ್ತಿಕ ಕಾರಣದಿಂದಾಗಿ ಅವರು ಈ ಪಂದ್ಯದಲ್ಲಿ ಆಡುತ್ತಿಲ್ಲ' ಎಂದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರೋಹಿತ್ ಅವರೊಂದಿಗೆ ಯಶಸ್ವಿ ಜೈಸ್ವಾಲ್ ಇನಿಂಗ್ಸ್ ಆರಂಭಿಸುವರು' ಎಂದೂ ತಿಳಿಸಿದರು.

### ಪ್ರಥಮ ದ್ವಿಪಕ್ಷೀಯ ಸರಣಿ

ಅಫ್ಗಾನಿಸ್ತಾನ ಮತ್ತು ಭಾರತ ತಂಡಗಳು ಮೊದಲ ಬಾರಿಗೆ ದ್ವಿಪಕ್ಷೀಯ ಟಿ20 ಕ್ರಿಕೆಟ್ ಸರಣಿ ಆಡಲಿವೆ. ಈ ಸರಣಿಯಲ್ಲಿ ಒಟ್ಟು ಮೂರು ಪಂದ್ಯಗಳು ನಡೆಯಲಿವೆ. ಇದುವರೆಗೆ ಉಭಯ ತಂಡಗಳು ಏಷ್ಯಾ ಕಪ್ ಮತ್ತು ವಿಶ್ವಕಪ್ ಟೂರ್ನಿಗಳಲ್ಲಿ ಮಾತ್ರ ಹಣಾಹಣಿ ನಡೆಸಿದ್ದವು. ಎರಡೂ ತಂಡಗಳು ಐದು ಬಾರಿ ಮುಖಾಮುಖಿಯಾಗಿವೆ. ನಾಲ್ಕರಲ್ಲಿ ಭಾರತ ಗೆದ್ದಿದೆ. ಒಂದು ಪಂದ್ಯ ರದ್ದಾಗಿತ್ತು. ಐದು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಅಫ್ಗಾನಿಸ್ತಾನ ತಂಡವು ತನ್ನ ಮೊದಲ ಟೆಸ್ಟ್ ಪಂದ್ಯದಲ್ಲಿ ಆಡಿತ್ತು.

### 'ಇಶಾನ್ ವಿಶ್ರಾಂತಿ ಕೋರಿದ್ದರು'



ರಾಹುಲ್ ದ್ರಾವಿಡ್

**ಮೊಹಾಲಿ (ಪಿಟಿಐ):** ವಿಕೆಟ್ ಕೀಪರ್ ಇಶಾನ್ ಕಿಶನ್ ಅವರನ್ನು 'ಅಶಿಸ್ತಿನ' ಕಾರಣಕ್ಕೆ ಟಿ20 ತಂಡಕ್ಕೆ ಆಯ್ಕೆ ಮಾಡಿಲ್ಲವೆಂಬುದು ಸುಳ್ಳು ಎಂದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಸ್ಪಷ್ಟಪಡಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಶಾನ್ ಕಿಶನ್ ಅವರು ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿದ್ದಾಗಲೇ ವಿಶ್ರಾಂತಿಗಾಗಿ ಮನವಿ ಮಾಡಿದ್ದರು. ಅವರ ನಿರ್ಧಾರವನ್ನು ಗೌರವಿಸಿದ್ದೇವೆ. ಅವರ ಮನವಿಗೆ ಸ್ಪಂದಿಸಿದ್ದೇವೆ. ಆದ್ದರಿಂದ ಅವರು ಅಫ್ಗಾನಿಸ್ತಾನ ಎದುರಿನ ಸರಣಿಗೆ ಆಯ್ಕೆಗೆ ಲಭ್ಯರಿರಲಿಲ್ಲ' ಎಂದು ಹೇಳಿದರು.

'ಇಶಾನ್ ಅವರಿಗೆ ಭಾರತ ತಂಡಕ್ಕೆ ಮರಳುವ ಹಾದಿ ಮುಚ್ಚಿಲ್ಲ. ಈ ಸರಣಿಯಿಂದ ತಾವಾಗಿಯೇ ಹಿಂದೆ ಸರಿದಿದ್ದಾರೆ. ಮತ್ತೆ ಆಯ್ಕೆಗೆ ಲಭ್ಯರಾಗುವ ಅವಕಾಶ ಬರಬಹುದು. ಅವರು ದೇಶಿ ಕ್ರಿಕೆಟ್‌ನ ಪಂದ್ಯಗಳನ್ನು ಆಡಬೇಕು' ಎಂದರು.

'ಶ್ರೇಯಸ್ ಅಯ್ಯರ್ ಅವರನ್ನು ಆಯ್ಕೆಗೆ ಪರಿಗಣಿಸದಿರುವುದಕ್ಕೂ ಆಶಿಸ್ತಿನ ಕ್ರಮಕ್ಕೂ ಸಂಬಂಧವಿಲ್ಲ. ಅವರು ಅವಕಾಶ ತಪ್ಪಿಸಿಕೊಂಡಿದ್ದಾರೆ ಅಷ್ಟೇ. ತಂಡದಲ್ಲಿ ಬಹಳಷ್ಟು ಬ್ಯಾಟರ್‌ಗಳು ಇದ್ದಾರೆ' ಎಂದರು.

ಶ್ರೇಯಸ್ ಅವರು ಮುಂಬೈ ರಣಜಿ ತಂಡವನ್ನು ಸೇರಿಕೊಂಡಿದ್ದಾರೆ.

# ತಲೈವಾಸ್‌ಗೆ ಕೊನೆಗೂ ಜಯ

### ಪ್ರೊ ಕಬಡ್ಡಿ ಲೀಗ್: ಟೈ ಪಂದ್ಯದಲ್ಲಿ ಮುಂಬೈ– ಹರಿಯಾಣ

**ಮುಂಬೈ:** ಏಳು ಪಂದ್ಯಗಳ ಸೋಲಿನ ನಂತರ ತಮಿಳು ತಲೈವಾಸ್ ಪ್ರೊ ಕಬಡ್ಡಿ ಲೀಗ್‌ನಲ್ಲಿ ಗೆಲುವನ್ನು ದಾಖಲಿಸಿತು. ನರೇಂದರ್ ಅವರು ಅಮೋಘ ರೈಡಿಂಗ್ ನೆರವಿನಿಂದ ಬುಧವಾರ ನಡೆದ ಪಂದ್ಯದಲ್ಲಿ ತಲೈವಾಸ್ ತಂಡ 46–27 ಪಾಯಿಂಟ್‌ಗಳಿಂದ ಯು.ಪಿ. ಯೋಧಾಸ್ ತಂಡವನ್ನು ಸುಲಭವಾಗಿ ಸೋಲಿಸಿತು.

ನರೇಂದರ್ 11 ಟಚ್ ಪಾಯಿಂಟ್ ಸೇರಿದಂತೆ 14 ಪಾಯಿಂಟ್ಸ್ ಕಲೆಹಾಕಿದರು. ಏಳನೇ ನಿಮಿಷವೇ ಮೊದಲ ಬಾರಿ ಆಲೌಟ್ ಸೇರಿದಂತೆ ಯೋಧಾಸ್ ತಂಡ ಪಂದ್ಯದಲ್ಲಿ ಒಟ್ಟು ಮೂರು ಸಲ ಆಲೌಟ್ ಆಯಿತು. ಕ್ಯಾಚಿಂಗ್‌ನಲ್ಲಿ ಸಾಗರ್ ಮತ್ತು ಸಾಹಿಲ್ ಕ್ರಮವಾಗಿ ಆರು ಮತ್ತು ಐದು ಪಾಯಿಂಟ್ ತಂದಿತ್ತರು. ಪಾಯಿಂಟ್ ಪಟ್ಟಿಯಲ್ಲಿ ಯೋಧಾಸ್ (21 ಅಂಕ) 10ನೇ ಸ್ಥಾನದಲ್ಲಿದ್ದರೆ, ತಲೈವಾಸ್ (19 ಅಂಕ) 11ನೇ ಸ್ಥಾನದಲ್ಲಿದೆ.

**ರೋಚಕ ಟೈ:** ಯು ಮುಂಬಾ ಮತ್ತು ಹರಿಯಾಣ ಸ್ಟೀಲರ್ಸ್ ನಡುವಣ ದಿನದ ಎರಡನೇ ಪಂದ್ಯ 44–44ರಲ್ಲಿ ಸಮಬಲದಲ್ಲಿ ಮುಕ್ತಾಯಗೊಂಡಿತು. ಮುಂಬಾ ಪರ ಆಲ್‌ರೌಂಡರ್, ಇರಾನ್‌ನ ಅಮೀರ್ ಮೊಹಮ್ಮದ್ ಝಫರ್ ದಾನೇಶ್ 14 ಪಾಯಿಂಟ್ ಗಳಿಸಿದರು. ಹರಿಯಾಣದ ಪರ ನಾಯಕ ಜೈದೀಪ್ ದಹಿಯಾ ಕ್ಯಾಚಿಂಗ್‌ನಲ್ಲಿ ಮಿಂಚಿದ್ದು ಎಂಟು ಪಾಯಿಂಟ್ ಕಲೆಹಾಕಿದರು. ರೈಡರ್‌ಗಳಾದ ಚಂದ್ರನ್ ರಂಜಿತ್ ಮತ್ತು ಸಿದ್ಧಾರ್ಥ ದೇಸಾಯಿ ತಲಾ ಏಳು ಪಾಯಿಂಟ್ ಗಳಿಸಿದರು.

ಮುಂಬೈ (35 ಅಂಕ) ಐದನೇ ಮತ್ತು ಸ್ಟೀಲರ್ಸ್ (34 ಅಂಕ) ಆರನೇ ಸ್ಥಾನದಲ್ಲಿವೆ.



ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಯುಪಿ ಯೋಧಾಸ್ ಮತ್ತು ತಮಿಳು ತಲೈವಾಸ್ ನಡುವೆ ಹಣಾಹಣಿ

### ಕ್ರಿಕೆಟಿಗ ಲಮಿಚಾನೆಗೆ ಎಂಟು ವರ್ಷ ಜೈಲು



**ಕಠ್ಮಂಡು (ಎಎಫ್‌ಪಿ):** ಅತ್ಯಾಚಾರ ಪ್ರಕರಣದಲ್ಲಿ ದೋಷಿಯಾದ ನೇಪಾಳ ಕ್ರಿಕೆಟ್ ತಂಡದ ಮಾಜಿ ನಾಯಕ ಸಂದೀಪ್ ಲಮಿಚಾನೆ ಅವರಿಗೆ ಇಲ್ಲಿನ ನ್ಯಾಯಾಲಯ ಬುಧವಾರ ಎಂಟು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

23 ವರ್ಷದ ಲೆಗ್‌ಸ್ಪಿನ್ನರ್ ಲಮಿಚಾನೆ ಅವರು ಒಂದು ಕಾಲದಲ್ಲಿ ನೇಪಾಳ ಕ್ರಿಕೆಟ್‌ಗೆ ಪ್ರಸಿದ್ಧಿ ತಂದುಕೊಟ್ಟಿದ್ದರು.

ಲಮಿಚಾನೆ ಅವರಿಗೆ ₹1,85,000 ಮೊತ್ತವನ್ನು ದಂಡವಾಗಿ ಮತ್ತು ಇದರ ಜೊತೆಗೆ ₹1,25,000 ಮೊತ್ತವನ್ನು ಸಂತ್ರಸ್ತೆಗೆ ಮಾನಸಿಕ ಯಾತನೆಗೆ ಪರಿಹಾರವಾಗಿ ನೀಡುವಂತೆ ನ್ಯಾಯಾಲಯ ಆದೇಶಿಸಿದೆ.

## ಉದ್ದೀಪನ ಮದ್ದು ತಡೆಗೆ ಕ್ರಮ

**ಬೆಂಗಳೂರು(ಪಿಟಿಐ):** ಕ್ರೀಡಾಪಟುಗಳಲ್ಲಿ ಉದ್ದೀಪನ ಮದ್ದು ಸೇವನೆಯ ಪಿಡುಗು ಮಟ್ಟ ಹಾಕಲು ಜೆಎಸ್‌ಡಬ್ಲ್ಯು ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಸಂಸ್ಥೆಯು ವಿಶ್ವ ಉದ್ದೀಪನ ಮದ್ದು ತಡೆ ಘಟಕ (ವಾಡಾ) ಮತ್ತು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ಗಳೊಂದಿಗೆ ಕೈಜೋಡಿಸಲು ನಿರ್ಧರಿಸಿದೆ.

ಬಳ್ಳಾರಿಯಲ್ಲಿರುವ ಈ ಸಂಸ್ಥೆಯು ಕ್ರೀಡಾ ತರಬೇತಿ ಕೇಂದ್ರದಲ್ಲಿ ಈಚೆಗೆ ಉದ್ದೀಪನ ಮದ್ದು ಬಳಕೆ ಮಾಡಿದ್ದರೆನ್ನಲಾದ 23 ಆಟಗಾರರನ್ನು ಹೊರಹಾಕಿತ್ತು. ಕಳೆದ ಅಕ್ಟೋಬರ್‌ನಲ್ಲಿ ಬೇರೆ ಬೇರೆ ಕ್ರೀಡೆಗಳಲ್ಲಿ ಇರುವ ಅಥ್ಲೀಟ್‌ಗಳು ಇದರಲ್ಲಿದ್ದರು.

'ನಮ್ಮ ಕ್ಯಾಂಪಸ್‌ನಲ್ಲಿ ಕೆಲವು ಸಿರಿಂಜ್‌ಗಳು ಪತ್ತೆಯಾಗಿದ್ದವು ಮತ್ತು ಶಿಸ್ತು ಕ್ರಮವಾಗಿ ಕೆಲವು ಅಥ್ಲೀಟ್‌ಗಳನ್ನು ಇಲ್ಲಿಂದ ಹೊರಹಾಕಲಾಗಿತ್ತು. ನಮ್ಮ ಆಂತರಿಕ ನಿಯಮಗಳು ಕಟ್ಟುನಿಟ್ಟಾಗಿವೆ. ಅವುಗಳನ್ನು ಪಾಲಿಸುವುದು ಕಡ್ಡಾಯ' ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಶ್ದಿ ವಾರ್ಲೆ ಸುದ್ದಿಸಂಸ್ಥೆಗೆ ನೀಡಿರುವ ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಈ ಕ್ರಮದ ಮೂಲಕ ನಮ್ಮ ಸಂಸ್ಥೆಯು ನಿಯಮಗಳೊಂದಿಗೆ ರಾಜೀ ಮಾಡಿಕೊಳ್ಳುವುದಿಲ್ಲ ಮತ್ತು ತಪ್ಪು ನಡೆಯಲು ಆಸ್ಪದ ಕೊಡುವುದಿಲ್ಲ ಎಂಬ ಸಂದೇಶ ನೀಡಿದೆ. ಇಲ್ಲಿಯ ಅಥ್ಲೀಟ್‌ಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದೂ ಅವರು ಹೇಳಿದ್ದಾರೆ.

'ಜೆಎಸ್‌ಡಬ್ಲ್ಯು ಐಐಎಸ್ ದೇಶದ ಖ್ಯಾತನಾಮ ಅಥ್ಲೀಟ್‌ಗಳಿಗೆ ತರಬೇತಿ ನೀಡುತ್ತಿದೆ. ಆದ್ದರಿಂದ ಎಲ್ಲ ರೀತಿಯಿಂದಲೂ ಉತ್ತಮಗೊಳಿಸಲು ನಾಡಾ ಮತ್ತು ವಾಡಾದ ನೆರವು ಕೇಳಿದ್ದೇವೆ. ಅವರೊಂದಿಗೆ ಕಾರ್ಯನಿರ್ವಹಿಸುತ್ತೇವೆ' ಎಂದಿದ್ದಾರೆ.

### ಮಂಡ್ಯ ಓಪನ್: ಮೈಸೂರಿನ ಪ್ರಜ್ವಲ್‌ದೇವ್‌ಗೆ ನಿರಾಸೆ

# ಕರಣ್, ಶಶಿಕುಮಾರ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

**ಮಂಡ್ಯ:** ನಾಲ್ಕನೇ ಶ್ರೇಯಾಂಕದ ಶಶಿಕುಮಾರ್ ಮುಕುಂದ್ ಮತ್ತು ಉದಯೋನ್ಮುಖ ಆಟಗಾರ ಕರಣ್ ಸಿಂಗ್ ಅವರು ವಿಭಿನ್ನ ಶೈಲಿಯ ಗೆಲುವಿನೊಡನೆ, ಐಟಿಎಫ್ ಮಂಡ್ಯ ಓಪನ್ ಪುರುಷರ ಐಟಿಎಫ್ ಟೂರ್ನಿಯ ಪ್ರೀ- ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಪಿಇಟಿ ಟೆನಿಸ್ ಅಂಕಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ, 20 ವರ್ಷದ ಕರಣ್ ಸಿಂಗ್ ಬುಧವಾರ 3–6, 6–3, 6–2 ರಿಂದ ಏಳನೇ ಶ್ರೇಯಾಂಕದ ತೈಪೆಯ ತ್ಸುಂಗ್–ಹಾವೊ ಹುವಾಂಗ್ ಅವರಿಗೆ ಆಘಾತ ನೀಡಿದರು. ಅನುಭವಿ ಆಟಗಾರ ಶಶಿಕುಮಾರ್ ಇನ್ನೊಂದು ಪಂದ್ಯದಲ್ಲಿ 6–3, 6–4 ರಿಂದ ಸ್ವದೇಶದ ಕಬೀರ್ ಹನ್ಸ್ ಅವರನ್ನು ಸೋಲಿಸಲು ಹೆಚ್ಚು ಕಷ್ಟಪಡಲಿಲ್ಲ.

**ಪ್ರಜ್ವಲ್‌ಗೆ ನಿರಾಸೆ:** ಮೈಸೂರಿನ ಹುಡುಗ ಎಸ್.ಡಿ. ಪ್ರಜ್ವಲ್ ದೇವ್ ಇನ್ನೊಂದು ಪಂದ್ಯದಲ್ಲಿ ಕೊರಿಯಾದ ಯುನ್ಸಿಯೊಕ್ ಜಾಂಗ್ ಎದುರು ನಿರ್ಣಾಯಕ ಸೆಟ್‌ನಲ್ಲಿ ಮೂರು 'ಮ್ಯಾಚ್ ಪಾಯಿಂಟ್' ಕೈಚೆಲ್ಲಿ ನಿರಾಸೆ ಅನುಭವಿಸಬೇಕಾಯಿತು. ಮೂರು ಗಂಟೆಗೂ ಹೆಚ್ಚು ಕಾಲ ನಡೆದ ಹೋರಾಟದಲ್ಲಿ ಕೊರಿಯಾದ ಆಟಗಾರ 6-2, 5-7, 7-5 ರಿಂದ ಎಂಟನೇ ಶ್ರೇಯಾಂಕದ ಆಟಗಾರನ ವಿರುದ್ಧ ಗೆಲುವು ಸಾಧಿಸಿದರು.

ವಿಷ್ಣುವರ್ಧನ್ ಅವರು 6-3, 3-6, 6-4 ರಿಂದ ಆಸ್ಟ್ರಿಯಾದ ಡೇವಿಡ್ ಪಿಚ್ಲರ್ ಎದುರು ಗೆದ್ದರು. ಗುಜರಾತ್‌ನ ಮಾಧ್ವಿನ್ ಕಾಮತ್ 6-3, 7-6 (6) ರಲ್ಲಿ ನೇರ ಸೆಟ್‌ಗಳಿಂದ ಕಜಕಿಸ್ತಾನದ ಗ್ರಿಗೊರಿಯ್ ಅವರನ್ನು ಸೋಲಿಸಿದರು.

ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಥಿಜ್ಮೆನ್ ಲೂಫ್ ಅವರು 7-6 (5), 1-6, 6-1 ರಿಂದ ಆರನೇ ಶ್ರೇಯಾಂಕದ ಇಂಡೊನೇಷ್ಯಾದ ಎಂ. ರಿಫ್ಕಿ ಫಿತ್ರಿಯಾದಿ ಅವರನ್ನು ಪರಾಭವಗೊಳಿಸಿದರು. ಇತರ ಪಂದ್ಯಗಳಲ್ಲಿ ಒಫೆಕ್ ಶಿಮನೋವ್ (ಇಸ್ರೇಲ್) 6–2, 6–4 ರಿಂದ ಶಿವಾಂಕ್ ಭಟ್ನಾಗರ್ ವಿರುದ್ಧ, ಕ್ರಿಸ್ ವಾನ್ ವಿಕ್ (ದಕ್ಷಿಣ ಆಫ್ರಿಕಾ) 6–1, 7–6 (2) ರಿಂದ ಫೈಸಲ್ ಖಮರ್ ವಿರುದ್ಧ, ಒರೆಲ್ ಕಿಮ್ಹಿ 6–3, 4–6, 6–2 ರಿಂದ ರಿಷಭ್ ಅಗರವಾಲ್ ವಿರುದ್ಧ ಜಯಗಳಿಸಿದರು.

ದಿನದ ಕೊನೆಯ ಮೂರು ಪಂದ್ಯಗಳು ಮಂದ ಬೆಳಕಿನಿಂದಾಗಿ ಅರ್ಧದಲ್ಲೇ ಸ್ಥಗಿತಗೊಂಡವು.



ಭಾರತದ ಕರಣ್ ಸಿಂಗ್ ಆಟದ ವೈಖರಿ

# 26 ಆಟಗಾರರ ಭಾರತ ಹಾಕಿ ತಂಡದ ಆಯ್ಕೆ



ಮನದೀಪ್

**ನವದೆಹಲಿ (ಪಿಟಿಐ):** ಒಲಿಂಪಿಕ್ಸ್‌ಗೆ ಸುಮಾರು ಏಳು ತಿಂಗಳು ಇರುವಂತೆ ಭಾರತ ಹಾಕಿ ತಂಡಕ್ಕೆ ಆಟಗಾರರನ್ನು ಅಂತಿಮಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಉತ್ತಮ ಆಟಗಾರರನ್ನು ಆರಿಸಿಕೊಳ್ಳುವ ಉದ್ದೇಶದಿಂದ, ನಾಲ್ಕು ರಾಷ್ಟ್ರಗಳ ಟೂರ್ನಿಗಾಗಿ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಭಾರತವು 26 ಆಟಗಾರರ ದೊಡ್ಡ ತಂಡವನ್ನು ಕಳುಹಿಸಲಿದೆ.

ಕೇಪ್‌ಟೌನ್‌ನಲ್ಲಿ ಜನವರಿ 22ರಿಂದ ಟೂರ್ನಿ ನಡೆಯಲಿದೆ. ಫ್ರಾನ್ಸ್, ನೆದರ್ಲೆಂಡ್ಸ್ ಮತ್ತು ಆತಿಥೇಯ ದಕ್ಷಿಣ ಆಫ್ರಿಕಾ ಟೂರ್ನಿಯಲ್ಲಿ ಭಾಗವಹಿಸುವ ಇತರ ರಾಷ್ಟ್ರಗಳು.

ಮಾಜಿ ನಾಯಕ ಮನ್‌ಪ್ರೀತ್ ಸಿಂಗ್ ವಿರಾಮದ ನಂತರ ತಂಡಕ್ಕೆ ಮರಳಿದ್ದಾರೆ. ಹರ್ಮನ್‌ಪ್ರೀತ್ ಸಿಂಗ್ ತಂಡದ ನಾಯಕರಾಗಿದ್ದಾರೆ. ಎಫ್‌ಐಎಚ್ ವರ್ಷದ ಆಟಗಾರ ಹಾರ್ದಿಕ್ ಸಿಂಗ್ ಉಪನಾಯಕರಾಗಿದ್ದಾರೆ.

'ಒಲಿಂಪಿಕ್ ವರ್ಷದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಋತುವನ್ನು ಆರಂಭಿಸಲು ಕಾತರದಿಂದ ಇದ್ದೇವೆ. ಈ ಪ್ರವಾಸದಲ್ಲಿ ಗುಣಮಟ್ಟದ ತಂಡಗಳ ಎದುರು ಆಡುತ್ತಿದ್ದೇವೆ' ಎಂದು ಭಾರತ ತಂಡದ ಚೀಫ್ ಕೋಚ್ ಕ್ರೇಗ್ ಫುಲ್ಟನ್ ಹೇಳಿದರು.

**ತಂಡ ಹೀಗಿದೆ: ಗೋಲ್ ಕೀಪರ್ಸ್:** ಪಿ.ಆರ್.ಶ್ರೀಜೇಶ್, ಕ್ರಿಶನ್ ಬಹಾದ್ದೂರ್ ಪಾಠಕ್, ಪವನ್. **ಡಿಫೆಂಡರ್ಸ್:** ಜರ್ಮನ್‌ಪ್ರೀತ್ ಸಿಂಗ್, ಜುಗರಾಜ್ ಸಿಂಗ್, ಅಮಿತ್ ರೋಹಿದಾಸ್, ಹರ್ಮನ್‌ಪ್ರೀತ್ ಸಿಂಗ್, ವರುಣ್ ಕುಮಾರ್, ಸುಮಿತ್, ಸಂಜಯ್, ರಬಿಚಂದ್ರ ಸಿಂಗ್ ಮೊಯಿರಂಗ್ಥೆಮ್. **ಮಿಡ್‌ಫೀಲ್ಡರ್ಸ್:** ವಿವೇಕ್ ಸಾಗರ್ ಪ್ರಸಾದ್, ನೀಲಕಂಠ ಶರ್ಮ, ರಾಜಕುಮಾರ್ ಪಾಲ್, ಶಂಷೇರ್ ಸಿಂಗ್, ವಿಷ್ಣುಕಾಂತ್ ಸಿಂಗ್, ಹಾರ್ದಿಕ್ ಸಿಂಗ್, ಮನ್‌ಪ್ರೀತ್ ಸಿಂಗ್. **ಫಾರ್ವರ್ಡ್ಸ್:** ಮನದೀಪ್ ಸಿಂಗ್, ಅಭಿಷೇಕ್, ಸುಖಜೀತ್ ಸಿಂಗ್, ಗುರ್ಜಂತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಅಕ್ಷದೀಪ್ ಸಿಂಗ್, ಅರಿಜೀತ್ ಸಿಂಗ್ ಹುಂಡಲ್, ಬಾಬಿ ಸಿಂಗ್ ಧಾಮಿ.

### ಇಂಗ್ಲೆಂಡ್ ಲಯನ್ಸ್‌ಗೆ ದಿನೇಶ್ ಕಾರ್ತಿಕ್



**ಲಂಡನ್ (ಪಿಟಿಐ):** ಕ್ರಿಕೆಟಿಗ ದಿನೇಶ್ ಕಾರ್ತಿಕ್, ಇಂಗ್ಲೆಂಡ್ ಲಯನ್ಸ್ ತಂಡಕ್ಕೆ ಬ್ಯಾಟಿಂಗ್ ಸಲಹೆಗಾರರಾಗಿ ಕಾರ್ಯನಿರ್ವಹಿಸುವರು.

ಅಹಮದಾಬಾದಿನಲ್ಲಿ ಇದೇ 12ರಂದು ತಂಡವು ಆತಿಥೇಯರ ವಿರುದ್ಧ ಅಭ್ಯಾಸ ಪಂದ್ಯದಲ್ಲಿ ಆಡಲಿದೆ. ಇದೇ ತಾಣದಲ್ಲಿ 17ರಿಂದ ಮೂರು 'ಟೆಸ್ಟ್' ಗಳು ನಡೆಯಲಿವೆ.

### 14ರಿಂದ ಐಟಿಎಫ್ ಮಹಿಳಾ ಓಪನ್


**ಬೆಂಗಳೂರು:** ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ ವತಿಯಿಂದ ಇದೇ 14ರಿಂದ 21ರವರೆಗೆ ಐಟಿಎಫ್ ಮಹಿಳಾ ಓಪನ್‌ನ ಮೂರನೇ ಆವೃತ್ತಿಯನ್ನು ನಗರದಲ್ಲಿ ಆಯೋಜಿಸಲಾಗಿದೆ.

ಒಟ್ಟು ₹ 33 ಲಕ್ಷ ಬಹುಮಾನ ಮೊತ್ತ ಹೊಂದಿರುವ ಟೂರ್ನಿಯಲ್ಲಿ ಭಾರತದ ಒಂಬತ್ತು ಆಟಗಾರ್ತಿಯರು ಸೇರಿದಂತೆ 32 ಮಂದಿ ಸಿಂಗಲ್ಸ್ ವಿಭಾಗದಲ್ಲಿ ಪೈಪೋಟಿ ನಡೆಸಲಿದ್ದಾರೆ.

### ಆಸ್ಟ್ರೇಲಿಯಾ ಓಪನ್: ಜೊಕೊವಿಚ್, ಇಗಾ ಶ್ವಾಂಟೆಕ್‌ಗೆ ಅಗ್ರ ಶ್ರೇಯಾಂಕ



ಜೊಕೊವಿಚ್



ಇಗಾ ಶ್ವಾಂಟೆಕ್

**ಮೆಲ್ಬರ್ನ್ (ಎಪಿ):** ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ (ಸರ್ಬಿಯಾ) ಮತ್ತು ಇಗಾ ಶ್ವಾಂಟೆಕ್ (ಪೋಲೆಂಡ್) ಅವರಿಗೆ ಭಾನುವಾರ ಮೆಲ್ಬರ್ನ್ ಪಾರ್ಕ್‌ನಲ್ಲಿ ಆರಂಭವಾಗುವ ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಯಾದ ಆಸ್ಟ್ರೇಲಿಯಾ ಓಪನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕ ನೀಡಲಾಗಿದೆ.

ಪುರುಷರ ವಿಭಾಗದ ಶ್ರೇಯಾಂಕವು ಎಟಿಪಿ ರ‍್ಯಾಂಕಿಂಗ್ ಅನುಸಾರವಾಗಿ ಇದೆ. 2023ರ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಜೊಕೊವಿಚ್ ಅವರನ್ನು ಸೋಲಿಸಿದ ಏಕೈಕ ಆಟಗಾರ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಅವರು ಎರಡನೇ ಶ್ರೇಯಾಂಕ ಪಡೆದಿದ್ದಾರೆ. ಡೇನಿಯಲ್ ಮೆಡ್ವೆಡೆವ್ (ರಷ್ಯಾ), ಯಾನಿಕ್ ಸಿನ್ನರ್ (ಇಟಲಿ), ಆ್ಯಂಡ್ರೆ ರುಬ್ಲೇವ್ (ರಷ್ಯಾ), ಅಲೆಕ್ಸಾಂಡರ್ ಜ್ವರೇವ್ (ಜರ್ಮನಿ), ಸ್ಟಿಫಾನೊಸ್ ಸಿಸಿಪಸ್ (ಗ್ರೀಸ್), ಹೋಲ್ಗರ್ ರೂನ್ (ಡೆನ್ಮಾರ್ಕ್) ಕ್ರಮವಾಗಿ ಮೂರರಿಂದ ಎಂಟರವರೆಗಿನ ಶ್ರೇಯಾಂಕ ಪಡೆದಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಮೊದಲ ಎಂಟು ಆಟಗಾರ್ತಿಯರು ಡಬ್ಲ್ಯುಟಿಎ ರ‍್ಯಾಂಕಿಂಗ್ ಪ್ರಕಾರ ಶ್ರೇಯಾಂಕ ಪಡೆದಿದ್ದಾರೆ. ಬಾರ್ಬರಾ ಕ್ರೆಸಿಕೋವಾ (ಝೆಕ್ ರಿಪಬ್ಲಿಕ್) ಅವರು ಒಂಬತ್ತನೇ ಶ್ರೇಯಾಂಕಕ್ಕೆ ಬಡ್ತಿ ಪಡೆದಿದ್ದಾರೆ. 2023ರಲ್ಲಿ ಫ್ರೆಂಚ್ ಓಪನ್ ಫೈನಲ್ ತಲುಪಿದ್ದ ಝೆಕ್ ರಿಪಬ್ಲಿಕ್‌ನ ಕರೋಲಿನಾ ಮುಚೋವಾ ಗಾಯಾಳಾಗಿ ಈ ಟೂರ್ನಿಗೆ ಅಲಭ್ಯರಾಗಿರುವ ಕಾರಣ

ಅರಿನಾ ಸಬಲೆಂಕಾ (ಬೆಲಾರಸ್), ಎಲೆನಾ ರಿಬಾಕಿನಾ (ಕಜಕಸ್ತಾನ), ಕೊಕೊ ಗಫ್ (ಅಮೆರಿಕ), ಜೆಸಿಕಾ ಪೆಗುಲಾ (ಅಮೆರಿಕ), ಆನ್ಸ್ ಜೆಬರ್ (ಟ್ಯುನೀಷಿಯಾ), ಮರ್ಕೆತಾ ವೊಂದ್ರುಸೋವಾ (ಝೆಕ್ ರಿಪಬ್ಲಿಕ್), ಮರಿಯಾ ಸಕ್ಕರಿ (ಗ್ರೀಸ್) ಕ್ರಮವಾಗಿ ಎರಡರಿಂದ ಎಂಟರವರೆಗಿನ ಶ್ರೇಯಾಂಕ ಪಡೆದಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಶೂಟಿಂಗ್: ನ್ಯಾನ್ಸಿಗೆ ಚಿನ್ನ



ನ್ಯಾನ್ಸಿ

**ಜಕಾರ್ತ (ಪಿಟಿಐ):** ಭಾರತದ ಯುವ ಶೂಟರ್‌ಗಳಾದ ನ್ಯಾನ್ಸಿ ಮತ್ತು ಒಲಿಂಪಿಯನ್ ಎಲವೆನಿಲ್ ವಲರಿವನ್ ಅವರು ಬುಧವಾರ ಇಲ್ಲಿ ನಡೆದ ಏಷ್ಯನ್ ಕ್ವಾಲಿಫೈಯರ್‌ನಲ್ಲಿ ಮಹಿಳೆಯರ 10 ಮೀಟರ್ ಏರ್ ರೈಫಲ್‌ನಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕವನ್ನು ತಮ್ಮದಾಗಿಸಿಕೊಂಡರು.

ನ್ಯಾನ್ಸಿ ಫೈನಲ್ ಸ್ಪರ್ಧೆಯಲ್ಲಿ 252.8 ಅಂಕಗಳನ್ನು ಗಳಿಸಿ ಅಗ್ರಸ್ಥಾನವನ್ನು ಪಡೆದರು. ಎಲವೆನಿಲ್ (252.7) ಅವರು ಕೂದಲೆಳೆಯ ಅಂತರದಲ್ಲಿ ಚಿನ್ನವನ್ನು ಕಳೆದುಕೊಂಡರು. ಚೀನಾದ ಶೆನ್ ಯುಫಾನ್ ಕಂಚು ಗೆದ್ದರು.

### ಜೂನಿಯರ್ ಟೇಬಲ್ ಟೆನಿಸ್: ರಾಜ್ಯ ತಂಡದಲ್ಲಿ ತನಿಷ್ಕಾ

**ಬೆಂಗಳೂರು:** ಮಧ್ಯಪ್ರದೇಶದ ಇಂದೋರ್‌ನಲ್ಲಿ ಇದೇ 16ರಿಂದ 24ರವರೆಗೆ ನಡೆಯುವ 85ನೇ ಕೆಡೆಟ್ ಮತ್ತು ಸಬ್ ಜೂನಿಯರ್ ನ್ಯಾಷನಲ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಟೂರ್ನಿಗೆ ಕರ್ನಾಟಕ ರಾಜ್ಯ ತಂಡವನ್ನು ಪ್ರಕಟಿಸಲಾಗಿದೆ.

**ತಂಡಗಳು: 11 ವರ್ಷದೊಳಗಿನವರು:** ಬಾಲಕಿಯರು– ಮಹಿಕಾ ಆರ್. ಉಡುಪ, ಯುಕ್ತಾ ಹರ್ಷ. ಬಾಲಕರು– ಸುದರ್ಶನ್ ಎ. ರಾಜ್, ಅಂಕುಶ್ ಬಾಳಿಗಾ. **13 ವರ್ಷದೊಳಗಿನವರು:** ಬಾಲಕಿಯರು– ತನಿಷ್ಕಾ ಕಾಲಭೈರವ, ಅನೆಟ್ಟೆ ಮರಿಯಾನಾ, ರಾಶಿ ವಿ. ರಾವ್, ಐರಿನ್ ಅನ್ನಾ ಸುಭಾಷ್. ಬಾಲಕರು– ರೇಯಾನ್ಶ್ ಜಲನ್, ಅಮನ್ ಜಾರ್ಜ್ ಥಾಮಸ್, ವೇದಾಂತ್ ವಶಿಷ್ಠ, ತಮೋಘ್ನ. **15 ವರ್ಷದೊಳಗಿನವರು:** ಬಾಲಕಿಯರು– ಹಿಮಾನ್ವಿ ಚೌಧರಿ, ಹಿಯಾ ಸಿಂಗ್, ತನಿಷ್ಕಾ, ಆಯುಷಿ ಗೋಡ್ಸೆ. ಬಾಲಕರು– ತೆಶುಬ್ ದಿನೇಶ್, ಅಥರ್ವ ಎಂ.ನವರಂಗೆ, ಆರ್ಯ ಎ.ಜೈನ್, ಆರ್ನವ್ ನವೀನ್. **ಕೋಚ್/ಮ್ಯಾನೇಜರ್:** ಅಂಶುಮಾನ್ ರಾಯ್ (ಬಾಲಕರ ತಂಡ), ಸಂಗಮ್ ಬೈಲೂರು (ಬಾಲಕಿಯರ ತಂಡ).

### ಅಮನ್, ಹಿಮತೇಜ್ ಶತಕ

**ಮೈಸೂರು:** ಆತಿಥೇಯ ಕರ್ನಾಟಕ ಹಾಗೂ ಹೈದರಾಬಾದ್ ನಡುವೆ ಇಲ್ಲಿ ನಡೆದ ಸಿ.ಕೆ.ನಾಯ್ಡು ಟ್ರೋಫಿ 23 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯ ಬುಧವಾರ ನೀರಸ ಡ್ರಾನಲ್ಲಿ ಅಂತ್ಯಗೊಂಡಿತು.

ಹೈದರಾಬಾದ್ ಇನ್ನಿಂಗ್ಸ್ ಮುನ್ನಡೆ ಆಧಾರದಲ್ಲಿ ಮೂರು ಪಾಯಿಂಟ್ಸ್ ಪಡೆಯಿತುಕೊನೆಯ ಅವಧಿಯಲ್ಲಿ 366 ರನ್‌ಗಳ ಭಾರಿ ಗುರಿ ಬೆನ್ನತ್ತಿದ ಕರ್ನಾಟಕ 1 ವಿಕೆಟ್‌ಗೆ 28 ರನ್ ಗಳಿಸಿದ್ದ ವೇಳೆ ಮಂದ ಬೆಳಕಿನಿಂದಾಗಿ ಪಂದ್ಯ ಮುಕ್ತಾಯಗೊಳಿಸಲಾಯಿತು. ಹೈದರಾಬಾದ್ ತಂಡದ ಅಮನ್ ರಾವ್ (105), ನಾಯಕ ಕೆ.ಹಿಮತೇಜ್ (ಅಜೇಯ 166) ಶತಕ ಗಳಿಸಿ ಕೊನೆಯ ದಿನ ಗಮನಸೆಳೆದರು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನ್ನಿಂಗ್ಸ್: ಹೈದರಾಬಾದ್: 294; ಕರ್ನಾಟಕ: 281; ಎರಡನೇ ಇನ್ನಿಂಗ್ಸ್: ಹೈದರಾಬಾದ್: 96.2 ಓವರ್‌ಗಳಲ್ಲಿ 5 ವಿಕೆಟ್‌ಗೆ 353 ಡಿಕ್ಲೇರ್ (ಅಮನ್ ರಾವ್ 105, ಕೆ. ಹಿಮತೇಜ್ ಔಟಾಗದೇ 166, ಇಲ್ಯಾನ್ ಸಥಾನಿ ಔಟಾಗದೇ 50), ಕರ್ನಾಟಕ: 18 ಓವರ್‌ಗಳಲ್ಲಿ 1 ವಿಕೆಟ್‌ಗೆ 28.

### ತಲೆಗೆ ಚೆಂಡು ಬಡಿದು ವ್ಯಕ್ತಿ ಸಾವು

**ಮುಂಬೈ (ಪಿಟಿಐ):** ಸ್ಥಳೀಯ ಕ್ರಿಕೆಟ್ ಪಂದ್ಯವೊಂದರಲ್ಲಿ ಫೀಲ್ಡಿಂಗ್ ಮಾಡುವಾಗ ತಲೆಗೆ ಚೆಂಡು ಅಪ್ಪಳಿಸಿ 52 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಸೋಮವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಮಾತುಂಗಾದಲ್ಲಿರುವ ದಡ್ಕರ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಜಯೇಶ್ ಚುನ್ನಿಲಾಲ್ ಸವ್ಲಾ ಫೀಲ್ಡಿಂಗ್ ಮಾಡುತ್ತಿದ್ದರು. ಆದರೆ ಅದೇ ಮೈದಾನದಲ್ಲಿ ಇನ್ನೊಂದು ಪಂದ್ಯ ನಡೆಯುತ್ತಿತ್ತು. ಆ ಪಂದ್ಯದಲ್ಲಿ ಆಟಗಾರ ಆಡಿದ್ದ ಚೆಂಡು ಜಯೇಶ್ ಅವರ ತಲೆಯ ಹಿಂಬದಿಗೆ ಅಪ್ಪಳಿಸಿತ್ತು.

ಪೆಟ್ಟು ತಿಂದ ಜಯೇಶ್ ನೆಲಕ್ಕೆ ಕುಸಿದರು. ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ವಿಜಯಪುರ: ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್

# ರಾಜಸ್ಥಾನಕ್ಕೆ ಕರ್ನಾಟಕ ಪೈಪೋಟಿ

• ಬಸವರಾಜ್ ಸಂಪಳ್ಳಿ

**ವಿಜಯಪುರ:** ರಾಜಸ್ಥಾನದ ಸೈಕ್ಲಿಸ್ಟ್‌ಗಳು ಇಲ್ಲಿನ ವಿಜಯಪುರ–ಸೋಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ನಡೆದ 28ನೇ ರಾಷ್ಟ್ರೀಯ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ ಎರಡನೇ ದಿನವೂ ಪಾರಮ್ಯ ಮೆರೆದರು. ಆದರೆ ಕೆಲವು ಸ್ಪರ್ಧೆಗಳಲ್ಲಿ ಕರ್ನಾಟಕದ ಸೈಕ್ಲಿಸ್ಟ್‌ಗಳು ಪೈಪೋಟಿ ನೀಡಿದರು.

ರಾಜಸ್ಥಾನ ಸ್ಪರ್ಧಿಗಳು 14 ವರ್ಷದೊಳಗಿನ ಬಾಲಕರ 20 ಕಿ.ಮೀ. ಟೀಮ್ ಟೈಮ್ ಟ್ರಯಲ್, 16 ವರ್ಷದೊಳಗಿನ ಬಾಲಕರ 30 ಕಿ.ಮೀ ಟೀಮ್ ಟೈಮ್ ಟ್ರಯಲ್, 18 ವರ್ಷದೊಳಗಿನ ಬಾಲಕರ 30 ಕಿ.ಮೀ ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ ಚಿನ್ನವನ್ನು ಮುಡಿಗೇರಿಸಿಕೊಂಡರು.

16 ವರ್ಷದೊಳಗಿನ ಬಾಲಕಿಯರ 20 ಕಿ.ಮೀ. ಟೀಮ್ ಟೈಮ್ ಟ್ರಯಲ್, 18 ವರ್ಷದೊಳಗಿನ ಬಾಲಕಿಯರ 30 ಕಿ.ಮೀ. ಟೀಮ್ ಟೈಮ್ ಟ್ರಯಲ್, 14 ವರ್ಷದೊಳಗಿನ ಬಾಲಕಿಯರ 15 ಕಿ.ಮೀ. ಟೀಮ್ ಟೈಮ್ ಟ್ರಯಲ್, 23 ವರ್ಷದೊಳಗಿನ ಪುರುಷರ 100 ಕಿ.ಮೀ ಮಾಸ್ಡ್ ಸ್ಟಾರ್ಟ್‌ನಲ್ಲಿ ಚಿನ್ನವನ್ನು ಬಾಚಿಕೊಂಡಿರುವ ಕರ್ನಾಟಕದ ಸೈಕ್ಲಿಸ್ಟ್‌ಗಳು ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದು, ರಾಜಸ್ಥಾನಕ್ಕೆ ತೀವ್ರ ಪೈಪೋಟಿ ಒಡ್ಡಿದ್ದಾರೆ.

**ಫಲಿತಾಂಶಗಳು: 65 ಕಿ.ಮೀ. ಮಿಕ್ಸೆಡ್ ಟೀಮ್ ರಿಲೆ:** ಭಾರತೀಯ ರೈಲ್ವೇ (ಮಂಜೀತಕುಮಾರ, ವೆಂಕಪ್ಪ ಕೆಂಗಲಗುತ್ತಿ, ಪರಮಾರಾಮ್, ಮೋನಿಕಾ ಜಾಟ್, ಮೇಘಾ ಗೂಗಾಡ, ದಾನಮ್ಮ ಚಿಚಖಂಡಿ, ಕಾಲ: 1ಗಂ.28ನಿ.03.653ಸೆ)-1, ರಾಜಸ್ಥಾನ (ಸುಧೀರಕುಮಾರ, ಮಾನವ ಸರ್ದಾ, ಶರವಣ ಸಾದ, ಕವಿತಾ ಸೀಯಾಗ್, ರಿಂಕು, ಪೂಜಾ ಲೇಗಾ, ಕಾಲ: 1ಗಂ.28ನಿ.59.447 ಸೆ)-2, ಕರ್ನಾಟಕ (ರಾಜು ಭಾಟಿ, ಅನಿಲ ಕಾಳಪ್ಪಗೋಳ, ಪ್ರತಾಪ ಪಡಚಿ, ಚೈತ್ರಾ ಬೋರ್ಜಿ, ಸೌಮ್ಯ ಅಂತಾಪುರ, ಕಾವೇರಿ ಮುರನಾಳ, 1ಗಂ30ನಿ:04:677ಸೆ)-3.

**16 ವರ್ಷದೊಳಗಿನ ಬಾಲಕಿಯರ 20 ಕಿ.ಮೀ. ಟೀಮ್ ಟೈಮ್ ಟ್ರಯಲ್:** ಕರ್ನಾಟಕ (ಛಾಯಾ ನಾಗಶೆಟ್ಟಿ, ಜ್ಯೋತಿ ರಾಠೋಡ, ಕೋಕಿಲಾ ಚವ್ಹಾಣ, ಕಾಲ: 30ನಿ23.751ಸೆ)-1, ರಾಜಸ್ಥಾನ (ಅಂಜಲಿ ಜಕಾರ, ಶಿವಾನಿ, ರುಕ್ಮಾಣಿ ಜಾನಿ, ಕಾಲ: 40ನಿ:30.408ಸೆ)-2, ಹರಿಯಾಣ (ಭೂಮಿಕಾ, ವಂಶಿಕಾ, ಅಗ್ರಿಮಾ ಸಂಧು, ಕಾಲ: 40ನಿ:38.293ಸೆ)-3.

**23 ವರ್ಷದೊಳಗಿನ ಪುರುಷರ 100 ಕಿ.ಮೀ ಮಾಸ್ಡ್ ಸ್ಟಾರ್ಟ್:** ಉದಯ ಗುಳೇದ (ಕರ್ನಾಟಕ, 2ಗಂ:28ನಿ:56.019ಸೆ)–1, ಪ್ರಣವ ಕಾಂಬಳೆ (ಮಹಾರಾಷ್ಟ್ರ, 2ಗಂ.28ನಿ.57.710 ಸೆ)–2, ರಿತೇಶ್ (ಹರಿಯಾಣ, 2ಗಂ.29ನಿ.54.315 ಸೆ)–3.

**16 ವರ್ಷದೊಳಗಿನ ಬಾಲಕರ 30 ಕಿ.ಮೀ ಟೀಮ್ ಟೈಮ್ ಟ್ರಯಲ್:** ರಾಜಸ್ಥಾನ (ರಾಧೇಕೃಷ್ಣ ಹೂಡಾ, ಶೌರ್ಯ ಶೇರನ್, ಮಹಾವೀರ ಶರಣ್, ಕಾಲ: 39ನಿ.05.044 ಸೆ)-1, ಹರಿಯಾಣ (ಮನೀಶ್ ನೆಹರಾ, ಅಂಗಾಡ ಸಿಂಗ್, ಮಯಾಂಕ, ಕಾಲ: 40ನಿ:17.537 ಸೆ)-2, ಕರ್ನಾಟಕ (ನಿತೀಶ್ ಪೂಜಾರಿ, ಯಲ್ಲೇಶ ಹುಡೇದ, ಅರವಿಂದ ರಾಠೋಡ್, ಕಾಲ: 40ನಿ:24:383 ಸೆ)-3.

**18 ವರ್ಷದೊಳಗಿನ ಬಾಲಕರ 30 ಕಿ.ಮೀ ವೈಯಕ್ತಿಕ ಟೈಮ್ ಟ್ರಯಲ್:** ಕೇತಾ ರಾಮ್ (ರಾಜಸ್ಥಾನ, ಕಾಲ: 39ನಿ.53.319 ಸೆ)–1, ಕೈಲಾಶ್ ಜಕಾರ (ರಾಜಸ್ಥಾನ, 40ನಿ.11.997 ಸೆ)–2, ಜೈದೋರ್ಗಾ (ಚಂಡೀಗಢ, ಕಾಲ: 40ನಿ.37.420 ಸೆ)–3



ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ 23 ವರ್ಷದೊಳಗಿನ ಪುರುಷರ 100 ಕಿ.ಮೀ.ಮಾಸ್ ಸ್ಟಾರ್ಟ್‌ನಲ್ಲಿ ಗುರಿಯತ್ತ ಮುನ್ನುಗ್ಗುತ್ತಿರುವ ಸೈಕ್ಲಿಸ್ಟ್‌ಗಳು –ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

### ಬ್ಯಾಡ್ಮಿಂಟನ್: ಪ್ರಣಯ್ ನಿರ್ಗಮನ, ಚಿರಾಗ್– ಸಾತ್ವಿಕ್ ಜೋಡಿಗೆ ಜಯ



ಪ್ರಣಯ್

**ಕ್ವಾಲಾಲಂಪುರ (ಪಿಟಿಐ):** ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಗೆಲುವಿನೊಡನೆ ಅಭಿಯಾನ ಆರಂಭಿಸಿದರು. ಆದರೆ ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಎಚ್.ಎಸ್. ಪ್ರಣಯ್ ಮೊದಲ ಸುತ್ತನ್ನು ದಾಟಲಾಗಲಿಲ್ಲ.

ವಿಶ್ವದ ಎರಡನೆ ನಂಬರ್ ಜೋಡಿಯಾದ ಸಾತ್ವಿಕ್– ಚಿರಾಗ್ ಮೊದಲ ಸುತ್ತಿನಲ್ಲಿ ಇಂಡೊನೇಷ್ಯಾದ ಮುಹಮ್ಮದ್ ಶೊಹಿಬುಲ್ ಫಿಕ್ರಿ– ಮೌಲಾನಾ ಬಗಾಸ್ ಅವರಿಂದ ಹೋರಾಟ ಎದುರಿಸಿದರೂ ಅಂತಿಮವಾಗಿ 21–18, 21–19 ರಲ್ಲಿ ನೇರ ಆಟಗಳಿಂದ ಪಂದ್ಯ ಗೆದ್ದರು. ಫಿಕ್ರಿ–ಬಗಾಸ್ ಅವರು ವಿಶ್ವಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿದ್ದಾರೆ.

ಇನ್ನೊಂದೆಡೆ ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಪ್ರಣಯ್ 43 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಡೆನ್ಮಾರ್ಕ್‌ನ ಆ್ಯಂಡರ್ಸ್ ಅಂಟೊನ್ಸೆನ್ ಎದುರು 14–21, 11–21ರಲ್ಲಿ ಸೋಲನುಭವಿಸಿದರು. ಅಂಟೊನ್ಸೆನ್ ಪ್ರಣಯ್ ಅವರಿಗಿಂತ ಒಂದು ಕ್ರಮಾಂಕ ಕೆಳಗಿದ್ದಾರೆ.